
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಆಗಸ್ಟ್ 7 ಗುರುವಾರ 2025
ಸಂಪುಟ: 46 | ಸಂಚಿಕೆ: 112 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರೇಣುಕಾಸ್ವಾಮಿ ಹತ್ಯೆ ಪ್ರಕರಣ; ಆರೋಪಿಗಳ ಜಾಮೀನು ರದ್ದಿಗೆ ಸುಪ್ರೀಂನಲ್ಲಿ ಸರ್ಕಾರದ ಪ್ರಬಲ ವಾದ





- ಸುಪ್ರೀಂಕೋರ್ಟ್‌ಗೆ ಲಿಖಿತ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಕೆ
- ಬೆನ್ನು ನೋವು ಚಿಕಿತ್ಸೆ ನೆಪ ಹೇಳಿ ಜಾಮೀನು ಪಡೆದು ಚಿತ್ರೀಕರಣದಲ್ಲಿ ಭಾಗಿ: ಪ್ರಮುಖ ಸಾಕ್ಷ್ಯಾಧಾರ ಆಧರಿಸಿ ಅಫಿಡವಿಟ್ ಮಂಡನೆ
- ದರ್ಶನ್ ಪಾತ್ರದ ಬಗ್ಗೆ ಯಾವ ಸಾಕ್ಷ್ಯವೂ ಇಲ್ಲ: ದರ್ಶನ್ ಪರ ವಕೀಲರ ವಾದ
- ನನ್ನ ಮಗಳ ನೋಡಿಕೊಳ್ಳಬೇಕಿದೆ; ಪವಿತ್ರಾಗೌಡ ಮನವಿ

ನವದೆಹಲಿ,ಆ.6–ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 24ರಂದು ನಡೆದ ಕೊನೆಯ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿ ಜೆ.ಬಿ.ಪರ್ದಿವಾಲಾ, ನ್ಯಾಯಮೂರ್ತಿ ಆರ್.ಮಹದೇವನ್ ಅವರಿದ್ದ ಪೀಠ ನಿಮ್ಮ ವಾದ–ಪ್ರತಿವಾದವನ್ನು ಮೂರು ಪುಟಗಳಲ್ಲಿ ಸಂಕ್ಷಿಪ್ತವಾಗಿ ಒಂದು ವಾರದಲ್ಲಿ ಸಲ್ಲಿಸಿ ಎಂದು ಸೂಚಿಸಿದ್ದರು. ಅದರಂತೆ ಪವಿತ್ರಾಗೌಡ, ದರ್ಶನ್ ಮತ್ತು ಬೆಂಗಳೂರು ಪೊಲೀಸರ ಪರ ವಕೀಲರು ಲಿಖಿತ ರೂಪದಲ್ಲಿ ವಾದವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಪ್ರಕರಣದ ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸುವಂತೆ ಕೋರಿ ಕರ್ನಾಟಕ ಸರ್ಕಾರವು ಸುಪ್ರೀಂಕೋರ್ಟ್‌ಗೆ ಹೆಚ್ಚುವರಿ ಅಫಿಡವಿಟ್ ಸಲ್ಲಿಸಿದ್ದು, ಆರೋಪಿಗಳ ವಿರುದ್ಧ ಪ್ರಬಲ ಸಾಕ್ಷ್ಯಾಧಾರಗಳ ಸರಮಾಲೆಯನ್ನೇ ಮುಂದಿಟ್ಟಿದೆ.

ಮಿನಿ ವಿಚಾರಣೆ: ರಾಜ್ಯ ಸರ್ಕಾರದ ಪರ ವಕೀಲರು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಲಿಖಿತ ವಾದದಲ್ಲಿ ಹೈಕೋರ್ಟ್‌ನ ತೀರ್ಪು ದಾಖಲೆಗಳಿಗೆ ವಿರುದ್ಧವಾಗಿದೆ ಮತ್ತು ಜಾಮೀನು ವಿಚಾರಣೆಯ ಹಂತದಲ್ಲಿಯೇ 'ಮಿನಿ ವಿಚಾರಣೆ' ನಡೆಸಿದೆ ಎಂಬ ಆರೋಪ ಮಾಡಲಾಗಿದೆ.

ಪ್ರಬಲ ಪ್ರತ್ಯಕ್ಷ ಸಾಕ್ಷಿಗಳು: ರೇಣುಕಾಸ್ವಾಮಿಯನ್ನು ಅಪಹರಿಸಿ, ಬೆಂಗಳೂರಿನ ಪಟ್ಟಣಗೆರೆಯ ಶೆಡ್‌ಗೆ ಕರೆತರುವುದನ್ನು ಐವರು ಪ್ರತ್ಯಕ್ಷ ಸಾಕ್ಷಿಗಳು ಕಣ್ಣಾರೆ ಕಂಡಿದ್ದಾರೆ. ಕೊಲೆ ನಡೆದ ಸ್ಥಳಕ್ಕೆ ಆರೋಪಿಗಳು ಮತ್ತು ಮೃತ ರೇಣುಕಾಸ್ವಾಮಿ ಪ್ರವೇಶಿಸಿದ್ದಕ್ಕೆ ಇವರು ಸಾಕ್ಷಿಯಾಗಿದ್ದಾರೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಮಣ್ಣಿನ ಸಾಕ್ಷ್ಯ: ಕೊಲೆ ನಡೆದ ಸ್ಥಳದಿಂದ ಸಂಗ್ರಹಿಸಲಾದ ಮಣ್ಣಿನ ಮಾದರಿ ಮತ್ತು ಪ್ರಕರಣದ ಎರಡನೇ ಆರೋಪಿ ದರ್ಶನ್, ನಾಲ್ಕನೇ ಆರೋಪಿ ರಾಘವೇಂದ್ರ ಐದನೇ ಆರೋಪಿ ನಂದೀಶ್ ಮತ್ತು ಹನ್ನೊಂದನೇ ಆರೋಪಿ ನಾಗರಾಜು ಅವರ ಪಾದರಕ್ಷೆಗಳಲ್ಲಿದ್ದ ಮಣ್ಣಿನ ಮಾದರಿಗಳು ವಿಧಿವಿಜ್ಞಾನ ಪರೀಕ್ಷೆಯಲ್ಲಿ ಸಂಪೂರ್ಣವಾಗಿ ಹೊಂದಾಣಿಕೆಯಾಗಿವೆ. ಇದು ಆರೋಪಿಗಳು ಘಟನಾ ಸ್ಥಳದಲ್ಲಿದ್ದಿದ್ದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸುತ್ತದೆ.

ಸಾಕ್ಷ್ಯ ಪುರಸ್ಕರಿಸಿಲ್ಲ...

'ಕೊಲೆಗೆ ಬಳಸಿದ ಆಯುಧಗಳು ಮಾರಕವಲ್ಲ' ಎಂಬ ಹೈಕೋರ್ಟ್‌ನ ಅಭಿಪ್ರಾಯ ತಪ್ಪು. ಮೃತನ ದೇಹದ ಮೇಲಿದ್ದ 15ಕ್ಕೂ ಹೆಚ್ಚು ಗಂಭೀರ ಗಾಯಗಳೇ ಇದಕ್ಕೆ ಸಾಕ್ಷಿ. ಪ್ರಕರಣದ ಪ್ರಮುಖ ಸಾಕ್ಷಿ ಪುನೀತ್ ಎಂಬಾತನ ಹೇಳಿಕೆಯನ್ನು ತಡವಾಗಿ ದಾಖಲಿಸಲಾಗಿದೆ ಎಂಬ ಕಾರಣಕ್ಕೆ ಅನುಮಾನಿಸಿದ್ದು ಸರಿಯಲ್ಲ. ಆ ವಿಳಂಬಕ್ಕೆ ತನಿಖಾ ತಂಡವು ಸೂಕ್ತ ಕಾರಣಗಳನ್ನು ನೀಡಿದೆ. ಪ್ರಕರಣದಲ್ಲಿ ಲಭ್ಯವಿರುವ ಪ್ರಬಲ ವಿಧಿವಿಜ್ಞಾನ, ಎಲೆಕ್ಟ್ರಾನಿಕ್, ಸಿಡಿಆರ್ ಪುರಾವೆಗಳನ್ನು ಹೈಕೋರ್ಟ್ ಪರಿಗಣನೆಗೆ ತೆಗೆದುಕೊಂಡಿಲ್ಲ.

ರಕ್ತದ ಕಲೆಗಳು: ಡಿಎನ್‌ಎ ವಿಶ್ಲೇಷಣೆಯ ಪ್ರಕಾರ ರೇಣುಕಾಸ್ವಾಮಿಯ ರಕ್ತದ ಕಲೆಗಳು ಹಲವು ಆರೋಪಿಗಳ ಬಟ್ಟೆಗಳ ಮೇಲೆ ಪತ್ತೆಯಾಗಿವೆ. ಇದು ಕೊಲೆಯಲ್ಲಿ ಆರೋಪಿಗಳ ನೇರ ಪಾಲ್ಗೊಳ್ಳುವಿಕೆಗೆ ಪ್ರಮುಖ ಸಾಕ್ಷಿಯಾಗಿದೆ.

ಕೊಲೆಯಲ್ಲಿ ದರ್ಶನ್ ಮತ್ತು ಪವಿತ್ರಾ ಸಕ್ರಿಯ ಭಾಗಿ: ಹತ್ಯೆಯ ಸಂಚು ಮತ್ತು ಪ್ರಕ್ರಿಯೆ ಯಲ್ಲಿ ಮೊದಲ ಆರೋಪಿ ಪವಿತ್ರಾಗೌಡ ಮತ್ತು ಎರಡನೇ ಆರೋಪಿ ದರ್ಶನ್ ಇಬ್ಬರೂ ಸಕ್ರಿಯವಾಗಿ ಭಾಗಿಯಾಗಿದ್ದರು ಎಂದು ತನಿಖೆಯಿಂದ ಬಯಲಾಗಿದೆ. ದರ್ಶನ್ ಅವರ ಅಭಿಮಾನಿಯಾಗಿದ್ದ ರೇಣುಕಾಸ್ವಾಮಿ, ಪವಿತ್ರಾ ಗೌಡ ಅವರಿಗೆ ಇನ್‌ಸ್ಟಾಗ್ರಾಂನಲ್ಲಿ ಅವಹೇಳನಕಾರಿ ಸಂದೇಶ ಕಳುಹಿಸಿದ್ದೇ ಈ ಬರ್ಬರ ಕೃತ್ಯಕ್ಕೆ ಕಾರಣ ಎಂದು ಸರ್ಕಾರ ವಾದಿಸಿದೆ.

ದರ್ಶನ್‌ನ ಅಪರಾಧ ಹಿನ್ನೆಲೆ ಮತ್ತು ನಡವಳಿಕೆ: ಎರಡನೇ ಆರೋಪಿ ದರ್ಶನ್‌ಗೆ ಈ ಹಿಂದೆಯೂ ಅಪರಾಧ ಹಿನ್ನೆಲೆ ಇದೆ. ▶ 6ನೇ ಪುಟಕ್ಕೆ

ಯೂ ಟ್ಯೂಬರ್‌ಗಳ ಮೇಲೆ ಹಲ್ಲೆ
ಧರ್ಮಸ್ಥಳ ಉದ್ವಿಗ್ನ

ವಾಹನಗಳ ಜಖಂ, ಕಾರಿನ ಗಾಜು ಪುಡಿಪುಡಿ, ಯೂ ಟ್ಯೂಬರ್‌ಗಳಿಗೆ ಗಾಯ, ಕ್ಯಾಮರಾಗಳಿಗೂ ಹಾನಿ, ಗುಂಪು ಚದುರಿಸಲು ಲಾಠಿ ಪ್ರಹಾರ



ಧರ್ಮಸ್ಥಳದ ನೇತ್ರಾವತಿ ನದಿ ಬಳಿಯಿರುವ ಪಾಂಗಳ ಕ್ರಾಸ್‌ನಲ್ಲಿ ಯೂಟ್ಯೂಬ್‌ಗಾಗಿ ವಿಡಿಯೋ ಮಾಡುತ್ತಿದ್ದವರ ಮೇಲೆ ಗುಂಪೊಂದು ಹಲ್ಲೆ ಮಾಡಿದ್ದು, ಘಟನೆ ನಂತರ ಧರ್ಮಸ್ಥಳದಲ್ಲಿ ಪರಿಸ್ಥಿತಿ ಉದ್ಭವಿಸಿದೆ.

ಧರ್ಮಸ್ಥಳ, ಆ.6– ಧರ್ಮಸ್ಥಳದ ನೇತ್ರಾವತಿ ನದಿ ಬಳಿಯಿರುವ ಪಾಂಗಳ ಕ್ರಾಸ್‌ನಲ್ಲಿ ಯೂಟ್ಯೂಬ್ ವಿಡಿಯೋ ಮಾಡುತ್ತಿದ್ದವರ ಮೇಲೆ ಗುಂಪೊಂದು ಹಲ್ಲೆ ಮಾಡಿದ್ದು, ಘಟನೆ ನಂತರ ಧರ್ಮಸ್ಥಳ ಉದ್ವಿಗ್ನಗೊಂಡಿದೆ. ಈ ಪಾಂಗಳ ಗ್ರಾಮ ಧರ್ಮಸ್ಥಳದಲ್ಲಿ ಹತ್ಯೆಗೀಡಾದ ಸೌಜನ್ಯಾಳ ಗ್ರಾಮ.

ಇಲ್ಲಿ ಯೂಟ್ಯೂಬರ್‌ಗಳಾದ ಅಜಯ್, ಅಭಿಷೇಕ್, ಸಂತೋಷ್ ವಿಡಿಯೋ ಶೂಟ್ ಮಾಡುತ್ತಿದ್ದರು. ಆಗ ಸ್ಥಳಕ್ಕೆ ಬಂದ ಸ್ಥಳೀಯರು ಧರ್ಮಸ್ಥಳದ ಪ್ರತಿಷ್ಠಿತ ಕುಟುಂಬವೊಂದರ ಮೇಲೆ ಸುಳ್ಳು ಆರೋಪ ಮಾಡಿ ವಿಡಿಯೋ ಮಾಡುತ್ತಿದ್ದೀರಾ ಎಂದು ಹಲ್ಲೆ ಮಾಡಿದ್ದಾರೆ.

ಘರ್ಷಣೆಯಿಂದ ಕಾರು ಜಖಂಗೊಂಡಿದೆಯಲ್ಲದೆ ವ್ಯಾನೊಂದರ ಬಾಗಿಲು ಸೇರಿದಂತೆ ಇತರ ಭಾಗಗಳು ಹಾನಿಗೊಳಗಾಗಿದೆ. ಯೂಟ್ಯೂಬರ್‌ಗಳಿಗೆ ಗಾಯಗಳಾಗಿವೆ. ಕ್ಯಾಮರಾ ಜಖಂಗೊಂಡಿದೆ.

ಈ ಘಟನೆ ನಡೆದ ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ಪೊಲೀಸರು ಆಗಮಿಸಿದ್ದಾರೆ. ನಂತರ, ಅಲ್ಲಿ ಯೂಟ್ಯೂಬರ್‌ಗಳ ಮೇಲೆ ಹಲ್ಲೆ ನಡೆದ ಘಟನೆ ನಡೆಯುತ್ತಿದ್ದಂತೆ ಪರ–ವಿರೋಧ ಎರಡೂ ಕಡೆಯ ಜನರು ಗುಂಪು ಸೇರಿದ್ದಾರೆ. ಆಗ ಪೊಲೀಸರು ಎರಡೂ ಗುಂಪುಗಳನ್ನು ಚದುರಿಸಲು ಮುಂದಾಗಿದ್ದಾರೆ. ಆದರೂ, ಜನರು ಅಲ್ಲಿಂದ ತೆರಳದ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಚಾರ್ಜ್ ನಡೆಸಿ, ಜನರನ್ನು ಓಡಿಸಿದ್ದಾರೆ. ಸೌಜನ್ಯಾಪರ ಹೋರಾಟದಲ್ಲಿ ಗುರುತಿಸಿಕೊಂಡ ಈ ಯೂಟ್ಯೂಬರ್‌ಗಳು ಪಾಂಗಳ ಕ್ರಾಸ್‌ಗೆ ಬರುತ್ತಿದ್ದಂತೆ ಅಲ್ಲಿನ ಸ್ಥಳೀಯರು ಹಲ್ಲೆ ಮಾಡಿದ್ದ ಘಟನೆ ಇದೀಗ ಸುತ್ತಲಿನ ಗ್ರಾಮಗಳಲ್ಲಿ ▶ 6ನೇ ಪುಟಕ್ಕೆ

ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಅತಂತ್ರರಾಗಿರುವ ಕಾರ್ಮಿಕ ಬಾಂಧವರಿಗೆ ಹತ್ತು ಹಲವು ಸೌಲಭ್ಯ

- ಮೈಸೂರಲ್ಲಿ ಕಾರ್ಮಿಕ ಸಚಿವರಿಂದ ಅರ್ಹ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಣೆ
- 18ರಿಂದ 60 ವರ್ಷ ವಯೋಮಿತಿಯ 91 ವರ್ಗಗಳ 35 ಲಕ್ಷ ಕಾರ್ಮಿಕರು ಫಲಾನುಭವಿಗಳು

ಮೈಸೂರು, ಆ.6–ರಾಜ್ಯ ಸರ್ಕಾರದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಲಿಯು ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ 91 ವರ್ಗಗಳ ಸುಮಾರು 35 ಲಕ್ಷ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸುತ್ತಿದ್ದು, ಈ ಕಾರ್ಡ್ ಹೊಂದಿರುವ ಕಾರ್ಮಿಕರು ಹಲವಾರು ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಮೈಸೂರಿನ ಕಲಾಮಂದಿರದಲ್ಲಿ ಕಾರ್ಮಿಕ ಇಲಾಖೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್, ಅರ್ಹ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿದರು. ಸ್ಮಾರ್ಟ್ ಕಾರ್ಡ್ ಹೊಂದಿರುವವರು ಅಪಘಾತದಲ್ಲಿ ಸಾವನ್ನಪ್ಪಿದರೆ ಅವರ ನಾಮಿನಿಗೆ 1 ಲಕ್ಷ ರೂ. ಪರಿಹಾರ ನೀಡಲಾಗುವುದು. ▶ 2ನೇ ಪುಟಕ್ಕೆ



ಮೈಸೂರಿನ ಕಲಾಮಂದಿರದಲ್ಲಿ ಕಾರ್ಮಿಕ ಇಲಾಖೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಅರ್ಹ ಫಲಾನುಭವಿಗಳಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿದರು.

ನೋಂದಣಿ ಹೇಗೆ?

ಈ ಸ್ಮಾರ್ಟ್ ಕಾರ್ಡ್ ಹೊಂದುವವರು 18ರಿಂದ 70 ವರ್ಷ ವಯೋಮಿತಿಯವರಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಇರಬಾರದು. ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಅನ್ವಯಿಸುತ್ತದೆ. ಚಾಲಕರು ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಚಾಲನಾ ಪರವಾನಗಿ ಹೊಂದುವುದು ಕಡ್ಡಾಯ. ಮೊದಲ 3 ವರ್ಷದ ಅವಧಿಗೆ 50 ರೂ. ಶುಲ್ಕ, ಮುಂದಿನ 3 ವರ್ಷದ ಅವಧಿಗೆ 50 ರೂ. ನವೀಕೃತ ಶುಲ್ಕ ಪಾವತಿಸಬೇಕಾಗುತ್ತದೆ. ಈ ಎರಡೂ ಯೋಜನೆಗಳಿಗೂ ನೋಂದಣಿಯನ್ನು ksuwssb.karnataka.gov.in ಮೂಲಕ ನೋಂದಾಯಿಸಿಕೊಳ್ಳಬಹುದು. ಉಚಿತ ಸಹಾಯವಾಣಿ ಸಂಖ್ಯೆ 155214 ಅನ್ನು ಸಂಪರ್ಕಿಸಬಹುದು.

ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಪೆಟ್ರೋಲ್, ಡೀಸೆಲ್ ಮೇಲೆ ಹೆಚ್ಚುವರಿ ಸೆಸ್ ಹಾಕಿ

ಸಿಎಂ ಸಿದ್ದರಾಮಯ್ಯರಲ್ಲಿ ಮನವಿ; ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾಹಿತಿ

ಮೈಸೂರು,ಆ.6(ಎಸ್‌ಪಿಎನ್)–ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹೆಚ್ಚುವರಿ 50 ಪೈಸೆಯಿಂದ 1 ರೂ. ಸೆಸ್ ವಿಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಲಾಗಿದೆ ಎಂದು ಕಾರ್ಮಿಕ ಕಲ್ಯಾಣ ಸಚಿವ ಸಂತೋಷ ಎಸ್.ಲಾಡ್ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್‌ಕಾರ್ಡ್ ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೆಟ್ರೋಲ್, ಡೀಸೆಲ್ ಮೇಲೆ ಹೆಚ್ಚುವರಿ ಸೆಸ್ ಹಾಕುವ ಕೆಲಸ ಕಾರ್ಯಗತಗೊಂಡರೆ ಅಸಂಘಟಿತ ಕಾರ್ಮಿಕರಿಗೆ ಮತ್ತಷ್ಟು ಯೋಜನೆಗಳನ್ನು ಜಾರಿ ಮಾಡಲು ಅನುಕೂಲವಾಗುತ್ತದೆ ಎಂದರು.

ರಾಜ್ಯ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಹೆಚ್ಚುವರಿಯಾಗಿ 50 ಪೈಸೆಯಿಂದ 1 ರೂ. ಸೆಸ್ ವಿಧಿಸುವ ನಿರ್ಧಾರ ಕೈಗೊಂಡರೆ, ಈ ಸೆಸ್‌ನಿಂದ ಸಂಗ್ರಹವಾಗುವ ಹಣವನ್ನು ▶ 2ನೇ ಪುಟಕ್ಕೆ

ಸ್ಮಾರ್ಟ್ ಮೀಟರ್ ಹಗರಣ
ಸಚಿವ ಜಾರ್ಜ್‌ಗೆ ಬಿಗ್ ರಿಲೀಫ್



ಬೆಂಗಳೂರು: ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ 16 ಸಾವಿರ ಕೋಟಿ ರೂ. ಅಕ್ರಮ ಆರೋಪದಲ್ಲಿ ಇಂಧನ ಸಚಿವ ಕೆಜೆ ಜಾರ್ಜ್ ಅವರಿಗೆ ಬಿಗ್ ರಿಲೀಫ್ ಸಿಕ್ಕಿದೆ. ಪ್ರಕರಣದಲ್ಲಿ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ನಡೆಸಿದ ತನಿಖಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲು ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ, ಸಚಿವ ಕೆಜೆ ಜಾರ್ಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ▶ 6ನೇ ಪುಟಕ್ಕೆ

ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದ್ 78ನೇ ಜನ್ಮದಿನಾಚರಣೆ
ರಾಜಕಾರಣಿಗಳಿಗೆ ಆದರ್ಶಪ್ರಾಯರು, ಸಾಮಾಜಿಕ ಕಳಕಳಿಯುಳ್ಳ ನಾಯಕರು ವಿ.ಶ್ರೀನಿವಾಸಪ್ರಸಾದ್

- ಸಚಿವ ಕೆ.ವೆಂಕಟೇಶ್ ಗುಣಗಾನ
- ಇದ್ದದ್ದನ್ನು ಇದ್ದಂಗೆ ಹೇಳುತ್ತಿದ್ದವರು ಶ್ರೀನಿವಾಸ ಪ್ರಸಾದ್; ವಿಚಾರ ಮಂಥನದಲ್ಲಿ ಖ್ಯಾತ ಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ ಶ್ಲಾಘನೆ



ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದ್ ಅವರ 78ನೇ ಜನ್ಮದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ 'ವಿಚಾರ ಮಂಥನ' ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಶ್ರೀನಿವಾಸಪ್ರಸಾದರು ರಾಜ್ಯದ ಮುಖ್ಯಮಂತ್ರಿಯಾಗಬೇಕಿತ್ತು...!

"ವಿ.ಶ್ರೀನಿವಾಸಪ್ರಸಾದ್ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎಂಬುದು ನನ್ನ ಮನಸ್ಸಿನಲ್ಲಿತ್ತು. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಪ್ರಭಾವಶಾಲಿ ಮಂತ್ರಿಯಾಗಿದ್ದ ಅವರು, ಒಂದಲ್ಲ ಒಂದು ಸಲ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎಂದು ಬಯಸಿದ್ದೆವು. ಅಹಂಕಾರವಿಲ್ಲದ ಆದರ್ಶ ರಾಜಕಾರಣಿ ವಿ.ಶ್ರೀನಿವಾಸ ಪ್ರಸಾದ್. ಚಿಕ್ಕ ಮಕ್ಕಳಲ್ಲಿ ಕೇಳುವಂತೆ ನಾನು ಚಿಕ್ಕವನಿದ್ದಾಗ ನಿಮ್ಮ ಆದರ್ಶ ರಾಜಕಾರಣಿ ಯಾರು ಎಂದು ನನ್ನನ್ನು ಕೇಳಿದ್ದರೆ, ನಾನು... ಮನಸ್ಸಿನ ಆದರ್ಶ ರಾಜಕಾರಣಿ ಮಾತ್ರವಲ್ಲ. ಆದರ್ಶ ಮನುಷ್ಯ ವಿ.ಶ್ರೀನಿವಾಸ ಪ್ರಸಾದ್ ಎನ್ನುತ್ತೇನೆ.

–ಟಿ.ಎನ್.ಸೀತಾರಾಂ, ಖ್ಯಾತ ಚಲನಚಿತ್ರ ನಿರ್ದೇಶಕ

ಮೈಸೂರು,ಆ.6(ಎಂಕೆ)–ರಾಜಕಾರಣಿಗಳಿಗೆ ಆದರ್ಶಪ್ರಾಯರಾಗಿ ಉಳಿದುಕೊಂಡಿರುವ ವಿ.ಶ್ರೀನಿವಾಸಪ್ರಸಾದರು, ಸಾಮಾಜಿಕ ಕಳಕಳಿಯುಳ್ಳ ಮಹಾನ್ ನಾಯಕ. ಬಣ್ಣದ ಮಾತಿಲ್ಲದ ನೇರ, ನಿಷ್ಠುರ, ಜನಪರವಾಗಿದ್ದ ಧೀಮಂತ ರಾಜಕಾರಣಿ ಎಂದು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಪಶು ಸಂಗೋಪನಾ ಇಲಾಖೆ ಸಚಿವ ಕೆ.ವೆಂಕಟೇಶ್ ಸ್ಮರಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಬುಧವಾರ ಡಾ.ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗ, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ಸಹಯೋಗದೊಂದಿಗೆ ಹಿರಿಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದ್ ಅವರ 78ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ಒಂದನೇ ಪುಟದಿಂದ

ಸ್ಮಾರ್ಟ್ ಕಾರ್ಡ್ ವಿತರಣೆ

ಅಪಘಾತದಲ್ಲಿ ಸಂಪೂರ್ಣ ಅಥವಾ ಭಾಗಶಃ ಅಂಗವಿಕಲರಾದಲ್ಲಿ ಶೇಕಡಾವಾರು ಅಂಗವಿಕಲತೆ ಆಧಾರದ ಮೇರೆಗೆ ಲಕ್ಷ ರೂ.ವರೆಗೆ ಪರಿಹಾರ ಪಡೆಯಬಹುದು. ಅಪಘಾತ ಪ್ರಕರಣಗಳಲ್ಲಿ 50 ಸಾವಿರದವರೆಗೆ ಆಸ್ಪತ್ರೆ ವೆಚ್ಚ ಮರುಪಾವತಿ ಪಡೆಯುವ ಅವಕಾಶವಿದೆ. ವಯೋಸಹಜ ಕಾಯಿಲೆ ಅಥವಾ ಅಕಾಲಿಕ ಇಲ್ಲವೇ ಇನ್ನಿತರೆ ಕಾರಣಗಳಿಂದ ಸ್ಮಾರ್ಟ್ ಕಾರ್ಡ್‌ದಾರರು ಮರಣ ಹೊಂದಿದಲ್ಲಿ ಅವರ ಕುಟುಂಬ ದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ 10 ಸಾವಿರ ರೂ. ನೀಡಲಾಗುವುದು.

ಈ ಸ್ಮಾರ್ಟ್ ಕಾರ್ಡ್ ಪಡೆಯಲು ಕರ್ನಾಟಕದ ನಿವಾಸಿಗಳಿಗೆ ಮಾತ್ರ ಅನ್ವಯ ವಾಗಲಿದ್ದು, 18ರಿಂದ 60 ವರ್ಷ ವಯೋಮಿತಿ ಇರುವವರು ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಹೊಂದಿರಬಾರದು. ಈ ಸ್ಮಾರ್ಟ್ ಕಾರ್ಡ್ ಅನ್ನು ಪ್ರಾರಂಭದಲ್ಲಿ 26 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ನೀಡಲಾಗುತ್ತಿತ್ತು. ಇದೀಗ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಪಾರಂಪರಿಕ ವೃತ್ತಿಯಲ್ಲಿ ತೊಡಗಿರುವ 38 ವರ್ಗಗಳು ಹಾಗೂ ಹಿಂದುಳಿದ ವರ್ಗಗಳ ಅಲೆಮಾರಿ ಹಾಗೂ ಅಲೆಮಾರಿ ಪಂಗಡದ ಕುಲಕಸುಬಿನಲ್ಲಿ ತೊಡಗಿರುವ 27 ವರ್ಗಗಳು ಸೇರಿದಂತೆ ಒಟ್ಟು 91 ವರ್ಗಗಳ ಕಾರ್ಮಿಕರನ್ನು ಸ್ಮಾರ್ಟ್ ಕಾರ್ಡ್‌ಗಾಗಿ ಉಚಿತವಾಗಿ ನೋಂದಾಯಿಸಿಕೊಳ್ಳಲಾಗುತ್ತದೆ.

ಅದು ಮಾತ್ರವಲ್ಲದೆ ಕರ್ನಾಟಕ ಮೋಟಾರ್ ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮದಡಿ ಈ ವರ್ಗಕ್ಕೆ ಸೇರಿದ ಸುಮಾರು 40 ಲಕ್ಷ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುತ್ತಿದೆ.

ಈ ಸ್ಮಾರ್ಟ್ ಕಾರ್ಡ್ ಹೊಂದಿರುವವರು ಅಪಘಾತದಲ್ಲಿ ಮೃತಪಟ್ಟಲ್ಲಿ ನಾಮನಿರ್ದೇಶಕರಿಗೆ 5 ಲಕ್ಷ ಪರಿಹಾರ, ಅಪಘಾತದಲ್ಲಿ ಶಾಶ್ವತ ಅಂಗವಿಕಲರಾದರೆ ಅಂಗವಿಕಲತೆಯ ಪ್ರಮಾಣಕ್ಕನುಗುಣವಾಗಿ 2 ಲಕ್ಷದವರೆಗೆ ಪರಿಹಾರ, ಅಪಘಾತದಿಂದ ತಾತ್ಕಾಲಿಕ ಅಂಗವಿಕಲತೆ ಹೊಂದಿದರೆ ಗರಿಷ್ಠ 1 ಲಕ್ಷದವರೆಗೆ ಅಥವಾ ಆಸ್ಪತ್ರೆಯ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆ ಇರುತ್ತದೋ ಆ ಮೊತ್ತವನ್ನು ಮರುಪಾವತಿ ಮಾಡಲಾಗುತ್ತದೆ. ಸಹಜ ಮರಣ ಹೊಂದಿದ ಫಲಾನುಭವಿಗಳ ಅವಲಂಭಿತರಿಗೆ ಅಂತ್ಯಸಂಸ್ಕಾರದ ವೆಚ್ಚವೂ ಸೇರಿ 25 ಸಾವಿರ ರೂ. ಪರಿಹಾರ ನೀಡಲಾಗುತ್ತದೆ.

ಕಾರ್ಡ್ ಹೊಂದಿದ ಫಲಾನುಭವಿಯ ಗರಿಷ್ಠ ಇಬ್ಬರು ಮಕ್ಕಳಿಗೆ 12ನೇ ತರಗತಿ ಅಥವಾ ತತ್ಸಮಾನ ಶಿಕ್ಷಣದವರೆಗೆ ವಾರ್ಷಿಕ ತಲಾ 3 ಸಾವಿರ, ಪದವಿ ಅಥವಾ ತತ್ಸಮಾನ ಶಿಕ್ಷಣದವರೆಗೆ ವಾರ್ಷಿಕ ತಲಾ 5500 ರೂ., ಇಂಜಿನಿಯರಿಂಗ್ ಅಥವಾ ವೈದ್ಯಕೀಯ ಶಿಕ್ಷಣ ಪಡೆಯುವ ಮಕ್ಕಳಿಗೆ ವಾರ್ಷಿಕ ತಲಾ 8 ಸಾವಿರ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುವ ಮಕ್ಕಳಿಗೆ ವಾರ್ಷಿಕ ತಲಾ 11 ಸಾವಿರ ರೂ. ನೀಡಲಾಗುತ್ತದೆ. ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಯ ಗರಿಷ್ಠ ಇಬ್ಬರು ಮಕ್ಕಳಿಗೆ 1ನೇ ತರಗತಿಯಿಂದ ಪದವಿ ಅಥವಾ ತತ್ಸಮಾನ ಶಿಕ್ಷಣದವರೆಗೆ ವಾರ್ಷಿಕ ತಲಾ 10 ಸಾವಿರ ರೂ., ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ಪಡೆಯುವವರಿಗೆ ವಾರ್ಷಿಕ ತಲಾ 20 ಸಾವಿರ, ಸ್ನಾತಕೋತ್ತರ ಪದವಿ ಪಡೆಯುವವರಿಗೆ ವಾರ್ಷಿಕ ತಲಾ 25 ಸಾವಿರ ರೂ. ನೀಡಲಾಗುತ್ತದೆ. ಅಲ್ಲದೆ ಫಲಾನುಭವಿಯ ಮೊದಲ 2 ಹೆರಿಗೆಗಳಿಗೆ ತಲಾ 10 ರೂ. ನೀಡಲಾಗುತ್ತದೆ.

ಹೆಚ್ಚುವರಿ ಸೆಸ್ ಹಾಕಿ

ಕಾರ್ಮಿಕ ಕಲ್ಯಾಣಕ್ಕೆ ನೀಡಬೇಕು. ಈ ಕುರಿತು ಸಿಎಂ ಸಿದ್ದರಾಮಯ್ಯ ರೊಂದಿಗೆ ಪ್ರಸ್ತಾಪಿಸಿದ್ದೇನೆ. ಈ ವಿಷಯ ಕುರಿತು ಮತ್ತಷ್ಟು ಚರ್ಚೆಯ ಅಗತ್ಯವಿದೆ ಎಂದಿದ್ದಾರೆ. ದೇಶದಲ್ಲಿ ಶೇ.90ರಷ್ಟು ಮಂದಿ ಅಸಂಘಟಿತ ಕಾರ್ಮಿಕರಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಶೇ.83ರಷ್ಟು ಅಸಂಘಟಿತ ಕಾರ್ಮಿಕರಿದ್ದಾರೆ. ಇವರಿಗೆ ಸಾಮಾಜಿಕ ಭದ್ರತೆಯೊಂದಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕಾಗಿದೆ. ಇದಕ್ಕೆ ಕೋಟ್ಯಾಂತರ ರೂ. ಅನುದಾನ ಬೇಕು. ಈ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಮೇಲೆ ಹೆಚ್ಚುವರಿ ಸೆಸ್ ವಿಧಿಸುವ ಮೂಲಕ ಹಣ ಸಂಗ್ರಹಿಸಿ ಕಾರ್ಮಿಕರ ಕಲ್ಯಾಣಕ್ಕೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಸ್ಮಾರ್ಟ್‌ಕಾರ್ಡ್: ರಾಜ್ಯದ ಸಾರಿಗೆ ವಲಯದಲ್ಲಿ 25 ಲಕ್ಷಕ್ಕೂ ಅಧಿಕ ಮಂದಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಟ್ರಾನ್ಸ್‌ಪೋರ್ಟ್ ಬೋರ್ಡ್ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ಅಪಘಾತದಿಂದ ಕಾರ್ಮಿಕರು ಮೃತಪಟ್ಟರೆ ಅವರ ಕುಟುಂಬ ದವರಿಗೆ 5 ಲಕ್ಷ ರೂ. ಪರಿಹಾರ ಸಿಗಲಿದೆ. ರಸ್ತೆ ಅಪಘಾತ ನಿಯಂತ್ರಣಕ್ಕೆ ಜಿಲ್ಲಾಡಳಿತ, ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆ ವಿಶೇಷ ಕಾರ್ಯಾಚರಣೆ ನಡೆಸುವ ಮೂಲಕ ಅಪಘಾತ ನಿಯಂತ್ರಿಸಬೇಕು. ದೇಶದಲ್ಲಿ ಪ್ರತಿ ಗಂಟೆಗೆ ಅಪಘಾತದಿಂದ 170 ಮಂದಿ ಸಾವಿಗೀಡಾಗುತ್ತಿರುವುದು ಆತಂಕಕಾರಿ ವಿಷಯ ಎಂದರು.

ಸೊಸೈಟಿ ಸ್ಥಾಪನೆ: ಇದರೊಂದಿಗೆ ಮನೆಗೆಲಸ ಮಾಡುವ ಮಹಿಳೆಯರಿಗೆ ಕನಿಷ್ಠ ವೇತನ ಸಿಗುವಂತೆ ಮಾಡಲು ಕಾನೂನು ರೂಪಿಸಲಾಗುತ್ತಿದೆ. ಜತೆಗೆ ಸರ್ಕಾರ ಸೇರಿದಂತೆ ಖಾಸಗಿ ಕ್ಷೇತ್ರಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ನೌಕರರಿಗೆ ಸೊಸೈಟಿಯನ್ನು ಸ್ಥಾಪಿಸಲಾಗುತ್ತಿದೆ. ಇದರ ಮೂಲಕ ಹೊರ ಗುತ್ತಿಗೆ ನೌಕರರಿಗೆ ಸವಲತ್ತು ಒದಗಿಸುವ ವಿಚಾರದಲ್ಲಿ ಖಾಸಗಿ ಕಂಪನಿಗಳಿಂದ ಯಾವುದೇ ಅನ್ಯಾಯವಾಗದಂತೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಕಳೆದ 11 ವರ್ಷಗಳಿಂದ ದೇಶಕ್ಕೆ ಗುಜರಾತ್ ಮಾಡಲ್ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಚಾರ ಮಾಡಿ, ಅಧಿಕಾರಕ್ಕೆ ಬಂದರು. ಆದರೆ, ಅಲ್ಲಿನ ಜನರ ಸ್ಥಿತಿ-ಗತಿಗಳನ್ನು ಎಲ್ಲರೂ ತಿಳಿದುಕೊಳ್ಳಬೇಕು. ಕರ್ನಾಟಕ ಎಲ್ಲದ್ದಕ್ಕೂ ಮಾದರಿಯಾಗಿದೆ. ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು, 22 ಅಂಶಗಳ ಮೇಲೆ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದರು. ಆ ಯೋಜನೆಗಳು ಇಂದಿಗೂ ಮುಂದುವರೆದಿವೆ. ಇದರ ಜೊತೆಗೆ ಸಿದ್ದರಾಮಯ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳು ಸೇರಿಕೊಂಡಿವೆ. ಇದರಿಂದ ಬಡ ಜನರಿಗೆ ಕೊಳ್ಳುವ ಶಕ್ತಿ ಹೆಚ್ಚಾಗಿದೆ ಎಂದು ಸರ್ಕಾರದ ನಡೆಯನ್ನು ಬಲವಾಗಿ ಸಮರ್ಥಿಸಿಕೊಂಡರು.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಕೊಟ್ಟ ಪಂಚ ಗ್ಯಾರಂಟಿಗಳಿಂದ ರಾಜ್ಯದಲ್ಲಿನ ಬಡ ಜನರಿಗೆ ಮಾಸಿಕ 8 ರಿಂದ 10 ಸಾವಿರ ರೂ. ಸಿಗುವಂತಾಗಿದೆ. ಬಿಜೆಪಿ ಮುಖಂಡರು, ನಮ್ಮ ಸರ್ಕಾರವನ್ನು ಟೀಕಿಸುತ್ತಾರೆ. ಆದರೆ, ಬಿಜೆಪಿ ಆಡಳಿತವಿರುವ ಕಡೆ ಇಂತಹ ಒಂದು ಕಾರ್ಯಕ್ರಮವನ್ನು ಜಾರಿ ಮಾಡಿಲ್ಲ. ಬಡವರಿಗೆ ಆರ್ಥಿಕ ಶಕ್ತಿ ತುಂಬುವ ಒಂದೇ ಒಂದು ಕಾರ್ಯಕ್ರಮವನ್ನು ಜಾರಿಗೊಳಿಸಿಲ್ಲ ಎಂದು ಆರೋಪಿಸಿದರು. ಈ ವೇಳೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವುದರೊಂದಿಗೆ ನಾನಾ ಯೋಜನೆಯ ಫಲಾನುಭವಿಗಳಿಗೆ ಸೌಲಭ್ಯ ಮತ್ತು ಸವಲತ್ತುಗಳನ್ನು ನೀಡಲಾಯಿತು.

ಚಾಮರಾಜ ಕ್ಷೇತ್ರದಲ್ಲಿ 60 ಸಾವಿರ ಅಸಂಘಟಿತ ಕಾರ್ಮಿಕರಿದ್ದಾರೆ. ಸರ್ಕಾರದ ಯೋಜನೆಗಳ ಕುರಿತು ರಾಜ್ಯವ್ಯಾಪಿ ಪ್ರಚಾರ ನಡೆಸಬೇಕಿದೆ. ಅಸಂಘಟಿತ ಕಾರ್ಮಿಕರು 40 ಲಕ್ಷ ಇರುವುದಾಗಿ ಅಂದಾಜಿಸಲಾಗಿದ್ದು, ಅವರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಅಧಿನಿಯಮವನ್ನು ಜಾರಿಗೆ ತಂದಿದೆ. **– ಕೆ.ಹರೀಶ್‌ಗೌಡ, ಶಾಸಕರು, ಚಾಮರಾಜ ಕ್ಷೇತ್ರ**

ಪ್ರತಿಯೊಬ್ಬ ಶ್ರಮಜೀವಿ ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುತ್ತಾರೆ. ವೇತನ ಪಡೆಯುವ ರಾಷ್ಟ್ರಪತಿ ಹುದ್ದೆಯಿಂದ ಜವಾನನ ಕೆಲಸ ಮಾಡುವಂತಹ ಪ್ರತಿಯೊಬ್ಬರೂ ಕಾರ್ಮಿಕರೇ, ಇವರ ವೇತನ ಹೆಚ್ಚು ಕಡಿಮೆ ಇದ್ದರೂ ಶ್ರಮ ವಹಿಸುವವರು ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುತ್ತಾರೆ. ಇಂತಹ ಇಲಾಖೆ ಚುಕ್ಕಾಣಿ ಹಿಡಿದಿರುವ ಸಚಿವ ಸಂತೋಷ್ ಲಾಡ್ ಉತ್ತಮ ಕೆಲಸ ಮಾಡುತ್ತಿದ್ದಾರೆ. **–ತನ್ವೀರ್ ಸೇಠ್, ಶಾಸಕರು, ನರಸಿಂಹರಾಜ ಕ್ಷೇತ್ರ**

ಸಂತೋಷ್ ಎಸ್.ಲಾಡ್ ಅವರು ಅಧಿಕಾರವನ್ನು ಸ್ವೀಕರಿಸಿದ ಮೇಲೆ ಕಾರ್ಮಿಕ ಇಲಾಖೆಯಲ್ಲಿ ಪಾದರಸದಂತೆ ಕೆಲಸ ಮಾಡಿ, ಬಡವರ ಪರವಾಗಿರುವ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ನಮ್ಮ ಕಾರ್ಮಿಕರಿಗೆ ಯಾವುದೇ ಸಂದರ್ಭದಲ್ಲಿ ಏನೇ ತೊಂದರೆ ಆದರೂ ಕೂಡ ನಾವು ನಿಮ್ಮ ಜೊತೆಯಲ್ಲೇ ಇರುತ್ತೇವೆ ಎಂಬ ನಿಟ್ಟಿನಲ್ಲಿ ಕಾರ್ಮಿಕರಿಗೆ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಸ್ಮಾರ್ಟ್ ಕಾರ್ಡ್ ಯೋಜನೆ ಕೇವಲ ಜಿಲ್ಲೆ, ತಾಲೂಕು ಹಂತಕ್ಕೆ ಸೀಮಿತವಾಗದೇ ಗ್ರಾಮ ಪಂಚಾಯತ್ ಮಟ್ಟದಲ್ಲಿ ನೊಂದಣಿ ಮಾಡಿಸುವ ಕೆಲಸವಾಗಬೇಕು. **– ಡಿ.ರವಿಶಂಕರ್, ಶಾಸಕರು, ಕೆ.ಆರ್.ನಗರ ಕ್ಷೇತ್ರ**

ಕಾರ್ಮಿಕ ಇಲಾಖೆಯು ಸ್ಮಾರ್ಟ್ ಕಾರ್ಡ್ ಅನ್ನು ನೀಡುತ್ತಿದ್ದು, ಇದು ಉತ್ತಮವಾದ ಯೋಜನೆಯಾಗಿದೆ. ಶೇ.83% ಜನ ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದು ಅಷ್ಟು ದೊಡ್ಡ ಸಂಖ್ಯೆಯಲ್ಲಿ ಇರುವ ಕಾರ್ಮಿಕರಿಗೆ ಸರ್ಕಾರ ಸೌಲಭ್ಯಗಳನ್ನು ನೀಡಿ ಕಾರ್ಮಿಕರನ್ನು ಬೆಂಬಲಿಸುವುದು, ಅವರ ಜೀವನಕ್ಕೆ ಆಧಾರವನ್ನು ಒದಗಿಸಿ ಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅಸಂಘಟಿತ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಘೋಷಿಸಿರುವ ವಸತಿ ಶಾಲೆ, ಒರಿಸ್ಸಾ ಮಾದರಿಯ ಬಹುಕೌಶಲ ತರಬೇತಿ ಕೇಂದ್ರವನ್ನು ವರುಣಾ ಕ್ಷೇತ್ರಕ್ಕೆ ಮಂಜೂರು ಮಾಡಿದ್ದಾರೆ. **–ಡಾ.ಯತೀಂದ್ರ, ಎಂಎಲ್‌ಸಿ**

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಡವರ ಪರವಾದ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ ತಮಗೆ ವಹಿಸಿದ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ನನ್ನದೊಂದು ಸ್ವಾರ್ಥವಿದೆ. ಮೈಸೂರಲ್ಲಿ ಒಳ್ಳೆಯ ಯೋಜನೆಗಳನ್ನು ಘೋಷಣೆ ಮಾಡಲಾಗುತ್ತಿವೆ. ಅವೆಲ್ಲವೂ ಮುಖ್ಯಮಂತ್ರಿಗಳ ಕ್ಷೇತ್ರಕ್ಕೆ ಬರುತ್ತಿವೆ. ನಮ್ಮ ಕ್ಷೇತ್ರಕ್ಕೂ ಒಂದು ಯೋಜನೆಯನ್ನ ಕೊಡಿ. ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದಿರುವ ತಾಲೂಕು ಎಂಬ ಹಣೆಪಟ್ಟಿ ಹೊಂದಿರುವ ಹೆಚ್.ಡಿ.ಕೋಟೆ ತಾಲೂಕಿನ ಅಭಿವೃದ್ಧಿಗೂ ಸಹಕರಿಸಿ.

–ಅನಿಲ್ ಚಿಕ್ಕಮಾದು, ಶಾಸಕರು, ಹೆಚ್.ಡಿ.ಕೋಟೆ

ಮೈಸೂರಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಸ್ಥಾಪನೆ

- ಪೊಲೀಸ್ ಆಯುಕ್ತರ ಕಚೇರಿ ಪಕ್ಕದ ಬ್ಯಾಂಡ್‌ಹೌಸ್‌ನಲ್ಲಿ ಕಾರ್ಯನಿರ್ವಹಣೆ
- ಮೈಸೂರು ಏರ್‌ಪೋರ್ಟ್, ಜೈಲು, ಜಲಾಶಯ ಸೇರಿ ಹಲವೆಡೆ ನಿಯೋಜನೆ

ಮೈಸೂರು, ಆ.6(ಬಿಎಲ್‌ಯು)- ಮೈಸೂರು ರಾಜರ ಕಾಲದಲ್ಲಿ ಅರಮನೆಯ ಬ್ಯಾಂಡ್ ಹೌಸ್ ಆಗಿ, ಬಳಿಕ ಪೊಲೀಸ್ ಆಯುಕ್ತರ ಕಚೇರಿಯಾಗಿದ್ದ ಪಾರಂಪರಿಕ ಶೈಲಿಯ ಬ್ಯಾಂಡ್‌ಹೌಸ್ ಅನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಕಚೇರಿಗೆ ತಾತ್ಕಾಲಿಕವಾಗಿ ನೀಡಲಾಗುತ್ತಿದೆ.

ಪಾರಂಪರಿಕ ಶೈಲಿಯ ಹಂಚಿನ ಚಾವಣಿವುಳ್ಳ ಬ್ಯಾಂಡ್‌ಹೌಸ್‌ನಲ್ಲಿ ಸಭಾಂಗಣ ಸೇರಿದಂತೆ ವಿಶಾಲ ವಾದ ಹಲವು ಕೊಠಡಿಗಳಿವೆ. ಈಗ ಇದರ ಒಂದು ಭಾಗವನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್)ಗೆ ತಾತ್ಕಾಲಿಕವಾಗಿ ನೀಡಲಾಗುತ್ತಿದೆ. ಈ ಬಗ್ಗೆ ಬ್ಯಾಂಡ್‌ಹೌಸ್ ಮುಂದೆ ವಿವರಣೆ ನೀಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಅವರು, ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹಾಗೂ ಶಿವಮೊಗ್ಗ ಮತ್ತು ಧಾರವಾಡದಲ್ಲಿ ಉಪ ಕಚೇರಿಗಳಿವೆ. ಅದರಂತೆ ಮೈಸೂರು ನಗರವನ್ನು ಕೇಂದ್ರವಾಗಿಟ್ಟುಕೊಂಡು ಕೆಎಸ್‌ಐಎಸ್‌ಎಫ್ ಸೃಜನೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಾನು ಪತ್ರ ಬರೆದು ಒತ್ತಾಯಿಸಿದ್ದೆ ಎಂದು ತಿಳಿಸಿದರು.

ನನ್ನ ಮನವಿಗೆ ಸ್ಪಂದಿಸಿದ ಸಿಎಂ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಕೆಎಸ್‌ಐಎಸ್‌ಎಫ್ ಬೆಟಾಲಿಯನ್ ಸೃಜನೆ ಮಾಡಲು ಪೊಲೀಸ್ ಮಹಾ ನಿರ್ದೇಶಕರಿಗೆ ಆದೇಶ ನೀಡಿದ್ದರು. ಅಲ್ಲದೆ, ಇದರ ಕಾರ್ಯನಿರ್ವಹಣೆಗೆ ಬ್ಯಾಂಡ್‌ಹೌಸ್‌ನಲ್ಲಿ ತಾತ್ಕಾಲಿಕ ಸ್ಥಳಾವಕಾಶ ಮಾಡಿಕೊಡಲು ಸೂಚನೆ ನೀಡಿದ್ದಾರೆ ಎಂದು ಹೇಳಿದರು.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರಿನ ಬ್ಯಾಂಡ್‌ಹೌಸ್.

ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಬ್ಯಾಂಡ್‌ಹೌಸ್ ಅನ್ನು ಕೆಎಸ್‌ಐಎಸ್‌ಎಫ್‌ಗೆ ನೀಡಲು ಆಗಸ್ಟ್ 4 ರಂದು ಆದೇಶ ಹೊರಡಿಸಿದ್ದಾರೆ ಎಂದು ಲಕ್ಷ್ಮಣ್ ಹೇಳಿದ್ದಾರೆ. ಕೆಎಸ್‌ಐಎಸ್‌ಎಫ್‌ನ ಕಮಾಂಡೆಂಟ್, ಡೆಪ್ಯೂಟಿ ಕಮಾಂಡೆಂಟ್, ಸಹಾಯಕ ಕಮಾಂಡೆಂಟ್ ಸೇರಿದಂತೆ 1,170 ಹುದ್ದೆ ನೇಮಕಾತಿ ಮಾಡಿಕೊಳ್ಳುವಂತೆ ಆದೇಶಿಸಿದ್ದಾರೆ. ಜೊತೆಗೆ ಕಚೇರಿಗೆ ಸಹಾಯಕ ಆಡಳಿತಾಧಿಕಾರಿ, ಶಾಖಾಧೀಕ್ಷಕರು

ಮೈಸೂರಿನ ಹಳೇ ಪೊಲೀಸ್ ಆಯುಕ್ತರ ಕಚೇರಿಯ ಬ್ಯಾಂಡ್‌ಹೌಸ್ ಅನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗೆ ನೀಡುವ ಸಂಬಂಧ ಸರ್ಕಾರದ ಮಟ್ಟದಲ್ಲಿ ಪತ್ರ ವ್ಯವಹಾರ ನಡೆದಿದೆ. **–ಸೀಮಾ ಲಾಟ್ಕರ್, ಪೊಲೀಸ್ ಆಯುಕ್ತರು, ಮೈಸೂರು ನಗರ**

ಸೇರಿದಂತೆ 22 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರದಿಂದ ಆದೇಶವಾಗಿದೆ ಎಂದರು.

ಮೈಸೂರು ವಿಮಾನ ನಿಲ್ದಾಣ, ಮೈಸೂರು ಕೇಂದ್ರ ಕಾರಾಗೃಹ, ಕರ್ನಾಟಕ ಪೊಲೀಸ್ ಅಕಾಡೆಮಿ, ಕಬಿನಿ ಜಲಾಶಯ, ನುಗು ಜಲಾಶಯ, ತಾರಕ ಜಲಾಶಯ, ಕೃಷ್ಣರಾಜ ಜಲಾಶಯ, ಶಿಂಷಾ ಮತ್ತು ಶಿವನಸಮುದ್ರ ಜಲ ವಿದ್ಯುತ್ ಕಾರ್ಯಾಗಾರ, ಹಾರಂಗಿ ಜಲಾಶಯ, ಹೇಮಾವತಿ ಜಲಾಶಯ ಹಾಗೂ ಮಂಗಳೂರು ಕಾರಾಗೃಹಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದರು. ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಂತೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಕಾರ್ಯ ನಿರ್ವಹಿಸಲಿದೆ. ಪೊಲೀಸರ ಜೊತೆಗೆ ಇವರು ಕೂಡ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಲಕ್ಷ್ಮಣ ಹೇಳಿದರು.

ಕೊಡಗು ಮಾಡಲ್ ಶಾಲೆಯ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘ ಉದ್ಘಾಟನೆ



ಕೊಡಗು ಮಾಡಲ್ ಶಾಲೆಯ 2025-2026ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಅಂತಾರಾಷ್ಟ್ರೀಯ ವಾಲಿಬಾಲ್ ಮಾಜಿ ಕೋಚ್ ಹಾಗೂ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ನಿರ್ದೇಶಕ ಡಾ.ನೆರವಂಡ ಬಿ.ಸುರೇಶ್ ಮಾತನಾಡಿದರು.

ಮೈಸೂರು, ಆ.6(ಜಿಎ)-ಮೈಸೂರಿನ ಕೊಡಗು ಮಾಡಲ್ ಶಾಲೆಯ 2025-2026ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘ ಉದ್ಘಾಟನೆಗೊಂಡಿತು.

ಕೊಡಗು ಮಾಡಲ್ ಶಾಲೆ ಮತ್ತು ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಗೆ ಬ್ಯಾಡ್ಜ್ ಮತ್ತು ಸಾಶ್ ನೀಡಿ ಪ್ರಮಾಣ ವಚನವನ್ನು ಬೋಧಿಸಲಾಯಿತು. ಶಾಲೆಯ ಅಧ್ಯಕ್ಷರಾದ ಕೆ.ಎಂ.ಬೆಳ್ಳಿಯಪ್ಪ ಅವರು ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ, ನಾಯಕತ್ವವು ಅಧಿಕಾರ, ಅದು ಸೇವೆ ಹಾಗೂ ಮಾದರಿಯಾದ ನಡೆಗೆ ಸಂಬಂಧಿಸಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ವಾಲಿಬಾಲ್ ಮಾಜಿ ಕೋಚ್ ಹಾಗೂ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ನಿರ್ದೇಶಕ ಡಾ.ನೆರವಂಡ ಬಿ.ಸುರೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ವಿದ್ಯಾರ್ಥಿಗಳು ಶಾರೀರಿಕ, ಮಾನಸಿಕ, ಭಾವನಾತ್ಮಕ ಹಾಗೂ ಸಾಮಾಜಿಕವಾಗಿ ಆರೋಗ್ಯವಾಗಿರಬೇಕು ಎಂದು ಸಲಹೆ ನೀಡಿದರು.

ಕಾವೇರಿ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕಿ ಡಾ.ದೇಚಮ್ಮ ಮಾತನಾಡಿ, ವಿದ್ಯಾರ್ಥಿ ನಾಯಕರಿಗೆ ಉತ್ತಮ ಮಾದರಿಯಾಗಿರಬೇಕೆಂಬ ಆವಶ್ಯಕತೆಯ ಬಗ್ಗೆ ಹೇಳಿ, ಶಿಸ್ತು, ನಿಷ್ಠೆ ಹಾಗೂ ಶ್ರದ್ಧೆ ಇವು ನಾಯಕತ್ವದ ಮೂಲ ತತ್ವಗಳು ಎಂದು ಹೇಳಿದರು.

ಮೈಸೂರಿನ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಅಭಿವೃದ್ಧಿಗೆ ಕೇಂದ್ರ ಶಿಕ್ಷಣ ಸಚಿವರ ಭರವಸೆ

ಲೋಕಸಭೆಯಲ್ಲಿ ಸಂಸದ ಯದುವೀರ್ ಪ್ರಶ್ನೆಗೆ ಉತ್ತರ

ಮೈಸೂರು, ಆ.6(ಜಿಎ)-ಮೈಸೂರಿನಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬೆಂಬಲ ನೀಡಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಡಾ. ಸುಕಾಂತ ಮಜುಂದಾರ್ ಭರವಸೆ ನೀಡಿದ್ದಾರೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ಯದುವೀರ್

ಲೋಕಸಭೆಯಲ್ಲಿ ಈ ಕುರಿತು ಕೇಳಲಾದ ಪ್ರಶ್ನೆಗೆ ಕೇಂದ್ರ ಶಿಕ್ಷಣ ಸಚಿವರು ಸವಿವರವಾದ ಉತ್ತರ ನೀಡಿದ್ದಾರೆ ಎಂದು ಸಂಸದ ಯದುವೀರ್ ಪತ್ರಿಕಾ ಪ್ರಕಟಣೆ ಮೂಲಕ ಸಂಸದರು ಹಲವಾರು ವಿವರಗಳನ್ನು ಹಂಚಿಕೊಂಡಿದ್ದಾರೆ.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಪೂರ್ಣ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸ್ವಾಯತ್ತತೆ ನೀಡಲಾಗಿಲ್ಲ, ಈ ಕೇಂದ್ರದ ಕಾರ್ಯಕ್ಷಮತೆ ಮತ್ತು ಸವಾಲುಗಳ ಹಾಗೂ ಕೇಂದ್ರದ ಸ್ವಾಯತ್ತತೆಗಾಗಿ ರಾಜ್ಯ ಸರ್ಕಾರ ಅಥವಾ ಕನ್ನಡ ಸಾಹಿತ್ಯ ಸಂಸ್ಥೆಗಳಿಂದ ಶಿಫಾರಸುಗಳನ್ನು ಸ್ವೀಕರಿಸಿದೆಯೇ ಮತ್ತು ಇದರ ಸ್ವಾಯತ್ತ ಸ್ಥಾನಮಾನಕ್ಕಾಗಿ ಪ್ರಸ್ತಾಪ ಇದೆಯೇ? ಎಂದು ಕೇಂದ್ರ ಶಿಕ್ಷಣ ಸಚಿವರಿಂದ ಉತ್ತರ ಕೋರಲಾಗಿತ್ತು ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಮೈಸೂರಿನಲ್ಲಿರುವ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ (ಸಿಐಐಎಲ್) ಆವರಣದಲ್ಲಿ ಶಾಸ್ತ್ರೀಯ ಕನ್ನಡದ ಅತ್ಯುನ್ನತ ಅಧ್ಯಯನ ಕೇಂದ್ರ (ಸಿಇಎಸ್‌ಸಿಕೆ)ವನ್ನು ಈಗ ಕೋರಿಕೆ ಮೇರೆಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಸ್ಥಳಾಂತರಿಸಲಾಗಿದೆ ಎಂದು ಸಚಿವರು ಉತ್ತರ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ, 2020 ಶಾಸ್ತ್ರೀಯ ಕನ್ನಡ ಮತ್ತು ಇತರ ಶಾಸ್ತ್ರೀಯ ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಎಲ್ಲಾ ಭಾರತೀಯ ಭಾಷೆಗಳ ಪ್ರಚಾರಕ್ಕೆ ಹೆಚ್ಚು ಆದ್ಯತೆ ನೀಡಲು ಗಮನಹರಿಸಲಾಗಿದೆ. ಸಿಇಎಸ್‌ಸಿಕೆ ಸೇರಿದಂತೆ ಎಲ್ಲಾ ಶಾಸ್ತ್ರೀಯ ಕೇಂದ್ರಗಳ ಕಾರ್ಯಕ್ಷಮತೆಯನ್ನು ವ್ಯವಸ್ಥಿತವಾಗಿ ಪರಿಶೀಲಿಸಲು ಮತ್ತು ನಿರ್ಣಯಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಲಾಗಿದೆ.

ಶಾಸ್ತ್ರೀಯ ಕನ್ನಡದ ಅತ್ಯುನ್ನತ ಅಧ್ಯಯನ ಕೇಂದ್ರದ ಬೆಳವಣಿಗೆಗೆ ಬೆಂಬಲ ನೀಡಲಾಗುತ್ತದೆ. ಕೇಂದ್ರದ ವರ್ಧಿತ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸದಾ ಬದ್ಧವಾಗಿದೆ ಎಂದು ಕೇಂದ್ರ ಸಚಿವರು ಭರವಸೆ ನೀಡಿದ್ದಾರೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಆ.17ರಂದು ಪ್ರತಿಭಾ ಪುರಸ್ಕಾರ

ಮೈಸೂರು,ಆ.6-ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ವಿಶ್ವಕರ್ಮ ಸಮುದಾಯದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆ.17ರಂದು ಬೆಳಗ್ಗೆ 10 ಗಂಟೆಗೆ ಜಗನ್ಮೋಹನ ಅರಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ವಹಿಸುವರು. ಎಂಎಲ್‌ಸಿ ಡಾ.ಯತೀಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಎಂಎಲ್‌ಸಿ ಜಿ.ರಘುಆಚಾರ್ ಉಪಸ್ಥಿತರಿರುವರು. ವಿಶ್ವಕರ್ಮ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಎನ್.ನಂದಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್ ಒಡೆಯರ್, ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಶ್ರೀವತ್ಸ ಭಾಗವಹಿಸಲಿದ್ದಾರೆ.

ಆ.9, ಶನಿ ಮಹಾಶಾಂತಿ

ಮೈಸೂರು, ಆ.6-ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಆ.9ರಂದು ಶ್ರಾವಣ ಶನಿವಾರ ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾನಿವಾರಕ ಸುದರ್ಶನ ಹೋಮ, ಕುಜ ದೋಷ, ನಿವೃತ್ತಿ ಶಾಂತಿ ಮತ್ತು ರಾಹು ಕೇತು ಶಾಂತಿ, ಗುರುಮಹಾ ಶಾಂತಿ, ಶ್ರೀ ಸತ್ಯನಾರಾಯಣ ಪೂಜೆ ಮತ್ತು ಮೃತ್ಯುಂಜಯ ಹೋಮ ಏರ್ಪಡಿಸಲಾಗಿದೆ. ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.08.2025 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥ್ರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಮುಖ್ಯ ಅತಿಥಿಗಳು : ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಸಿ. ವೆಂಕಟೇಶ್, ಉದ್ಯಮಿ ಶ್ರೀಮತಿ ಎಸ್. ಯಶಸ್ವಿನಿ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ದೀಪ ಸಂಯುಕ್ತ ಪದವಿಪೂರ್ವ ಕಾಲೇಜು :** ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಅಧ್ಯಕ್ಷತೆ: ದೀಪಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ನಾಟಕ ಆಧಾರಿತ ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮುಖ್ಯ ಅತಿಥಿಗಳು : ಜನಪದ ಗಾಯಕ ಮೈಸೂರು ಗುರುರಾಜು, ಸಹ ಪ್ರಾಧ್ಯಾಪಕ ಡಾ. ವಿನೋದ, ರಂಗಕರ್ಮಿ ದಿನೇಶ್ ಚಮ್ಮಾಳಿಗೆ (ನೀನಾಸಂ), ಜನಪದ ಗಾಯಕ ಮೈಸೂರು ಎಂ. ಮಹಾಲಿಂಗ, ಸಹ ಪ್ರಾಧ್ಯಾಪಕರಾದ ಡಾ. ಅಶ್ವಿನಿ, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಬಿ.ವಿ. ಕಾರಂತರ ರಂಗಚಾವಡಿ, ರಂಗಾಯಣ, ಸಂಜೆ 4ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ಬೊಂಬೆ ಪ್ರದರ್ಶನ, ಉದ್ಘಾಟನೆ : ರಾಜ ಕೃಷ್ಣಪ್ಪ ನಾಯಕ, ಉಪಸ್ಥಿತರು : ಡಾ. ಹೆಲೆನ್ ಫಿಲಾನ್, ಸ್ಟೀಫೇನ್ ಬ್ಲೋಚ್ ಸಲೋಜ್, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು : ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30 ರಿಂದ.

■ **ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ, ಬೆಳಗ್ಗೆ ಪವಮಾನ ಹೋಮ, ಕಳಶಾಭಿಷೇಕ, ಸಂಜೆ ಗೋ ಪೂಜೆ, ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ದೇವರಾಜ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ. ಸಿ.ನಾಗಣ್ಣ, ನಿರ್ಮಾಣ-ಜಿ. ಶಾಂತಕುಮಾರ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸದಾಶಿವ ಪಾಟೀಲ್, ವ್ಯಾಖ್ಯಾನ : ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಹರಿಣಿ-ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ-ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ- ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯರಾಗ-ಮೈಸೂರಿನಲ್ಲಿ ಕ್ರಿಕೆಟ್ ತರಬೇತಿ ನೀಡುತ್ತಿರುವ ಹಿರಿಯರಾದ ಕೆ.ಎಲ್. ಅನಂತರಾಮಯ್ಯ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ-ಕೀರ್ತನ .ವಿ, 6.50 ಕೃಷಿರಂಗ-ಶುಂಠಿಯ ಕೀಟರೋಗಗಳ ಸಮಗ್ರ ನಿರ್ವಹಣೆ ಈ ಕುರಿತು ಸಂವಾದ, ಭಾಗವಹಿಸುತ್ತಾರೆ-ಮೈಸೂರು ತಾಲೂಕು, ಯಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಕೆ.ಸಿ. ಕಿರಣ್ ಕುಮಾರ್ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕೆ. ರಾಮೇಗೌಡ, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ-ಯುವ ಪ್ರತಿಭೆ-ಯುವ ಶಾಸ್ತ್ರೀಯ ಗಾಯಕ ಮೈಸೂರಿನ ಸುದರ್ಶನ್ ಅಯ್ಯಂಗಾರ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ-ದಿಗ್ವಿಜಯ್ .ಬಿ., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಯವಿನ್ಯಾಸ - ಗುರುವಾಯೂರು ದೊರೈ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ತೆರಿಗೆ ಹಣದ ಆದಾಯಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆ ರೂಪಿಸಿ

ಕೆಡಿಪಿ ಸಭೆಯಲ್ಲಿ ಪಟ್ಟಣ ಪಂಚಾಯಿತಿ, ನಗರಸಭೆ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ

- ತುರ್ತು ಕೌನ್ಸಿಲ್ ಸಭೆ ಕರೆದು ಅನುಮೋದನೆ ಪಡೆಯಿರಿ
- ಕಬಿನಿ ನೀರು ಸರಬರಾಜಿಗೆ ಯೋಜನೆ ರೂಪಿಸಿ
- ಪಾಳು ಬಿದ್ದಿರುವ ಪಾರ್ಕ್ ಅಭಿವೃದ್ಧಿ ಮಾಡಿ
- ಕಾಂಪೌಂಡ್ ನಿರ್ಮಿಸಿ ಶಾಲೆಗಳ ಆಸ್ತಿ ಸಂರಕ್ಷಿಸಿ



ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬುಧವಾರ ಶಾಸಕ ಜಿ.ಟಿ.ದೇವೇಗೌಡರು ಕೆಡಿಪಿ ಸಭೆ ನಡೆಸಿದರು.

ಮೈಸೂರು, ಆ.6(ಬಿಎಲ್‌ಯು)– ತೆರಿಗೆ ಹಣದ ಆದಾಯಕ್ಕೆ ತಕ್ಕಂತೆ ಕ್ರಿಯಾ ಯೋಜನೆ ರೂಪಿಸಿ ಅಭಿವೃದ್ಧಿ ಮಾಡಿ ಎಂದು ಶಾಸಕ ಜಿ.ಟಿ.ದೇವೇಗೌಡರು ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಪಟ್ಟಣ ಪಂಚಾಯಿತಿ ಹಾಗೂ ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಇಂದು ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕ್ರಿಯಾ ಯೋಜನೆ ರೂಪಿಸುವ ಸಂಬಂಧ ತುರ್ತು ಕೌನ್ಸಿಲ್ ಸಭೆ ಕರೆದು ಅನುಮೋದನೆ ಪಡೆಯಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಹೂಟಗಳ್ಳಿ ನಗರಸಭೆ, ಶ್ರೀರಾಂಪುರ, ಬೋಗಾದಿ, ಕಡಕೊಳ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳಿಗೆ ಖಾಸಗಿ ಬಡಾವಣೆ ಹಸ್ತಾಂತರ ಆದ ನಂತರ ದೊಡ್ಡ ಜವಾಬ್ದಾರಿ ಇದೆ. ಇದನ್ನು ಸಮರ್ಥವಾಗಿ ಮಾಡಬೇಕು. ಕುಡಿಯುವ ನೀರು, ವಿದ್ಯುತ್, ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು 2025–26 ನೇ ಸಾಲಿನ ತೆರಿಗೆ ಹಣದ ಆದಾಯಕ್ಕೆ ತಕ್ಕಂತೆ ಕ್ರಿಯಾ ಯೋಜನೆ ರೂಪಿಸಿ ಎಂದು ಜಿ.ಟಿ.ದೇವೇಗೌಡರು ಸೂಚಿಸಿದರು.

ನಗರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಜೂನ್ ತಿಂಗಳ ಕಾಮಗಾರಿಗೆ ಅನುಮೋದನೆ ಪಡೆಯಬೇಕಿತ್ತು. ಆದರೆ ಈವರೆಗೆ ಅನುಮೋದನೆ ಪಡೆದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶ್ರೀರಾಂಪುರ, ಬೋಗಾದಿ ಪಟ್ಟಣ ಪಂಚಾಯಿತಿ ಅವರು ಕಬಿನಿ ನದಿ ಮೂಲದಿಂದ ನೀರು ಸರಬರಾಜು ಮಾಡುವ ಸಂಬಂಧ ಈಗಿನಿಂದಲೇ ಯೋಜನೆ ರೂಪಿಸಿಕೊಳ್ಳಬೇಕು. ನಗರಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಹಂಚಿಕೆ ಮಾಡಬೇಕು. ಇದಲ್ಲದೆ ಜರ್ಮನ್ ಪ್ರೆಸ್ ಮೂಲಕ ಸರ್ದಾರ್ ವಲ್ಲಭಬಾಯ್ ಪಟೇಲ್ ನಗರ ಹಾಗೂ ವಸಂತ ನಗರಕ್ಕೆ ನೀರು ಸರಬರಾಜು ಮಾಡಲು ಗಮನಹರಿಸಿ ಎಂದು ಹೇಳಿದರು.

ಹೂಟಗಳ್ಳಿ ನಗರಸಭೆಯಲ್ಲಿ 250 ಪಾರ್ಕ್‌ಗಳಿವೆ. ಇವುಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡಬೇಕು. ಅದಕ್ಕೂ ಮೊದಲು ಪಾರ್ಕ್‌ಗಳಲ್ಲಿ ಬೆಳೆದಿರುವ ಗಿಡಗಂಟಿ ತೆರವು ಮಾಡಬೇಕು. ಇದಕ್ಕಾಗಿ ಯಂತ್ರಗಳ ಬದಲು ಕಾರ್ಮಿಕರನ್ನು ಬಳಸಿಕೊಳ್ಳಬೇಕು ಎಂದು ತಾಕೀತು ಮಾಡಿದರು.

ಶಾಲೆ ಮತ್ತು ಅಂಗನವಾಡಿಗಳ ಸುತ್ತ ಕಾಂಪೌಂಡ್ ನಿರ್ಮಿಸಿ ಆಸ್ತಿ ಭದ್ರ ಮಾಡಿ. ಜೊತೆಗೆ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಬೇಕು. ಮುಂದೆ ಶಾಲಾ ಕಾಲೇಜು, ಸ್ಮಶಾನಗಳಿಗೆ ಜಾಗ ಸಿಗುವುದಿಲ್ಲ. ಈಗಿರುವ ಜಾಗವನ್ನು ಒತ್ತುವರಿಯಾಗದಂತೆ ಆಸ್ತಿ ಸಂರಕ್ಷಿಸಿ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್‌ಕುಮಾರ್, ನಗರ ಮತ್ತು ಹೊರವಲಯದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಬೇಕು ಎಂದು ಆದೇಶಿಸಿದರು.

ಈ ತನಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿತ್ತು. ಆದರೆ ಈಗ ನಿರ್ವಹಣೆ ಅವಧಿ ಮುಗಿದಿದೆ. ಈ ಹಿನ್ನೆಲೆ ಈಗ ಪಟ್ಟಣ ಪಂಚಾಯಿತಿಗಳು ಯಥಾಸ್ಥಿತಿಯಲ್ಲಿ ಅವುಗಳನ್ನು ಪಡೆಯಬೇಕು ಸೂಚಿಸಿದರು.

ಎಂಡಿಎ ಆಯುಕ್ತ ಕೆ.ಎಂ. ರಕ್ಷಿತ್, ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಸವಿತಾ, ತಹಶೀಲ್ದಾರ್ ಮಹೇಶ್ ಕುಮಾರ್, ಚೆಸ್ಕಾಂ ಅಧೀಕ್ಷಕ ಅಭಿಯಂತರ ಸುನೀಲ್‌ಕುಮಾರ್, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ವಿ. ಪ್ರಿಯದರ್ಶಿನಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಕೃಷ್ಣ ಈ ವೇಳೆ ಹಾಜರಿದ್ದರು.

ಸಭೆಗೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ಜಾರಿ

ಕೆಡಿಪಿ ಸಭೆಯಲ್ಲಿ ಪಾಲ್ಗೊಳ್ಳದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿ ಎಂದು ಶಾಸಕ ಜಿ.ಟಿ.ದೇವೇಗೌಡರು ತಾಲೂಕು ಪಂಚಾಯತ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಸೂಚನೆ ನೀಡಿದರು.

ಪೊಲೀಸ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇಂದಿನ ಸಭೆಯಲ್ಲಿ ಗೈರಾಗಿದ್ದರು. ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಜಿ.ಟಿ.ದೇವೇಗೌಡರು, ಕೆಡಿಪಿ ಸಭೆಗೆ ಎಲ್ಲಾ ಅಧಿಕಾರಿಗಳು ಪಾಲ್ಗೊಳ್ಳಬೇಕು. ಆದರೂ ಬಾರದಿರುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ನೋಟಿಸ್ ಜಾರಿ ಮಾಡಿ ನನಗೆ ವರದಿ ನೀಡಿ ಎಂದು ಇಒಗೆ ಸೂಚಿಸಿದರು. ಹಿರಿಯ ಅಧಿಕಾರಿಗಳು ಮುಂಜಾನೆ ರೌಂಡ್ ಹಾಕಿದರೆ ಇಂಜಿನಿಯರ್‌ಗಳು ಹಾಗೂ ಆರೋಗ್ಯ ನಿರೀಕ್ಷಕರು ಎಚ್ಚೆತ್ತುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳು ಈ ಕಾರ್ಯ ಕೈಗೊಳ್ಳಬೇಕು ಎಂದು ಸೂಚಿಸಿದ ಜಿ.ಟಿ.ದೇವೇಗೌಡರು, ಬಂಡಿಪಾಳ್ಯ ಹಾಗೂ ಹೊಸಹುಂಡಿ ಮಾರ್ಗದಲ್ಲಿ ತ್ಯಾಜ್ಯ ತೆರವು ಮಾಡಬೇಕು ಎಂದು ಸೂಚಿಸಿದರು.

ಹಳ್ಳಿಗಳಲ್ಲಿರುವ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಬೇಕು. ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವನೆ ಪ್ರಕರಣ ಮತ್ತೆ ಮರುಕಳಿಸಬಾರದು. ಒಂದು ವೇಳೆ ಮತ್ತೆ ಇಂತಹ ಘಟನೆ ನಡೆದರೆ ನಾನು ಸುಮ್ಮನಿರುವುದಿಲ್ಲ ಎಂದು ಎಚ್ಚರಿಸಿದರು. ಕಂದಾಯಾಧಿಕಾರಿಗಳು ಗ್ರಾಮಗಳಿಗೆ ವಾರಕ್ಕೊಮ್ಮೆ ಭೇಟಿ ನೀಡಬೇಕು. ಗೋಮಾಳ ದುರ್ಬಳಕೆಯಾಗದಂತೆ ಸರ್ವೆ ಮಾಡಿಸಿ ದಾಖಲೆ ಸಿದ್ಧಪಡಿಸಬೇಕು. ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಬೇಕು ಎಂದು ಹೇಳಿದರು.

ಪ್ರಜ್ವಲ್ ರೇವಣ್ಣರಿಗೆ ಜೀವಾವಧಿ ಶಿಕ್ಷೆ ವಿಧಿಸಿರುವುದು ಜೆಡಿಎಸ್ ಪಕ್ಷಕ್ಕೆ ಹಿನ್ನಡೆಯಾಗಲ್ಲ

ಮೈಸೂರಿನಲ್ಲಿ ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ

▸ ಘಟನೆ ನಡೆದಾಗಲೇ ಪ್ರಜ್ವಲ್ ವಿರುದ್ಧ ಕ್ರಮ ಕೈಗೊಂಡಿದ್ದೆವು ▸ ನ್ಯಾಯಾಲಯದ ತೀರ್ಪು ಪರಾಮರ್ಶಿಸಲ್ಲ ▸ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ▸ ಚುನಾವಣೆ ವೇಳೆ ಮಾತ್ರ ಸಂಘಟನೆಗೆ ಬಳಸಿಕೊಳ್ಳುತ್ತಾರೆ

ಮೈಸೂರು, ಆ.6(ಬಿಎಲ್ ಯು)– ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿರುವ ಪ್ರಕರಣದಿಂದ ಜೆಡಿಎಸ್ ಪಕ್ಷಕ್ಕೆ ಹಿನ್ನಡೆ ಅಥವಾ ಮುಜುಗರ ಆಗುವುದಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಪಂಚಾಯತ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಇದು ಹಳೆಯ ಘಟನೆಯಾಗಿದ್ದು, ಈಗ ತೀರ್ಪು ಬಂದಿದೆ. ಘಟನೆ ನಡೆದ ಸಂದರ್ಭದಲ್ಲಿ ನಾವು ಕ್ರಮ ಕೈಗೊಂಡಿದ್ದೇವೆ. ಮತ್ತೆ ಈ ಬಗ್ಗೆ ಚರ್ಚೆ ಅನವಶ್ಯಕ ಎಂದು ಹೇಳಿದರು.

ಪ್ರಜ್ವಲ್ ರೇವಣ್ಣ ಅವರಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ನ್ಯಾಯಾಲಯದ ತೀರ್ಪು ದೇವರ ತೀರ್ಪು ಇದ್ದಂತೆ. ದೇವರ ತೀರ್ಪನ್ನು ನಾನು ಸರಿ ಅಥವಾ ತಪ್ಪು ಎಂದು ಪರಾಮರ್ಶೆ ಮಾಡುವುದಿಲ್ಲ. ನ್ಯಾಯಾಲಯ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದೆ. ಅವರು ಮೇಲ್ಮನವಿ ಸಲ್ಲಿಸಬಹುದು ಎಂದು ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದರು.

ಚುನಾವಣೆ ವೇಳೆ ಸಂಘಟನೆಗೆ ಬಳಸಿಕೊಳ್ಳುತ್ತಾರೆ: ಜೆಡಿಎಸ್ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ನನ್ನನ್ನು ಚುನಾವಣೆ ಸಂದರ್ಭದಲ್ಲಿ ಮಾತ್ರ ಸಂಘಟನೆಗೆ ಬಳಸಿಕೊಳ್ಳುತ್ತಾರೆ. ಆದರೆ ಈಗ ನಾನು ನನ್ನ ಕ್ಷೇತ್ರ ಬಗ್ಗೆ ಮಾತ್ರ ಗಮನ ನೀಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಬಹಳಷ್ಟು ಸಮಸ್ಯೆಗಳಿದ್ದು, ಅದನ್ನು ಪರಿಹರಿಸಲು ಮುಂದಾಗಿದ್ದೇನೆ. ಇದರಿಂದ ಸಂಘಟನೆ ಬಗ್ಗೆ ಗಮನ ನೀಡಿಲ್ಲ ಎಂದು ತಿಳಿಸಿದರು. ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಪಕ್ಷದ ಸಂಘಟನೆ ಮಾಡುತ್ತಿದ್ದಾರೆ. ವಿಜಯೇಂದ್ರ ಬಿಜೆಪಿ ಪಕ್ಷದ ಸಂಘಟನೆಯಲ್ಲಿ ತೊಡಗಿದ್ದಾರೆ. ಅವರವರ ಪಕ್ಷದ ಸಂಘಟನೆ ಮಾಡಿಕೊಳ್ಳುತ್ತಿದ್ದು, ಪಕ್ಷವನ್ನು ಕಾಪಾಡಿಕೊಳ್ಳುವುದು ಕಾರ್ಯಕರ್ತರಿಗೆ ಮುಖ್ಯವಾಗಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ನಿಯಮಾನುಸಾರ ಖಾತೆ ಮಾಡದಿದ್ದರೆ ನಿರ್ದಾಕ್ಷಿಣ್ಯ ಕ್ರಮ

ನಗರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಎಚ್ಚರಿಕೆ

ಮೈಸೂರು, ಆ.6(ಬಿಎಲ್‌ಯು)– ನಗರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ನಿಯಮಾನುಸಾರ ಖಾತೆ ಮಾಡದಿದ್ದರೆ ಕಂದಾಯಾಧಿಕಾರಿಗಳು ಸೇರಿದಂತೆ ಇತರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇನೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಇಂದು ನಡೆದ ಚಾಮುಂಡೇಶ್ವರಿ ಕ್ಷೇತ್ರದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಒಂದಾದ ನಂತರ ಒಂದು ಖಾತೆಯನ್ನು ಮಾಡುತ್ತಾ ಹೋಗಬೇಕು. ಅದು ಬಿಟ್ಟು ಮೊದಲು ಬಂದವರ ಅರ್ಜಿ ಬದಿಗಿಟ್ಟು ತಮಗಿಷ್ಟ ಬಂದಂತೆ ಖಾತೆಗಳ ಮಾಡಿದರೆ ಅದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ದಾಖಲಾತಿ ಸರಿ ಇಲ್ಲದಿದ್ದರೆ ಕಾರಣ ನೀಡಿ ಅದನ್ನು ತಿರಸ್ಕರಿಸಿ. ಅದು ಬಿಟ್ಟು ಯಾವುದೇ ಕಾರಣ ನೀಡದೆ, ಆ ಖಾತೆಗಳನ್ನು ಕ್ಲಿಯರ್ ಮಾಡದೆ ಇಟ್ಟುಕೊಂಡಿದ್ದರೆ ಕ್ರಮ ಖಚಿತ ಎಂದು ಹೇಳಿದರು.

ಮುಡಾದಿಂದ ಎಷ್ಟು ಖಾಸಗಿ ಬಡಾವಣೆ ಹಸ್ತಾಂತರವಾಗಿವೆ, ಎಷ್ಟು ಬಾಕಿ ಇವೆ. ಯಾವ ಪಂಚಾಯಿತಿಯಲ್ಲಿ ಎಷ್ಟು ಖಾತೆ ಬಾಕಿ ಉಳಿದಿದೆ ಎಂದು ಒಂದು ವಾರದಲ್ಲಿ ನನಗೆ ಸಮಗ್ರ ವರದಿ ನೀಡಬೇಕು ಎಂದು ಲಕ್ಷ್ಮಿಕಾಂತ ರೆಡ್ಡಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ವೇಳೆ ಮಾಹಿತಿ ನೀಡಿದ ಶ್ರೀರಾಂಪುರ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಹೆಚ್.ಎಂ. ಸುರೇಶ್, ಮುಡಾದಿಂದ 23,330 ಮನೆಗಳು ಹಾಗೂ ನಿವೇಶನಗಳನ್ನು ಹಸ್ತಾಂತರ ಮಾಡಿಕೊಂಡಿದ್ದೇವೆ. ಇದರಲ್ಲಿ 1046 ಖಾತೆ ಮಾಡಿದ್ದೇವೆ ಎಂದು ಮಾಹಿತಿ ನೀಡಿದರು.

ನಂತರ ವಿವರಣೆ ನೀಡಿದ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್, 65 ಖಾಸಗಿ ಬಡಾವಣೆ ಹಸ್ತಾಂತರವಾಗಿದೆ. ಇದರಲ್ಲಿ 15,695 ಆಸ್ತಿಗಳು ಸೇರಿವೆ. ಇಲ್ಲಿ 5 ಸಾವಿರ ಖಾತೆ ಮಾಡಲಾಗಿದ್ದು, 222 ಆನ್‌ಲೈನ್ ಅರ್ಜಿಗಳ ವಿಲೇವಾರಿಯಾಗಬೇಕಿದೆ ಎಂದು ತಿಳಿಸಿದರು. ತರುವಾಯ ಮಾಹಿತಿ ನೀಡಿದ ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂಜಯ್‌ಕುಮಾರ್, ಮುಡಾದಿಂದ 13,300 ಆಸ್ತಿ ಹಸ್ತಾಂತರವಾಗಿದ್ದು, ಇದರಲ್ಲಿ 10,200 ನಿವೇಶನಗಳು, 31,000 ಮನೆಗಳು ಸೇರಿವೆ. ಈಗಾಗಲೇ 1080 ಖಾಸಗಿ ನಿವೇಶನಗಳ ಖಾತೆ ಬಾಕಿ ಇದ್ದು, 150 ಖಾತೆ ಮಾಡಿಕೊಡಲಾಗಿದೆ ಎಂದರು.

ಅಭಿವೃದ್ಧಿ ಮರೆತಿದ್ದಾರೆ: ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ಎಲ್ಲಾ ಅಧಿಕಾರಿಗಳಿಗೆ ಈಗ ಖಾತೆ ಮಾಡುವುದೇ ದಿನದ ಕೆಲಸವಾಗಿದೆ. ಖಾತೆ ಮಾಡುವುದನ್ನು ಆರಂಭಿಸಿದ ಮೇಲೆ ಅಭಿವೃದ್ಧಿ ಕಾರ್ಯವನ್ನೆ ಅಧಿಕಾರಿಗಳು ಮರೆತಿದ್ದಾರೆ. ಖಾತೆ ಜೊತೆ ಅಭಿವೃದ್ಧಿ ಮರೆತರೆ ನಾನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಸಚಿವರು, ಹಿರಿಯ ಅಧಿಕಾರಿಗಳ ಸಭೆ ಸೇರಿದಂತೆ ಬಹಳಷ್ಟು ಒತ್ತಡದ ಕಾರ್ಯವಿದ್ದರೂ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಒಂದೇ ಒಂದು ಕಡತ ಕ್ಲಿಯರ್ ಮಾಡದೆ ಇಟ್ಟುಕೊಳ್ಳುವುದಿಲ್ಲ. ಆಯಾ ದಿನದ ಕೆಲಸವನ್ನು ಆಯಾ ದಿನವೇ ಮಾಡುತ್ತಾರೆ. ಅಷ್ಟು ಒತ್ತಡದ ಕೆಲಸ ಇರುವ ಜಿಲ್ಲಾಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಆದರೆ ನೀವು ಜಿಲ್ಲಾಧಿಕಾರಿಗಳ ಮಾದರಿಯಲ್ಲಿ ಕೆಲಸ ಮಾಡಲು ಏನು ಕಷ್ಟ ಎಂದು ಜಿ.ಟಿ.ದೇವೇಗೌಡರು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಯತೀಂದ್ರ, ಸಿದ್ದರಾಮಯ್ಯ ಬೆಂಬಲವಿದೆ ಎಂಬ ಭ್ರಮೆ ಬಿಡಿ

ಸಮರ್ಥವಾಗಿ ಕೆಲಸ ಮಾಡದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ. ಆಗ ವಿಧಾನಪರಿಷತ್ ಸದಸ್ಯ ಯತೀಂದ್ರ ಮಾತ್ರವಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಹೋದರೂ ನಿಮಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಏಕೆಂದರೆ ಅವರು ಅಭಿವೃದ್ಧಿ ವಿಷಯದಲ್ಲಿ ಎಂದೂ ರಾಜಕೀಯ ಮಾಡಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸರಿಯಾಗಿ ಕೆಲಸ ಮಾಡದಿದ್ದರೆ ಯತೀಂದ್ರ ಹಾಗೂ ಸಿದ್ದರಾಮಯ್ಯ ಅವರು ಕೂಡ ನಿಮ್ಮ ಬೆಂಬಲಕ್ಕೆ ಬರುವುದಿಲ್ಲ. ಆದ ಕಾರಣ ನಮಗೆ ಪ್ರಭಾವವಿದೆ ಎಂಬ ಭ್ರಮೆ ಬಿಟ್ಟು ಸಮರ್ಥವಾಗಿ ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ಮರು ಎಚ್ಚರಿಕೆ ನೀಡಿದರು.

ಜಿ.ವಿ.ಸೀತಾರಾಮ್ ವಿರುದ್ಧ ಕಾನೂನು ಕ್ರಮ ಆಗುವವರೆಗೂ ಹೋರಾಟ

ಒಕ್ಕಲಿಗ ಸಮುದಾಯದ ಮುಖಂಡರ ನಿರ್ಣಯ



ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮಿನಿ ಸಭಾಂಗಣದಲ್ಲಿ ಬುಧವಾರ ನಡೆದ ಸಭೆಯಲ್ಲಿ ಕಾವಲುಪಡೆ ಮೋಹನ್‌ಕುಮಾರ್‌ಗೌಡ ಮಾತನಾಡಿದರು. ಸಾಮಾಜಿಕ ಹೋರಾಟಗಾರ ಎನ್.ಗಂಗರಾಜು, ಮುಡಾ ನಿವೃತ್ತ ಅಧಿಕಾರಿ ನಟರಾಜ್, ಟ್ರಸ್ಟ್‌ನ ರವಿಕುಮಾರ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.6(ಪಿಎಂ)– ಕಾಂಗ್ರೆಸ್ ಮುಖಂಡ ಜಿ.ವಿ.ಸೀತಾರಾಮ್ ಒಕ್ಕಲಿಗ ಸಮುದಾಯ ನಿಂದಿಸಿ ಕಾನೂನುಬಾಹಿರ ಕೃತ್ಯ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಒಕ್ಕಲಿಗ ಸಮುದಾಯದ ಮುಖಂಡರು, ಜಿ.ವಿ.ಸೀತಾರಾಮ್ ವಿರುದ್ಧ ಕಾನೂನು ಕ್ರಮ ಆಗಲೇಬೇಕು. ಆವರೆಗೂ ನಿರಂತರ ಹೋರಾಟ ಮಾಡಬೇಕೆಂಬುದೂ ಸೇರಿದಂತೆ ವಿವಿಧ ನಿರ್ಣಯಗಳನ್ನು ಕೈಗೊಂಡರು.

ಮೈಸೂರಿನ ಜಯನಗರದ ಹೊಸ ನ್ಯಾಯಾಲಯದ ಎದುರಿರುವ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮಿನಿ ಸಭಾಂಗಣದಲ್ಲಿ ಒಕ್ಕಲಿಗರ ಅಭಿವೃದ್ಧಿಯ ಹಿತಚಿಂತಕರು ಮೈಸೂರು ವತಿಯಿಂದ ಒಕ್ಕಲಿಗರ ಬಗ್ಗೆ ಅವಹೇಳಕಾರಿಯಾಗಿ ಮಾತನಾಡಿರುವುದನ್ನು ಖಂಡಿಸುವ ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವ ಸಂಬಂಧ ಬುಧವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಒಕ್ಕಲಿಗ ಸಮುದಾಯದ ಕೆಂಚೇಗೌಡರು ಸರ್ಕಾರಕ್ಕೆ ದಾನವಾಗಿ ನೀಡಿದ್ದ ಭೂಮಿಗೆ ಸಂಬಂಧಿಸಿದಂತೆ ಮಾತನಾಡುವಾಗ ಜಿ.ವಿ.ಸೀತಾರಾಮ್, ಒಕ್ಕಲಿಗ ಸಮುದಾಯವನ್ನು ನಿಂದಿಸಿದ್ದಾರೆ. ಸದರಿ ಭೂಮಿಯು ಕಾವೇರಿ ನೀರಾವರಿ ನಿಗಮದ ಆಸ್ತಿಯಾಗಿದೆ. ನಿಗಮವು ಕೂಡಲೇ ಸದರಿ ಜಮೀನು ವಶಕ್ಕೆ ಪಡೆಯಬೇಕು. ಜೊತೆಗೆ ಕಾನೂನು ಬಾಹಿರವಾಗಿ ಬೇಲಿ ಹಾಕಿರುವುದಕ್ಕೆ ನಿಗಮ ಸಹ ಕಾನೂನು ರೀತಿ ಕ್ರಮ ಜರುಗಿಸಬೇಕು. ಸೀತಾರಾಮ್‌ಗೆ ಸದರಿ ಭೂಮಿ ಕೊಡಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ. ನಿಗಮಕ್ಕೆ ಈ ಭೂಮಿ ಅವಶ್ಯಕತೆ ಇಲ್ಲವಾದಲ್ಲಿ ಕೆಂಚೇಗೌಡರ ಕುಟುಂಬಕ್ಕೆ ಹಿಂತಿರುಗಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ತೀರ್ಮಾನಿಸಲಾಯಿತು.

ಜೊತೆಗೆ ಇನ್ನು 15 ದಿನಗಳ ಒಳಗೆ ಸರ್ಕಾರ ಸೀತಾರಾಮ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಬೃಹತ್ ಪ್ರತಿಭಟನೆ ನಡೆಸಲು ಹಾಗೂ ಸೀತಾರಾಂ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಹೋರಾಟ ನಡೆಸಲು ಸಮಿತಿ ರಚಿಸಲೂ ನಿರ್ಣಯ ಕೈಗೊಳ್ಳಲಾಯಿತು. ಇನ್ನು ಮುಂದೆ ಯಾವುದೇ ಜಾತಿ ಜನಾಂಗದ ನಿಂದನೆ ಮಾಡಿದವರ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತಾಗಲೂ ಹೋರಾಟ ಮಾಡಬೇಕೆಂದು ಮುಖಂಡರು ನಿರ್ಣಯ ಕೈಗೊಂಡರು.

ಸಾಮಾಜಿಕ ಹೋರಾಟಗಾರ ಎನ್.ಗಂಗರಾಜು ಪ್ರಾಸ್ತಾವಿಕವಾಗಿ ಮಾತನಾಡಿ, ಜು.21ರಂದು ಡಿ.ಪಿ.ಕೆ ಪರಮೇಶ್ ಎಂಬವರೊಂದಿಗೆ ಸೀತಾರಾಂ ಅವಹೇಳಕಾರಿಯಾಗಿ ಮಾತನಾಡಿದ್ದಾರೆ. 1961ರ ಪೂರ್ವದಲ್ಲಿ ಕಬಿನಿ ಜಲಾಶಯ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ನಡೆಯಿತು. ಈ ಪೈಕಿ ನಮ್ಮ ಸಮುದಾಯದ ಕೆಂಚೇಗೌಡ ಅವರ ಭೂಮಿ ಸಹ (ಅಂತರಸಂತೆ ಹೋಬಳಿಯ ಬೀಚನಹಳ್ಳಿ ಗ್ರಾಮದ ಸ.ನಂ 20ರ 8 ಎಕರೆ 30 ಗುಂಟೆ ಭೂಮಿ) ಸೇರಿತ್ತು. ನಂತರ ಕೆಲ ರೈತರ ಭೂಮಿಯನ್ನು ಅವಶ್ಯಕತೆ ಇಲ್ಲವೆಂದು ರೈತರಿಗೆ ಬಿಟ್ಟುಕೊಡಲಾಯಿತು. ಅದೇ ರೀತಿ ವಾಪಸ್ ಕೊಟ್ಟ ಭೂಮಿಯನ್ನು ಕೆಂಚೇಗೌಡರು ಸರ್ಕಾರಕ್ಕೆ ದಾನ ಮಾಡಿದರು ಎಂದು ವಿವರಿಸಿದರು.

ಆ ಸಂದರ್ಭದಲ್ಲಿ ಸೀತಾರಾಮ್ ಎಂಬ ಈ ವ್ಯಕ್ತಿ ಗುತ್ತಿಗೆದಾರ ಅಥವಾ ಉಪ ಗುತ್ತಿಗೆದಾರರಾಗಿ ಅಲ್ಲಿ ಕೆಲಸ ಮಾಡಿದ್ದಾರೆ. ಆಗ ಕೂಲಿ ಕಾರ್ಮಿಕರಿಗೆ ಶೆಡ್ ನಿರ್ಮಿಸಲು ಕೆಂಚೇಗೌಡರ ಭೂಮಿ ಬಳಸಿಕೊಳ್ಳಲಾಗಿದೆ. ಈಗಲೂ ಈ ಸೀತಾರಾಮ್ ಸದರಿ ಭೂಮಿಯನ್ನು ತನ್ನದೇ ಎಂದು ಪ್ರತಿಪಾದಿಸುತ್ತಿದ್ದಾರೆ. ನಮ್ಮ ಸಮುದಾಯದ ಒಬ್ಬರು ಆರ್‌ಟಿಐ ಮೂಲಕ ಮಾಹಿತಿ ಪಡೆದು ಪ್ರಶ್ನೆ ಮಾಡಲು ಪ್ರಾರಂಭಿಸಿದಾಗ, ಈ ರೀತಿಯಲ್ಲಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಸೀತಾರಾಮ್ ಅವರ ಸಮುದಾಯದವರೇ ಆದ ಡಿ.ಪಿ.ಕೆ.ಪರಮೇಶ್ ಎಂಬುವರೊಂದಿಗೆ ಸದರಿ ಭೂಮಿ ಸಂಬಂಧ ವಿಮರ ಕೇಳುವ ಸಂದರ್ಭದಲ್ಲಿ ಸೀತಾರಾಮ್ ಒಕ್ಕಲಿಗರ ಸಮುದಾಯವನ್ನು ನಿಂದಿಸಿದ್ದಾರೆ ಎಂದು ದೂರಿದರು.

ಸಭೆ ಯಾವುದೇ ಸಮುದಾಯದ ವಿರುದ್ಧವಲ್ಲ: ಇದಕ್ಕೂ ಮುನ್ನ ಪ್ರಾರಂಭದಲ್ಲಿ ಮಾತನಾಡಿದ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ರವಿಕುಮಾರ್, ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆ ನಡೆಯದಂತೆ ನೋಡಿಕೊಳ್ಳಬೇಕು. ಒಕ್ಕಲಿಗ ಸಮುದಾಯವು ನಿಜವಾದ ಜಾತ್ಯಾತೀತ ಜನಾಂಗವಾಗಿದೆ. ಯಾವುದೇ ಸಮುದಾಯದ ವಿರುದ್ಧವಾಗಿ ಈ ಸಭೆ ನಡೆಸುತ್ತಿಲ್ಲ. ಸಮುದಾಯ ನಿಂದಿಸಿದ ವ್ಯಕ್ತಿ ವಿರುದ್ಧವಷ್ಟೇ ನಮ್ಮ ಹೋರಾಟ ಎಂದರು.

ಕನ್ನಡಪರ ಹೋರಾಟಗಾರ ಮೋಹನ್ ಕುಮಾರ್ ಗೌಡ ಮಾತನಾಡಿ, ಸೀತಾರಾಮ್ ಅವರಿಗೆ ಈ ರೀತಿಯಲ್ಲಿ ಜಾತಿ ನಿಂದನೆ ಮಾಡಬಾರದು ಎಂಬ ಅರಿವು ಇರಬೇಕಿತ್ತು. ಆದರೆ ಈಗ ಕ್ಷಮೆ ಕೇಳಿದ್ದಾರೆ. ಈಗಾಗಲೇ ಅವರನ್ನು ಪೊಲೀಸರು ಬಂಧಿಸಬೇಕಿತ್ತು ಎಂದು ಕಿಡಿಕಾರಿದರು.

ಮುಡಾ ನಿವೃತ್ತ ಅಧಿಕಾರಿ ನಟರಾಜ್ ಮಾತನಾಡಿ, ನಮ್ಮ ಸಮುದಾಯ ತುಳಿದು ಮೂಲೆಗುಂಪು ಮಾಡುವ ಪ್ರಯತ್ನ ನಡೆಯುತ್ತಿದೆ. ಹಾಗಾಗಿ ನಾವು ಈಗ ಮೌನ ವಹಿಸಿದರೆ, ನಮ್ಮ ಮುಂದಿನ ಪೀಳಿಗೆ ಪರಿತಪಿಸಲಿದೆ. ಈ ಪ್ರಕರಣದಲ್ಲಿ ಸಮುದಾಯದವರ ಜಮೀನು ಕಬಳಿಸಿದ್ದಲ್ಲದೆ, ನಮ್ಮ ಸಮುದಾಯವನ್ನು ಅವಹೇಳನ ಮಾಡಿರುವುದು ಖಂಡನಾರ್ಹ. ತನ್ನ ವೈಯಕ್ತಿಕ ವಿಚಾರಕ್ಕೆ ಯಾವುದೇ ಸಮುದಾಯವನ್ನು ಅಪಮಾನ ಮಾಡುವುದು ಸರಿಯಲ್ಲ ಎಂದು ಖಂಡಿಸಿದರು.

ಎಂಜಿಪಿ ಸಂಚಾಲಕ ಭಾನು ಪ್ರಶಾಂತ್, ಒಕ್ಕಲಿಗರ ಸಂಘ ಪೂರ್ವ ವಲಯದ ಪ್ರಧಾನ ಕಾರ್ಯದರ್ಶಿ ಶಂಕರ್, ಮೈಸೂರು ತಾಲೂಕು ಒಕ್ಕಲಿಗರ ಸಂಘದ ಅರುಣ್‌ಕುಮಾರ್, ನಿವೃತ್ತ ಎಸ್‌ಐ ಮರೀಗೌಡ, ಮುಖಂಡರಾದ ಸ್ವಾಮಿಗೌಡ, ಶಂಭುಲಿಂಗೇಗೌಡ, ನಾರಾಯಣ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಿ ಕೆಲಸಕ್ಕಾಗಿ ಓದದೇ ಕನ್ನಡ ಕಟ್ಟುವ, ಬೆಳೆಸುವ, ಬೆಳೆಯುವ ದೃಷ್ಟಿಯಿಂದ ಓದಿ

‘ಸನ್ಮಾನ-ಬಹುಮಾನ’ 2025 ಕಾರ್ಯಕ್ರಮದಲ್ಲಿ ಎಂಎಲ್‌ಸಿ ವಿಶ್ವನಾಥ್ ಸಲಹೆ



ಕನ್ನಡ ಮಾಧ್ಯಮದಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಎಂಎಲ್‌ಸಿ ವಿಶ್ವನಾಥ್ ಸನ್ಮಾನ ಮಾಡಿದರು.

ಮೈಸೂರು, ಆ.6(ವಿವಿಹೆಚ್)– ವಿದ್ಯಾರ್ಥಿಗಳು ಭವಿಷ್ಯದಲ್ಲಿ ಬಹಳ ದೊಡ್ಡ ಆಶಯಗಳನ್ನಿಟ್ಟುಕೊಂಡು ಓದಬೇಕು. ಕೇವಲ ಸರ್ಕಾರಿ ಕೆಲಸಗಳಿಗಾಗಿ ಮಾತ್ರ ಓದದೇ, ಕನ್ನಡವನ್ನು ಕಟ್ಟುವ, ಕನ್ನಡವನ್ನು ಬೆಳೆಸುವ ಮತ್ತು ಕನ್ನಡದಿಂದ ನಾವು ಬೆಳೆಯುವ ಕೆಲಸವನ್ನು ಮಾಡುವ ಸಲುವಾಗಿ ಓದಬೇಕು ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ತಿಳಿಸಿದರು.

ಕನ್ನಡ ಗೆಳೆಯರ ಬಳಗ, ನೃಪತುಂಗ ಕನ್ನಡ ಶಾಲೆ ಸಂಯುಕ್ತಾಶ್ರಯದಲ್ಲಿ ಮೈಸೂರಿನ ರಾಮಕೃಷ್ಣನಗರದ ರಮಾ ಗೋವಿಂದ ರಂಗ ಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ‘ಸನ್ಮಾನ–ಬಹುಮಾನ’–2025ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳ ಯಶಸ್ಸನ್ನು ಕಂಡು ಹೆಚ್ಚು ಸಂತೋಷ ಪಡುವವರು ಹೆತ್ತವರು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಡುತ್ತಾರೆ. ತಂದೆ ತಾಯಿಯ ಶ್ರಮಕ್ಕೆ ಪ್ರತಿಫಲವೆಂದರೆ ಮಕ್ಕಳು ಸಮಾಜದ ಉತ್ತಮ ಪ್ರಜೆಗಳಾಗಿ ತನ್ನ ಪರಿಸರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದು ಎಂದರು.

ಈಗಿನ ಕಾಂಪಿಟೇಟಿವ್ ಯುಗದಲ್ಲಿ ಕನ್ನಡ ಮಾಧ್ಯಮ ಮಕ್ಕಳು ಯಾರಿಗೂ ಕಮ್ಮಿ ಇಲ್ಲದಂತೆ ಶೇ.90ಕ್ಕಿಂತಲೂ ಅಧಿಕ ಅಂಕ ಪಡೆದು ತೇರ್ಗಡೆ ಹೊಂದುತ್ತಿರುವುದು ಸಂತಸದ ವಿಷಯ. ನಾವೆಲ್ಲ ಕನ್ನಡದಲ್ಲಿಯೇ ಓದಿದವರು, ಕನ್ನಡಕ್ಕಾಗಿಯೇ ಇರುವವರು, ಕನ್ನಡಕ್ಕಾಗಿಯೇ ದುಡಿಯುವವರು. ನಮ್ಮ ಮುಂದಿನ ಪೀಳಿಗೆಯೂ ಸಹಾ ಕನ್ನಡಕ್ಕಾಗಿಯೇ ಕೆಲಸ ಮಾಡುವಂತವರಾಗಬೇಕು ಎಂದು ಸಲಹೆ ನೀಡಿದರು.

ಪ. ಮಲ್ಲೇಶ ಅವರು ಕನ್ನಡ ಬಗೆಗಿನ ದೂರದೃಷ್ಟಿಯಿಂದ ನೃಪತುಂಗ ಕನ್ನಡ ಶಾಲೆಯನ್ನು ನಿರ್ಮಿಸಿದ್ದಾರೆ. ಈ ಸಂಸ್ಥೆಯನ್ನು ಬೆಳೆಸಬೇಕಿರುವ ಜವಾಬ್ದಾರಿ ನಮ್ಮದಾಗಿದ್ದು, ಕನ್ನಡದ ಒಳಿತಿಗಾಗಿ ಸದಾ ಜೊತೆಯಲ್ಲಿರುತ್ತೇವೆ ಎಂದು ಹೇಳಿದರು. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸ.ರ. ಮಾಣಿಕ್ಯ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಕರ ಪಾತ್ರ ದೊಡ್ಡದು. ಶಿಕ್ಷಕರನ್ನು ಅನುಸರಿಸಿದ ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಮುಟ್ಟುತ್ತಾರೆ ಎಂದರು.

ಓದು ಎಂಬುದು ಕೆಲವರಿಗೆ ಕ್ಲಿಷ್ಟಕರವಾದ ಅಂಶವಾಗಿದ್ದು, ಕಲಿಕಾ ಹಂತದಲ್ಲಿ ವಿದ್ಯಾರ್ಥಿಗಳು ಯಾವುದನ್ನೇ ಆಗಲಿ ಸಂಪೂರ್ಣ ಇಚ್ಛೆಯಿಂದ ಕಲಿತು, ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಪೋಷಕರ ಸಂತೋಷವನ್ನು ಕಾಣಬೇಕು ಎಂದು ತಿಳಿಸಿದರು.

ಕನ್ನಡ ಮಾಧ್ಯಮದಲ್ಲಿ ಅತೀಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಜಿ.ಎನ್.ಪ್ರಜ್ವಲ್ (ದೊಡ್ಡಮುಲಗೂಡು), ಎಂ.ಮಹೇಶ್ (ದೇವಲಾಪುರ), ಎನ್.ಎಂ.ವಿನುತಾ (ಹನುಮನಹಳ್ಳಿ), ಪ್ರೇಮಾಂಜಲಿ (ಡಿ. ಸಾಲುಂಡಿ), ಸಿ.ಬಿ.ನಿತ್ಯಾ(ಹರವೆ), ಕೀರ್ತನಾ.ಜೆ (ಚಟ್ಟನಹಳ್ಳಿ), ರಮ್ಯಶ್ರೀ(ವರಕೋಡು), ಸುಪ್ರಿತಾ (ಡಿ. ಸಾಲುಂಡಿ), ಎಸ್.ನಿತಿನ್(ಉದ್ಬೂರು), ಎಸ್.ಸುನೀತಾ(ಮೈಸೂರು), ಡಿ.ಎಂ.ಸಿಂಚನಾ (ಮುಳ್ಳೂರು) ಮತ್ತು ಕೆ.ಶಿವಾನಿ(ಕನಕಗಿರಿ, ಮೈಸೂರು) ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ಗೆಳೆಯರ ಬಳಗದ ರಾ.ನಂ.ಚಂದ್ರಶೇಖರ, ನೃಪತುಂಗ ಶಾಲೆ ಉಪಾಧ್ಯಕ್ಷ ಸ.ರ.ಸುದರ್ಶನ್, ಬಾ.ಹ.ಉಪೇಂದ್ರ, ಮ.ಚಂದ್ರಶೇಖರ, ಬಿ.ವಿ.ರವಿಕುಮಾರ್, ಹೊಸೂರು ನಾಗರಾಜ್, ಕೃಷ್ಣಪ್ಪ ಉಪಸ್ಥಿತರಿದ್ದರು.

ನಮ್ಮ ಸ್ನೇಹಿತರು, ಈಗಿನ ಸಿಎಂ ಸರ್ಕಾರ ಕನ್ನಡ ಶಾಲೆಗಳನ್ನೇ ಮರೆತುಬಿಟ್ಟಿದೆ

ನಮ್ಮ ಸ್ನೇಹಿತರು, ಈಗಿನ ಮುಖ್ಯಮಂತ್ರಿಗಳ ಸರ್ಕಾರ ಕನ್ನಡ ಶಾಲೆಗಳನ್ನೇ ಮರೆತುಬಿಟ್ಟಿದೆ. ರಾಜ್ಯದಲ್ಲಿ ಈಗಾಗಲೇ 6,500ಕ್ಕೂ ಅಧಿಕ ಶಾಲೆಗಳು ಮುಚ್ಚಲ್ಪಟ್ಟಿರುವುದು ಖಂಡನೀಯ. ಎಸ್.ಎಂ.ಕೃಷ್ಣ ಅವರ ಆಡಳಿತಾವಧಿಯಲ್ಲಿ ಶಿಕ್ಷಣ ಸಚಿವನಾಗಿದ್ದಾಗ ಉತ್ತರ ಕರ್ನಾಟಕ ಪ್ರವಾಸದ ವೇಳೆ ಕನ್ನಡ ಶಾಲೆಗಳ ಸ್ಥಿತಿಗತಿ, ಅಲ್ಲಿನ ಬಡವರು ಮಕ್ಕಳನ್ನು ಓದಿಸಲು ಪಡುತ್ತಿದ್ದ ಹರಸಾಹಸ ನೋಡಿ ಮಕ್ಕಳಿಗೆ ಅನ್ನಕೊಟ್ಟು ಅಕ್ಷರ ಹೇಳಿಕೊಡಲು ಆರಂಭಿಸಿದೆವು. ಅದರ ಫಲವಾಗಿ 80 ಲಕ್ಷ ಮಕ್ಕಳು ಇಂದು ಶಾಲೆಯಲ್ಲಿ ಊಟ ಮಾಡುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಇದೇ ಸಂದರ್ಭದಲ್ಲಿ ತಿಳಿಸಿದರು.

ಭಾರತದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರಾಥಮಿಕ ಶಿಕ್ಷಣದ ಪ್ರಜಾಪ್ರಭುತ್ವೀಕರಣ ಕಾರ್ಯಕ್ರಮ ಆಯೋಜಿಸಿ, ಮಕ್ಕಳ ಕುಂದುಕೊರತೆ ಕೇಳಿ ಶಾಲಾ ಸಮವಸ್ತ್ರ, ಅಗತ್ಯ ಮೂಲಸೌಕರ್ಯ ಸೇರಿದಂತೆ ಒದಗಿರುವ ಸಮಸ್ಯೆಗಳಿಗೆ ಪರಿಹಾರ ಕೊಡುವ ಕೆಲಸ ಅಂದಿನ ಸರ್ಕಾರ ಮಾಡಿತ್ತು. ಆದರೆ ಇಂದಿನ ಸರ್ಕಾರ ಕನ್ನಡ ಶಾಲೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು, ಮಕ್ಕಳ, ಪೋಷಕರ ಮನಸ್ಸನ್ನು ಅರ್ಥಮಾಡಿಕೊಂಡು, ಇದರೊಂದಿಗೆ ಅಧಿಕಾರಿಗಳು ಮತ್ತು ಸಾರ್ವಜನಿಕರನ್ನು ಕ್ರೋಢೀಕರಿಸಿ ಶಾಲೆ ನಡೆಸಬೇಕಿದೆ. ಈ ಬಗ್ಗೆ ಸರ್ಕಾರ ಸುದೀರ್ಘ ಚಿಂತನೆ ನಡೆಸಬೇಕು ಎಂದು ಅವರು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಇಂಥ ಕಳ್ಳನನ್ನು ಮನೆ ಕೆಲಸಕ್ಕೆ ಯಾಕೆ ನೇಮಕ ಮಾಡ್ಕೊಳ್ತೀರಿ?

ತಿಮ್ಮ : ಯಾಕೆ? ಏನ್ಮಾಡ್ದ ಅವ್ನು?

ಹೆಂಡತಿ : ಮೊನ್ನೆ ನೀವು ಹೊಟೇಲ್‌ನಿಂದ ಬೆಳ್ಳಿ ತಟ್ಟೆ ಕದ್ಕೊಂಡು ಬಂದಿದ್ರಲ್ಲ ಅದನ್ನ ಇವ್ನು ಎತ್ಕೊಂಡು ಹೋಗಿದ್ದಾನೆ!

ಮೈಸೂರು ಮಿತ್ರ

ಗುರುವಾರ, 7 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸತ್ಯ ಬಯಲಿಗೆ ಬರುವವರೆಗೆ ಸುಳ್ಳಿನದೇ ಅಧಿಕಾರ... ನಿಜವನ್ನು ನಿರೂಪಿಸಲು ನಿರಂತರ ಪ್ರಯತ್ನ ಪಡಬೇಕು. ನೈಜ ವ್ಯಕ್ತಿತ್ವ ವ್ಯಕ್ತವಾಗಲು ಮುಖವಾಡ ಕಳಚುವವರೆಗೂ ಕಾಯಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹರೆಯಕ್ಕೆ ಬಂದಾಗ ಹಂದಿನೂ ಚಂದ

ನಿಮ್ಮ ಪತ್ರಗಳು

■ ಸರ್ಕಾರದ ಪ್ರಸಾದವೊ ಅಥವಾ ಪ್ರಾಯೋಜಕತ್ವದ ದೇಣಿಗೆಯೋ?

ಮಾನ್ಯರೆ,

ಮೈಸೂರಿನಲ್ಲಿ ಈ ಬಾರಿ ಅದ್ದೂರಿಯಾಗಿ ಆಷಾಢ ಮಾಸ ಕಳೆದಿದೆ. ಕಳೆದ ಬಾರಿಗಿಂತ ಜನಸಾಮಾನ್ಯರು ಹೆಚ್ಚಾಗಿ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಯ ದರ್ಶನ ಮಾಡಿದ್ದಾರೆ. ಮೊದಲ ವಾರ ಸ್ವಲ್ಪ ಮಟ್ಟದ ಅವ್ಯವಸ್ಥೆ ಕಂಡುಬಂದರೂ ಉಳಿದ ದಿನ ಖುದ್ದು ಪೊಲೀಸ್ ಕಮಿಷನರ್ ಹಾಗೂ ಜಿಲ್ಲಾಧಿಕಾರಿಗಳು ಹೊಣೆ ಹೊತ್ತು ಸ್ಥಳದಲ್ಲೇ ಬೀಡು ಬಿಟ್ಟು ಕಾರ್ಯನಿರ್ವಹಿಸಿದ್ದು ಸ್ವಲ್ಪಮಟ್ಟದಲ್ಲಿ ಕಟ್ಟುನಿಟ್ಟಾಗಿ ಪಾಲನೆಯಾಯಿತು. ಇವರು ನಿಜಕ್ಕೂ ಅಭಿನಂದನಾರ್ಹರು. ಚಾಮುಂಡಿ ದೇಗುಲದ ಕಾರ್ಯನಿರ್ವಹಣಾಧಿಕಾರಿಗಳು ಸಹ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ಈ ಬಾರಿ 4 ವಾರಗಳು ಪ್ರಸಾದ ವ್ಯವಸ್ಥೆ ಮಾಡಿದ್ದು ವಿಶೇಷವಾಗಿತ್ತು. ಅದರಲ್ಲೂ ಬಾದಾಮಿ ಹಾಲು ಮತ್ತು ಡ್ರೈ ಫ್ರೂಟ್ಸ್‌ಗಳನ್ನು ನೀಡಿದ್ದು, ಖುಷಿಯೆನಿಸಿತು. ಆದರೆ ಇದರಲ್ಲಿ ಸಾರ್ವಜನಿಕವಾಗಿ ಅವ್ಯವಹಾರದ ಆಪಾದನೆ ಕೇಳಿ ಬಂದಿತು. ಇದು ಸರ್ಕಾರದ ಅನುದಾನದಲ್ಲಿ ಪ್ರಸಾದ ನೀಡಿದ್ದೊ ಅಥವಾ ಭಕ್ತರ ಪ್ರಾಯೋಜಕತ್ವದಲ್ಲಿ ವಿತರಿಸಿದ್ದೊ ಎನ್ನುವುದು..? ಇದನ್ನು ಆಡಳಿತ ಮಂಡಳಿ ಸ್ಪಷ್ಟಪಡಿಸಬೇಕು. ಹಾಗೆಯೇ ಆಡಳಿತ ಮಂಡಳಿಯಿಂದ ವಿತರಿಸಿದ್ದರೆ ಒಟ್ಟು ಎಷ್ಟು ಲೀಟರ್ ಹಾಲು ಮತ್ತು ಎಷ್ಟು ಕೆ.ಜಿ ಡ್ರೈಫ್ರೂಟ್ಸ್‌ಗಳನ್ನು ನೀಡಿದ್ದಾರೆ ಎಂದು ಸಾರ್ವಜನಿಕರಿಗೆ ಮಾಹಿತಿ ನೀಡಬೇಕೆಂದು ಭಕ್ತರ ಆಗ್ರಹವಾಗಿದೆ.

–ಸಂದೇಶ್, ಹಿಂದು ಸಂಘಟನೆಗಳ ಒಕ್ಕೂಟದ ಮುಖಂಡರು, ಮೈಸೂರು.

■ ಸಯ್ಯಾಜಿರಾವ್ ರಸ್ತೆ ಅಂಡರ್‌ಪಾಸ್ ತೆರೆಯಲು ಮನವಿ



ಮಾನ್ಯರೆ,

ಮೈಸೂರಿನ ಸಯ್ಯಾಜಿರಾವ್ ರಸ್ತೆ, ಬಾಟಾ ಶೋ ರೂಂ ಸಮೀಪವಿರುವ ಅಂಡರ್‌ಪಾಸ್ ಅನ್ನು ಸುಮಾರು 5 ವರ್ಷಗಳಿಂದ ಮುಚ್ಚಿದ್ದು, ನಿರುಪಯುಕ್ತವಾಗಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಜನರ ಉಪಯೋಗಕ್ಕಾಗಿ ಮಾಡಿದ ಅಂಡರ್‌ಪಾಸ್ ಮುಚ್ಚಿರುವುದು ದುರದೃಷ್ಟಕರ. ಈ ಅಂಡರ್ ಪಾಸ್ ಮೂಲಕ ನಿತ್ಯ ಸಾವಿರಾರು ಜನ ಓಡಾಡುತ್ತಿದ್ದರು. ಆದರೆ ಐದು ವರ್ಷಗಳಿಂದ ಮುಚ್ಚಿ 40 ಹಾಗೂ 41ನೇ ವಾರ್ಡಿನ ನಿವಾಸಿಗಳು ರಸ್ತೆ ಮುಖಾಂತರ ಓಡಾಟ ನಡೆಸುತ್ತಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಯಾವುದಾದರೂ ಸಾವು ನೋವು ಆದರೆ ನೇರವಾಗಿ ಪಾಲಿಕೆಯೇ ಹೊಣೆ ಹೊರಬೇಕಾಗುತ್ತದೆ. ಇದನ್ನು ತೆರೆದು ಸಾರ್ವಜನಿಕ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪಾಲಿಕೆ ಆಯುಕ್ತರಲ್ಲಿ ಮನವಿ. – ಎಸ್. ಅರವಿಂದ್, ವಕೀಲ, ಮೈಸೂರು.

■ ಸಂಜೆ ನ್ಯಾಯಾಲಯಗಳು ಕಾರ್ಯ ಸಾಧುವೇ?

ಮಾನ್ಯರೆ,

ಸಂಜೆ ನ್ಯಾಯಾಲಯಗಳನ್ನು ನಡೆಸುವ ಸಂಬಂಧ ರಾಜ್ಯದ ಉಚ್ಚ ನ್ಯಾಯಾಲಯ ರಾಜ್ಯಾದ್ಯಂತ ಇರುವ ವಕೀಲರ ಸಂಘಗಳ ಅಭಿಪ್ರಾಯ ಕೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಬೆಂಗಳೂರು ವಕೀಲರ ಸಂಘ ಸೇರಿದಂತೆ ರಾಜ್ಯದ ಹಲವಾರು ವಕೀಲರ ಸಂಘಗಳು ಈ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿವೆ ಎಂದು ತಿಳಿದುಬಂದಿದೆ. ಮಾಮೂಲಿ ನ್ಯಾಯಾಲಯಗಳು ಬೆಳಿಗ್ಗೆ 11 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತಿವೆ. ಬಹುತೇಕ ವಕೀಲರು ಇಲ್ಲಿನ ಕಾರ್ಯ ಕಲಾಪಗಳಲ್ಲಿ ಭಾಗಿಯಾಗುವುದರಿಂದ ಸಂಜೆ ನ್ಯಾಯಾಲಯಗಳಲ್ಲಿ ಅವರು ಹಾಜರಾಗಲು ಸಾಧ್ಯವಾಗದೇ ಇರಬಹುದು.

ಅದೇ ರೀತಿ ದೂರದ ಊರುಗಳಿಂದ ಕಕ್ಷಿದಾರರು ಸಂಜೆ ನ್ಯಾಯಾಲಯಕ್ಕೆ ಬರಬೇಕಾದರೆ, ಅವರು ನ್ಯಾಯಾಲಯ ಇರುವ ಸ್ಥಳದಲ್ಲಿ ಒಂದು ದಿನ ತಂಗಬೇಕಾಗಬಹುದು. ಅದಕ್ಕಾಗಿ ಅವರು ಅನಗತ್ಯ ಖರ್ಚು ವೆಚ್ಚವನ್ನು ಮಾಡಬೇಕಾಗುತ್ತದೆ.ಕೆಲವು ಬಡ ಕಕ್ಷಿದಾರರಿಗೆ ಇದು ಹೊರೆಯಾಗಿ ಪರಿಣಮಿಸಬಹುದು. ಈಗಾಗಲೇ ಲೋಕ ಅದಾಲತ್ ಮುಂತಾದ ವ್ಯವಸ್ಥೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ, ಸಂಜೆ ನ್ಯಾಯಾಲಯಕಾರ್ಯಸಾಧುವಲ್ಲವೆಂದು ಹೇಳಬಹುದು. ಬೆಳಗಿನ ನ್ಯಾಯಾಲಯಗಳಕಾರ್ಯ ಕಲಾಪಗಳಿಗೆ ಹಾಜರಾಗಲು ಸಾಧ್ಯವಾಗದ ವಕೀಲರಿಗೆ ಹಾಗೂ ಕಕ್ಷಿದಾರರಿಗೆ ಅನುಕೂಲವಾಗಬಹುದು ಎಂಬ ಒಂದು ಅಂಶವನ್ನು ಹೊರತುಪಡಿಸಿದರೆ, ಸಂಜೆ ನ್ಯಾಯಾಲಯಗಳಿಂದ ಹೆಚ್ಚಿನ ರೀತಿಯ ಪ್ರಯೋಜನ ಇಲ್ಲವೆಂದು ಹೇಳಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

ಉಜ್ವಲ

ಮಾನ್ಯರೆ,

ಮಾಡಬಾರದ್ದು ಮಾಡಿದರೆ
ಆಗಬಾರದ್ದು ಆಗದಿರುತ್ತದೆಯೇ!
ಹೇಯ ಅಪರಾಧಕ್ಕೆ ಉ(ಪ್ರ)ಜ್ವಲ ಶಿಕ್ಷೆ!
(ಮಜಾ–ಸಜಾ)
ನ್ಯಾಯಾಲಯ ಇನ್ನೂ ನ್ಯಾಯಾಲಯವಾಗಿಯೆ
ಉಳಿದಿದೆ, ನಾಯಾಲಯವಾಗಿಲ್ಲ!
(ಇರಬಹುದು ಅಪವಾದಗಳು, ವಿರಳ).

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸರ್ವೇ ಜನಾಃ ಸುಖಿನೋ ಭವಂತು

ಹಿಂದೂ ಧರ್ಮದಲ್ಲಿ ಅತ್ಯಂತ ಪ್ರಾಚೀನ ಹಾಗೂ ಪ್ರಚಲಿತ ಇರುವ ಒಂದು ಸಂಸ್ಕೃತ ಶಾಂತಿಮಂತ್ರ:

ಸರ್ವೇ ಭವಂತು ಸುಖಿನಃ
ಸರ್ವೇ ಸಂತು ನಿರಾಮಯಾ
ಸರ್ವೇ ಭದ್ರಾಣಿ ಪಶ್ಯಂತು
ಮಾ ಕಶ್ಚಿದ್ ದುಃಖ ಬಾಗ್ ಭವೇತ್
ಓಂ ಶಾಂತಿ ಶಾಂತಿ ಶಾಂತಿಃ .
ಈ ಪ್ರಾರ್ಥನೆಯ ಭಾವಾರ್ಥ:
ಸರ್ವರೂ ಸುಖವಾಗಿರಲಿ
ಸರ್ವರೂ ಆರೋಗ್ಯದಿಂದಿರಲಿ
ಸರ್ವರಿಗೂ ಮಂಗಳವಾಗಲಿ
ಯಾರೂ ವೇದನೆಗೆ ಒಳಗಾಗದಿರಲಿ
ಎಲ್ಲೆಡೆ ಶಾಂತಿ ಉಂಟಾಗಲಿ.

ಈ ಪ್ರಾರ್ಥನೆ ಸಕಲರಿಗೂ ಸದಾ ಒಳಿತನ್ನು ಬಯಸುವ ಹಾಗೂ ವಿಶ್ವ ಶಾಂತಿಯನ್ನು ಬೇಡುವ ಉದಾತ್ತ ಧ್ಯೇಯವನ್ನು ಪ್ರತಿಪಾದಿಸುತ್ತದೆ.

ಸೂಕ್ಷ್ಮ ರೀತಿಯಲ್ಲಿ ಪರೀಕ್ಷಿಸಿ ನೋಡಿದರೆ ಈ ಪ್ರಾರ್ಥನೆಯು ವಾಸ್ತವವಾಗಿ ಸಾಕಾರವಾಗುವಂತಹುದೆ, ಈ ರೀತಿ ಆದರ್ಶಪ್ರಾಯ ಜಗತ್ತನ್ನು ನಿರ್ಮಿಸುವುದು ಸೃಷ್ಟಿಕರ್ತನ ಉದ್ದೇಶವಾಗಿತ್ತೇ ಎಂದು ಅನಿಸದೆ ಇರದು. ಎಲ್ಲರೂ ಯಾವಾಗಲೂ ಸುಖ ಸಂತೋಷದಿಂದ ಬಾಳಲು ಸಾಧ್ಯವೇ, ಸರ್ವರೂ ಸದಾ ಸುಖಿಗಳೂ, ಆರೋಗ್ಯವಂತರೂ, ನಿರಾಬಾಧಿತರೂ ಆಗಿರಲಿ ಎಂಬುದು ಸೃಷ್ಟಿಕರ್ತನ ಉದ್ದೇಶವಾಗಿತ್ತೇ? ಹಾಗಿದ್ದರೆ ದೈವ ನಿರ್ಮಿತ ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದ ಪ್ರಕೃತಿ ವಿಕೋಪಗಳು ತರುವ ಸಾವು–ನೋವುಗಳು ಏಕೆ, ಸೃಷ್ಟಿಕರ್ತನು ಸರ್ವಶಕ್ತನಾದರೂ ಈ ಪ್ರಕೃತಿ ವಿಕೋಪಗಳು ಆಗಾಗ ಸಂಭವಿಸುತ್ತಿರುವುದನ್ನು ಗಮನಿಸಿದರೆ, ಸರ್ವರಿಗೂ ಸರ್ವಕಾಲದಲ್ಲೂ ಸುಖ ಸಂತೋಷವು ಸಂಭಾವ್ಯವಲ್ಲ ಎಂದು ಅನಿಸದೇ ಇರದು. ಅನಾದಿ ಕಾಲದಿಂದಲೂ ಮಾನವರು ಸುಖ ಸಂತೋಷ ಯಶಸ್ಸುಗಳ ಜೊತೆ ಜೊತೆಗೆ ದುಃಖ, ದುಗುಡ, ನಷ್ಟ, ಸೋಲುಗಳನ್ನೂ ಅನುಭವಿಸಿದ್ದಾರೆ.

ಅಂತೆಯೇ ಸಜ್ಜನರ ಜೊತೆ ದುರ್ಜನರೂ ಜನ್ಮ ತಾಳಿದ್ದಾರೆ. ರಾವಣ ಇಲ್ಲದೆ ರಾಮಾಯಣ ಹೇಗಾದೀತು, ಕೌರವರಿಲ್ಲದ ಮಹಾಭಾರತ ಹೇಗಾದೀತು, ಒಳಿತು, ಕೆಡುಕು ; ಸಜ್ಜನರು, ದುರ್ಜನರು ಒಂದೇ ನಾಣ್ಯದ ಎರಡು ಮುಖಗಳಂತೆ ಸೃಷ್ಟಿಯಲ್ಲಿ ಹಾಸು ಹೊಕ್ಕಾಗಿ ಇರುವುದನ್ನು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವುದು ಗಮನಾರ್ಹ. ಆಂಗ್ಲ ಭಾಷೆಯಲ್ಲಿ God, though Omnipotent has retained Evil for moral purposes (ಗ್ರೀಕ್ ತತ್ತ್ವಜ್ಞಾನಿ ಎಪಿಕ್ಯುರುಸ್) ಎಂಬ ಮಾತು ಭಗವಂತನು ಸರ್ವಶಕ್ತನಾದರೂ ದುಷ್ಟರನ್ನು ಸಹ ನೀತಿ ಸ್ಥಾಪನೆಗೆಂದು ಸೃಷ್ಟಿ ಮಾಡಿದ್ದಾನೆ ಎಂಬ ಮಾತಿಗೆ ಪುಷ್ಟಿ ನೀಡುತ್ತದೆ.

ಸಾಕ್ಷಾತ್ ವಿಷ್ಣುವಿನ ಅವತಾರವಾಗಿ ಜನಿಸಿದ ಶ್ರೀರಾಮ, ಶ್ರೀಕೃಷ್ಣರೂ ಸಾಮಾನ್ಯ ಮನುಷ್ಯರಂತೆ ಜೀವಿಸಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ಕೃಷ್ಣನು ಭಗವದ್ಗೀತೆಯಲ್ಲಿ ಈ ಬಗ್ಗೆ ಸಾರಿ ಹೇಳಿದ್ದಾನೆ:

ಸುಖ ದುಃಖೆ ಸಮೇಕೃತ್ವ ಲಾಭಾ ಲಾಭೌ
ಜಯಾಜಾಯೌ (ಗೀತ 2–38)

ಜಗತ್ತಿನಲ್ಲಿ ಸುಖ–ದುಃಖ, ಲಾಭ –ನಷ್ಟ ಹಾಗೂ ಜಯ – ಅಪಜಯ ಇವುಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬ ಶ್ರೀಕೃಷ್ಣನ ಗೀತಾ ವಾಕ್ಯ ಈ ಜಗತ್ತಿನಲ್ಲಿ ಸುಖ–ಲಾಭ ಜಯಗಳ ಜೊತೆ ಜೊತೆಗೆ ದುಃಖ,ನಷ್ಟ, ಅಪಜಯಗಳೂ ಎದುರಾಗುತ್ತವೆ ಎಂಬುದನ್ನು ಸಾರುತ್ತದೆ. ಪೌರಾಣಿಕ ಕಾಲದಲ್ಲಿ ದುಷ್ಟ ಶಕ್ತಿಗಳು ಜನಿಸಿ ಹಿಂಸೆ ಅನಾಚಾರದಲ್ಲಿ ತೊಡಗಿ ಶಾಂತಿ ಭಂಗ ಉಂಟು ಮಾಡಿದಾಗ ಆ ದುಷ್ಟರನ್ನು ಶಿಕ್ಷಿಸಿ ಧರ್ಮ ಸಂಸ್ಥಾಪನೆ ಮಾಡಲು ವಿಷ್ಣು ಹತ್ತು ಅವತಾರ ತಳೆಯಬೇಕಾಯಿತು. ಜಗತ್ತಿನಲ್ಲಿ ಆಗಾಗ್ಗೆ ದುಷ್ಟ ಶಕ್ತಿಗಳು ತಲೆ ಎತ್ತುತ್ತವೆ. ಆಗ ನಾನು ಧರ್ಮ ಸಂಸ್ಥಾಪನೆಗಾಗಿ ಭುವಿಯಲ್ಲಿ ಅವತರಿಸುತ್ತೇನೆ ಎಂದು ಭರವಸೆಯನ್ನು ನೀಡಿದ ಶ್ರೀಕೃಷ್ಣನ ಗೀತಾ ವಾಕ್ಯವೂ ಗಮನಾರ್ಹ.

> ನಾವು ನಮ್ಮ ಹಠವನ್ನು ಬಿಡಬಾರದು. ಕೆಲಸ ಪಡೆದೆ ತೀರುವೆನೆಂಬ ಛಲ ಬಿಡದೆ ಸತತ ಪ್ರಯತ್ನದಿಂದ ಏನು ಬೇಕಾದರೂ ಸಾಧಿಸಬಹುದು. ಆದ್ದರಿಂದ ನಿರುದ್ಯೋಗ ಎಂಬುದನ್ನು ಶಾಪ ಎಂದು ಪರಿಗಣಿಸದೆ, ನಿರುದ್ಯೋಗವನ್ನು ಭೂತ ಎಂದು ಶಪಿಸದೆ ಸತತ ಪ್ರಯತ್ನದಿಂದ ನಿರುದ್ಯೋಗವನ್ನು ಇಲ್ಲವಾಗಿಸೋಣ. ನಿರುದ್ಯೋಗಕ್ಕೆ ಬೇರೆಯವರ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ನಿರುದ್ಯೋಗವನ್ನು ಹೋಗಲಾಡಿಸೋಣ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಬ್ಯುಥಾನಂ ಅಧರ್ಮಸ್ಯ ತದಾತ್ಮಾನಾಮ್ ಸೃಜಾಮ್ಯಹಾಂ (ಗೀತ 4.7) ಮತ್ತು ಪರಿತ್ರಾಣಾಯ ಸಾಧುನಾಂ ವಿನಾಶಾಯ ಚ ದುಷ್ಕೃತಾಂ ಧರ್ಮ ಸಂಸ್ಥಾಪನಾಯ ಸಂಭವಾಮಿ ಯುಗೇ ಯುಗೇ (ಗೀತ 4.8)

ಹೀಗೆ ವಿಷ್ಣು ಹತ್ತು ಅವತಾರ ತಳೆದು ದುಷ್ಟರನ್ನು ಸಂಹಾರ ಮಾಡಿದ ಮೇಲೂ ಮತ್ತೆ ಮತ್ತೆ ದುಷ್ಟ ಶಕ್ತಿಗಳು ಲೋಕದಲ್ಲಿ ತಲೆಯೆತ್ತಿ ಶಾಂತಿ ಭಂಗ ಉಂಟುಮಾಡುತ್ತಿರುವುದು ಮುಂದುವರೆದಿದೆ. ಯುದ್ಧಗಳು ನಡೆಯುತ್ತಲೇ ಇವೆ. ಭಯೋತ್ಪಾದನೆ, ಹಿಂಸೆ, ಕೊಲೆ, ಸುಲಿಗೆ ಅತ್ಯಾಚಾರಗಳೂ ಮುಂದುವರೆದಿವೆ. ಸರ್ವ ಹಿತ, ಸರ್ವ ಸುಖ ಉಳ್ಳ ಜಗತ್ತು ಒಂದು ಮರೀಚಿಕೆಯಾಗಿಯೇ ಉಳಿದಿದೆ. ಇದನ್ನೇ ಶಂಕರ ಭಗವತ್ಪಾದರು; **ವಿದ್ಧಿ ವ್ಯಾಧ್ಯಭಿಮಾನಗ್ರಸ್ತಮ್ ಲೋಕಮ್ ಶೋಕಹತಂ ಚ ಸಮಸ್ತಮ್, ಈ ಲೋಕವು ರೋಗ ದುರಹಂಕಾರಗಳಿಂದ ತುಂಬಿದೆ, ಸಮಸ್ತರೂ ಒಂದಲ್ಲ ಒಂದು ಶೋಕದಿಂದ ನರಳುತ್ತಿದ್ದಾರೆ.** (ಭಜಗೋವಿಂದಂ.. 4) ಎಂದು ಉದ್ಗರಿಸಿದ್ದಾರೆ.

ಡಿ.ವಿ.ಗುಂಡಪ್ಪನವರು ತಮ್ಮ ಕಗ್ಗದಲ್ಲಿ ಹೀಗೆ ಹೇಳಿದ್ದಾರೆ;

ಭ್ರಾಂತಿಯೊ ಸಂಪೂರ್ಣ ಸುಖದಾಶೆ ಬಾಹ್ಯದಲಿ
ಸಾಂತ ಲೋಕದ ಸೌಖ್ಯ ಖಂಡ ಖಂಡವದು

ನಾವಿರುವ ಈ ಬಾಹ್ಯ ಪ್ರಪಂಚದಲ್ಲಿ ಸಂಪೂರ್ಣ ಸುಖ ದೊರಕುತ್ತದೆ ಎನ್ನುವುದು ಭ್ರಮೆ ಎಂದು ಎಚ್ಚರಿಸಿದ್ದಾರೆ. ಅದಕ್ಕೆಂದೇ ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ಎಂದು ಹೇಳಿ ಕಷ್ಟಗಳು ಬರುತ್ತವೆ. ಅವನ್ನು ಧೈರ್ಯದಿಂದ ಎದುರಿಸಿ ಎಂದು ಧೈರ್ಯ ತುಂಬಿದ್ದಾರೆ.

ಶಿಕ್ಷಕರ ನೇಮಕಾತಿ ನಡೆದು ಎರಡು ವರ್ಷಗಳೇ ಆದವು,ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕರೇ ಇಲ್ಲ ಎಂಬ ವಿಷಯವನ್ನು ಪತ್ರಿಕೆಗಳಲ್ಲಿ ನೋಡಿ ಸರ್ಕಾರದ ನಿಲುವೆಂಬುದೇನು ಎಂಬುದೇ ಅರ್ಥವಾಗುತ್ತಿಲ್ಲ. ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ಅತಿಥಿ ಉಪನ್ಯಾಸಕ ನೇಮಕಾತಿ ನಡೆಸಿ ಕೈ ತೊಳೆದುಕೊಳ್ಳುತ್ತಿರುವ ಸರ್ಕಾರ, ಹಣದ ಉಳಿತಾಯದೊಂದಿಗೆ ಭವಿಷ್ಯದ ಕನಸು ಕಾಣುತ್ತಿರುವ ಅಭ್ಯರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದೆ ಎಂದೆನಿಸುತ್ತಿದೆ.

ಓದಿದವರಿಗೆಲ್ಲಾ ಸರ್ಕಾರವೇ ಕೆಲಸ ಕೊಡುತ್ತದೆ ಎಂಬ ಕಾನೂನು ಉಂಟಾ? ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಬಹುದಲ್ವಾ! ಎಂಬ ಉತ್ತರಗಳು ಬರಬಹುದು.ಆದರೆ ಸರ್ಕಾರಿ ಕೆಲಸದಲ್ಲಿ ಸಿಗುವ ಸವಲತ್ತುಗಳನ್ನು ಎಲ್ಲಾ ಖಾಸಗಿ ಸಂಸ್ಥೆಗಳು ಕೊಡಲು ಸಾಧ್ಯವೇ? ಯಾವ ಸರ್ಕಾರವೇ ಬರಲಿ ವಿದ್ಯಾರ್ಥಿಗಳ, ಸರ್ಕಾರಿ ಕೆಲಸಗಳನ್ನು ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಅಭ್ಯರ್ಥಿಗಳ ಮನಸ್ಥಿತಿಯನ್ನು ಅರಿತುಕೊಂಡು ಹಂತ ಹಂತವಾಗಿಯಾದರೂ ನೇಮಕಾತಿ ಪ್ರಕ್ರಿಯೆಗಳನ್ನು ಚುರುಕಾಗಿ ಮುಗಿಸಬೇಕು.

ಮೇಲರಿಮೆ: ನಿರುದ್ಯೋಗ ಹೆಚ್ಚಾಗಲು ಮತ್ತೊಂದು ಕಾರಣ ನಮ್ಮ ಜನರಲ್ಲಿ ಇರುವ ಮೇಲರಿಮೆ, ಆಂಗ್ಲಭಾಷೆಯಲ್ಲಿ ಸುಪ್ರಿಯಾರಿಟಿ ಕಾಂಪ್ಲೆಕ್ಸ್ ಎಂದು ಕರೆಯಬಹುದು ಎನ್ನಿಸುತ್ತದೆ. ನಾನು ಅಷ್ಟು ಓದಿ ಇಷ್ಟು ಕಡಿಮೆ ಸಂಬಳದ ಕೆಲಸ ಮಾಡಬೇಕಾ? ಹೋಗಿ ಹೋಗಿ ನಾನು ಆ ಕೆಲಸ ಮಾಡುವುದಾ, ಸಾಧ್ಯವೇ ಇಲ್ಲ! ಹೀಗೆ ಯುವ ಜನಾಂಗದವರಲ್ಲಿ ಮೂಡಿಸಿಕೊಳ್ಳುತ್ತಿರುವ ಮೇಲರಿಮೆಯ ಕಾರಣ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿದೆ. ಇದರರ್ಥ ಯಾವೊಂದು ಕೆಲಸವನ್ನು ನೀವು ಮಾಡಲೇಬೇಕೆಂಬ ಒತ್ತಡವಲ್ಲ. ಸಿಗುವ, ಸಿಕ್ಕಿರುವ ಕೆಲಸವನ್ನು ಕಿರಿದೆನ್ನದೆ ಮಾಡಿ ಎಂದು ಹೇಳುವ ಒಂದು ಸಣ್ಣ ಮನವಿ ಅಷ್ಟೇ. ಈ ಮಾತನ್ನು ಹೇಳುವಾಗ ಡಿ.ವಿ.ಜಿ ಅವರು ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ ಪದ್ಯವೊಂದು ನೆನಪಿಗೆ ಬರುತ್ತದೆ

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ

ನಮ್ಮ ಸುತ್ತಲಿನ ಪರಿಸರ: ಒಂದು ವೇಳೆ ನಮ್ಮ ಓದಿಗೂ ನಾವು ಮಾಡುತ್ತಿರುವ ಕೆಲಸಕ್ಕೂ ಸಂಬಂಧವಿಲ್ಲದಂತೆ ಕೆಲಸ ಮಾಡುತ್ತಿರುತ್ತೇವೆ. ಆದರೆ ನಮ್ಮ ಸುತ್ತಲೂ ಇರುವ ಜನರು (ಅದು ಸಂಬಂಧಿಕರೇ ಆಗಿರಬಹುದು ಅಥವಾ ಮನೆಯವರೇ ಆಗಿರಬಹುದು ಇಲ್ಲವೇ ಸ್ನೇಹಿತರೆ ಆಗಿರಬಹುದು) ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡಲಾಗದೆ ಅವರಾಡುವ ಚುಚ್ಚು ನುಡಿಗಳನ್ನು ಸಹಿಸಲಾರದೆ ಆತ್ಮವಿಶ್ವಾಸವನ್ನು ಕಳೆದುಕೊಂಡು ಇರುವ ಕೆಲಸವನ್ನು ಬಿಟ್ಟು ಹೋಗುವ ಜನರನ್ನೂ ಗಮನಿಸಬಹುದು.

ನಮ್ಮ ಮನೋಭಾವ: ಜನ ನೂರು ಮಾತನ್ನಾಡಲಿ ಮೊದಲು ನಾವು ಬದಲಾಗಬೇಕು. ನಾನು ಓದಿದ್ದೇನೆ, ನನಗೆ ಸರ್ಕಾರಿ ನೌಕರಿ ಮಾತ್ರ ಬೇಕು. ಹೀಗೆ ಯಾವ ಸರ್ಕಾರ ನಿಯಮ ಮಾಡಿದೆ? ಓದಿದವರಿಗೆಲ್ಲಾ ಸರ್ಕಾರ ಕೆಲಸ ಕೊಡುತ್ತದೆ ಎಂದು. ಆದ್ದರಿಂದ ನಾವು ನಮ್ಮ ಮನೋಭಾವನೆಯನ್ನು ಬದಲಿಸಿಕೊಳ್ಳಬೇಕು.ಶಿಕ್ಷಣ ನಮ್ಮ ಜ್ಞಾನಕ್ಕಾಗಿಯೇ ವಿನಹ ಕೆಲಸಕ್ಕಾಗಿ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಇದನ್ನು ತಿಳಿದರೆ ಅರ್ಧ ಸಮಸ್ಯೆ ಪರಿಹಾರವಾದಂತೆ.

ಕುಟುಂಬ: ಕುಟುಂಬದಲ್ಲಿ ಇರುವವರು ಕೂಡ ನಿರುದ್ಯೋಗ ಉಂಟಾಗಲು ಪರೋಕ್ಷವಾಗಿ ಕಾರಣವಾಗ್ತಾರೆ. ಅಷ್ಟು ಓದಿ ಈ ಕೆಲಸಕ್ಕೆ ಹೋಗೋದಾ, ಇಷ್ಟು ಕಡಿಮೆ ಸಂಬಳಕ್ಕೆ ಆ ಕೆಲಸಕ್ಕೆ ಹೋಗೋದಕ್ಕಿಂತ ಮನೆಯಲ್ಲಿಯೇ ಇರು ಎಂದು ಒತ್ತಡ ಹೇರುವುದರಿಂದ ನಿರುದ್ಯೋಗ ಉಂಟಾಗುತ್ತದೆ

ಈ ಬಗೆಯ ಸಂಗತಿಗಳೊಂದಿಗೆ ಅತಿಯಾದ ನಿರೀಕ್ಷೆ, ಮಾನಸಿಕ ತೊಳಲಾಟಗಳು, ಸಾಮಾಜಿಕ ಸ್ಥಾನಮಾನ.... ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯನ್ನೇ ಮಾಡಬಹುದೇನೋ. ಆದರೆ ಒಂದಂಶವನ್ನು ನಾವೆಲ್ಲ ಅರ್ಥಮಾಡಿಕೊಳ್ಳಬೇಕು. ಇಂದು ನಾವು ಇಷ್ಟ ಪಟ್ಟ ಕೆಲಸ ಸಿಗದಿರಬಹುದು. ಅದಕ್ಕೆ ಶಿಫಾರಸ್ಸು, ಜಾತಿ, ಧರ್ಮ ಹೀಗೆ ಏನೇ ಕಾರಣವಿರಬಹುದು. ಆದರೆ, ನಾವು ನಮ್ಮ ಹಠವನ್ನು ಬಿಡಬಾರದು. ಕೆಲಸ ಪಡೆದೆ ತೀರುವೆನೆಂಬ ಛಲ ಬಿಡದೆ ಸತತ ಪ್ರಯತ್ನದಿಂದ ಏನು ಬೇಕಾದರೂ ಸಾಧಿಸಬಹುದು. ಆದ್ದರಿಂದ ನಿರುದ್ಯೋಗ ಎಂಬುದನ್ನು ಶಾಪ ಎಂದು ಪರಿಗಣಿಸದೆ, ನಿರುದ್ಯೋಗವನ್ನು ಭೂತ ಎಂದು ಶಪಿಸದೆ ಸತತ ಪ್ರಯತ್ನದಿಂದ ನಿರುದ್ಯೋಗವನ್ನು ಇಲ್ಲವಾಗಿಸೋಣ. ನಿರುದ್ಯೋಗಕ್ಕೆ ಬೇರೆಯವರ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ನಿರುದ್ಯೋಗವನ್ನು ಹೋಗಲಾಡಿಸೋಣ.

ಅಂಬೇಡ್ಕರ್‌ರವರ ಸಂವಿಧಾನ, ದೇಶದ ಐಕ್ಯತೆ ಉಳಿಸುವ ಜವಾಬ್ದಾರಿ ನಮ್ಮದು

ವಿರೋಧಿಗಳಿಗೆ ಕಾಂಗ್ರೆಸ್ ತತ್ವ ಸಿದ್ಧಾಂತಗಳ ಮೂಲಕ ಉತ್ತರ ಕೊಡೋಣ; ಸಚಿವ ಸಂತೋಷ್ ಲಾಡ್



ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಬುಧವಾರ ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರು, ಆ.6(ವಿವಿಹೆಚ್)– ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬರೆದ ಸಂವಿಧಾನ ಮತ್ತು ಭಾರತ ಐಕ್ಯತೆಯನ್ನು ಉಳಿಸಬೇಕಿರುವ ಜವಾಬ್ದಾರಿ ನಮ್ಮದಾಗಿದ್ದು, ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನು ಇದಕ್ಕಾಗಿ ಸಿದ್ಧನಾಗಬೇಕು. ಕಾಂಗ್ರೆಸ್ ತತ್ವ ಸಿದ್ಧಾಂತದ ಮೂಲಕ ಬಿಜೆಪಿಗೆ ಉತ್ತರ ನೀಡಬೇಕು ಎಂದು ಕಾರ್ಮಿಕ ಇಲಾಖಾ ಸಚಿವ ಸಂತೋಷ್ ಲಾಡ್ ಕರೆ ಕೊಟ್ಟರು.

ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಭವನದ ಇಂದಿರಾ ಗಾಂಧಿ ಸಭಾಂಗಣದಲ್ಲಿ ನಡೆದ ಕಾರ್ಯಕರ್ತರು ಮತ್ತು ಕಾರ್ಮಿಕರ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿದರು.

ಮಾಧ್ಯಮವನ್ನು ತಮ್ಮ ಅವಶ್ಯಕತೆಗನುಗುಣವಾಗಿ ಬಳಸಿಕೊಂಡಿದ್ದರೂ ಬಿಜೆಪಿಗೆ ಇಡೀ ದೇಶದಲ್ಲಿ ದೊರೆತಿರುವುದು ಕೇವಲ ಶೇ.35ರಷ್ಟು ಮತ ಮಾತ್ರ, ಬಿಜೆಪಿ ಎಲ್ಲಾ ಚುನಾವಣೆಗಳಲ್ಲಿಯೂ ಮೋಸ ಮಾಡಿ ಅಧಿಕಾರದ ಗದ್ದುಗೆ ಹಿಡಿದಿದೆ. ಬಿಹಾರದಲ್ಲಿ ಮೋಸ ಮಾಡಿ ಗೆಲ್ಲಲು ಮುಂದಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಮೋಸ ಮಾಡಿ ಗೆಲ್ಲಲು ಪ್ರಯತ್ನಿಸಿದರು. ರಾಜ್ಯದಲ್ಲಿ ಲೋಕಸಭಾ ಚುನಾವಣೆ ವೇಳೆ ಮತ ಕಳವು ಆಗಿದ್ದು, ಇದರ ವಿರುದ್ಧ ರಾಹುಲ್ ಗಾಂಧಿ ರಾಜ್ಯದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಬಿಜೆಪಿ ಸಂಚಿನ ವಿರುದ್ಧ ನಮ್ಮ ನಾಯಕ ಹೋರಾಟಕ್ಕೆ ಮುಂದಾಗಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಿದ್ಧಾಂತವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ದೇಶ ಎಂದು ಬಂದಾಗ ಯಾರೊಂದಿಗೂ ರಾಜಿಗೆ ಹೋದವರಲ್ಲ. ನನಗೆ ಅಧಿಕಾರಕ್ಕಿಂತ ಸಿದ್ಧಾಂತವೇ ಮುಖ್ಯ ಎಂದು ತಮ್ಮ ಮಾತಿಗೆ ಬದ್ಧರಾಗಿ ಗಟ್ಟಿ ನಿಲುವು ತೆಗೆದುಕೊಂಡವರು. ನಾವೆಲ್ಲಾ ರಾಗಾ ಅವರ ಆಲೋಚನೆ, ಚಿಂತನೆ ಜೊತೆ ಕೈ ಜೋಡಿಸಬೇಕಿದೆ ಎಂದರು.

ದೇಶದ ರಾಜಕಾರಣದಲ್ಲಿ ನಡೆಯುತ್ತಿರುವ ಮತಕಳವು ಅತ್ಯಂತ ಗಂಭೀರ ಪ್ರಕರಣವಾಗಿದೆ. ತಾಂತ್ರಿಕವಾಗಿ ಎಷ್ಟೆ ಮುಂದುವರೆದಿದ್ದರೂ ಸರಿ ತಪ್ಪುಗಳ ಬಗ್ಗೆ ಯುವಕರಲ್ಲಿ ಗೊಂದಲ ಉಂಟಾಗುತ್ತಿರುವುದು ಶೋಚನೀಯ ಸಂಗತಿ. ವಾಸ್ತವ ಸಂಗತಿ, ಅಸಲಿಯತ್ತನ್ನು ಜನರಿಗೆ ತಲುಪಿಸುವ ಕೆಲಸ ಕಾಂಗ್ರೆಸ್ ಮಾಡಬೇಕಿದೆ. ಬಿಜೆಪಿ ಸುಳ್ಳು, ತಪ್ಪುಗಳ ಬಗ್ಗೆ ಜನರಿಗೆ ಅರಿವು ಮೂಡಿಸಲಿಕ್ಕಾಗಿ ಬೀದಿ ನಾಟಕ ಮಾಡುವ ಸ್ಥಿತಿಗೆ ಬಂದು ನಿಂತಿದ್ದೇವೆ. ದೃತಿಗೆಡದ ನಾವುಗಳು ನಾಟಕಗಳ ಮೂಲಕ, ಅರಳಿಕಟ್ಟೆ ಮೇಲೆ ನಿಂತು ಸತ್ಯವನ್ನು ಮಾತನಾಡುವ ನಾಯಕರನ್ನು ಹುಟ್ಟುಹಾಕಬೇಕು. ಆ ಮೂಲಕ ಬಿಜೆಪಿ ಸುಳ್ಳನ್ನು ನಾಶ ಮಾಡಬೇಕು ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಅವರು ಹಳೇ ಮೈಸೂರು ಭಾಗಕ್ಕೆ ಇದುವರೆಗೆ 60 ರಿಂದ 70 ಸಾವಿರ ಕೋಟಿ ರೂ. ಅಧಿಕ ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಿದ್ದರೂ ಅವರ ವಿರುದ್ಧವೇ ಮಾತನಾಡುತ್ತಾರೆ. ಬಿಜೆಪಿಗೆ ಸುಳ್ಳನ್ನು ಹೇಗೆ ಹಬ್ಬಿಸಬೇಕು ಎಂಬುದು ಗೊತ್ತಿದೆ. ಚುನಾವಣೆ ವೇಳೆ ಅಭಿವೃದ್ಧಿ ಕೆಲಸಗಳ ಮೂಲಕ ಮತ ಕೇಳದೆ, ಹಿಂದೂ–ಮುಸ್ಲಿಂ, ಭಾರತ –ಪಾಕ್ ಎಂದು ಮಧ್ಯೆ ತಂದು ಚುನಾವಣೆ ಗೆಲ್ಲುವ ಹುನ್ನಾರ ನಡೆಸಿದ್ದಾರೆ. ನಾಗರಿಕರಿಗೆ ಬಿಜೆಪಿಯ ಸಿದ್ಧಾಂತದ ಒಳಸಂಚನ್ನು ತಿಳಿಸುವ ಕೆಲಸ ಕಾಂಗ್ರೆಸ್ ಮಾಡಬೇಕಿದೆ ಅವಕಾಶ ಸಿಕ್ಕಾಗೆಲ್ಲಾ ಪಕ್ಷಕ್ಕೆ ಮತ್ತು ನನ್ನ ಜನರಿಗೆ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ತಪ್ಪನ್ನು ತಪ್ಪು ಎಂದು ಧ್ವನಿ ಎತ್ತಲು ಪ್ರಜೆಗಳು ನನಗೆ ಅಧಿಕಾರ ನೀಡಿದ್ದು, ಅದಕ್ಕೆ ಬದ್ಧನಾಗಿದ್ದೇನೆ. ಕಾಂಗ್ರೆಸ್ ಸಿದ್ಧಾಂತದ ಅಡಿಯಲ್ಲಿ ನಾವೆಲ್ಲರೂ ಕೆಲಸ ಮಾಡುವ ಮೂಲಕ ಬಿಜೆಪಿಯ ಸುಳ್ಳುಗಳಿಗೆ ಪ್ರತಿತಂತ್ರ ರೂಪಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವ, ಡಿ.ರವಿಶಂಕರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಹಿಳಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ನಾಳೆ ರಾಹುಲ್ ಗಾಂಧಿ ರಾಜ್ಯ ಭೇಟಿ ತಯಾರಿ ವೇಳೆ

ಡಿಸಿಎಂ ಶಾಸಕರ ವಿಶ್ವಾಸ ಗಳಿಸುವ ಯತ್ನ

● ಶಾಸಕರ ಸಭೆಯಲ್ಲಿ ರಾಹುಲ್ ಗಾಂಧಿ ಹೋರಾಟದ ಉದ್ದೇಶ ಮನವರಿಕೆ ● ಕ್ಷೇತ್ರವಾರು ಪಕ್ಷದ ಮುಖಂಡರ ಕರೆತರಲು ಸಲಹೆ



ಬೆಂಗಳೂರು, ಆ. 6(ಕೆಎಂಶಿ)– ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ರಾಜ್ಯ ಭೇಟಿ ಬೆನ್ನಲ್ಲೇ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಶಾಸಕರನ್ನು ತಮ್ಮೆಡೆಗೆ ಸೆಳೆಯಲು ಸಭೆ ನಡೆಸಿದರು.

ಶಾಸಕರ ಸಭೆ ನಂತರ ನಡೆದ ಮುಖಂಡರ ಸಭೆಯಲ್ಲಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು. ಚುನಾವಣಾ ಅಕ್ರಮ ಬಯಲು ಮಾಡುವ ಉದ್ದೇಶದಿಂದ ರಾಹುಲ್ ಗಾಂಧಿ ಆಗಸ್ಟ್ 8ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ.

ಸಭೆಯಲ್ಲೇ ಬೆಂಗಳೂರು ಸೆಂಟ್ರಲ್ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದ ಕುರಿತು ಮಾಹಿತಿ ಬಹಿರಂಗಪಡಿಸಲಿದ್ದಾರೆ. ನಂತರ ರಾಹುಲ್ ಗಾಂಧಿ ನಾಯಕತ್ವದಲ್ಲಿ ಕಾಂಗ್ರೆಸ್ ಮುಖಂಡರ ನಿಯೋಗ ರಾಜ್ಯ ಮುಖ್ಯಚುನಾವಣಾಧಿಕಾರಿ ಭೇಟಿ ಮಾಡಿ ದಾಖಲೆ ಸಹಿತ ದೂರು ನೀಡಲಿದ್ದಾರೆ.

ರಾಹುಲ್ ಸಮಾವೇಶ ಯಶಸ್ಸಿನ ಉದ್ದೇಶದಿಂದ ಶಿವಕುಮಾರ್ ಕಳೆದ ಎರಡು ದಿನಗಳಿಂದ ಕಾರ್ಯಕರ್ತರು ಹಾಗೂ ಮುಖಂಡರ ನಿರಂತರ ಸಭೆ ನಡೆಸಿದರು.

ಇದೇ ವಿಷಯ ಮುಂದಿಟ್ಟುಕೊಂಡು ಪಕ್ಷದ ಶಾಸಕರ ಸಭೆ ಕರೆದು, ಖುದ್ದಾಗಿ ಎಲ್ಲರನ್ನು ಮುಖಾಮುಖಿ ಭೇಟಿ ಮಾಡಿ, ವಿಶ್ವಾಸ ಗಳಿಸುವ ಪ್ರಯತ್ನ ಮಾಡಿದರು.

ಶುಕ್ರವಾರ ನಡೆಯುವ ರಾಹುಲ್ ಸಭೆಗೆ ತಮ್ಮ ಕ್ಷೇತ್ರಗಳಿಂದ ಕಾರ್ಯಕರ್ತರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಪಕ್ಷಕ್ಕೆ ದುಡಿದಿರುವ ಗಣ್ಯರನ್ನು ಕರೆತರುವಂತೆ ಶಾಸಕರಿಗೆ ಆದೇಶಿಸಿದರು.

ಸಭೆಯ ಸ್ವರೂಪದ ಬಗ್ಗೆ ವಿವರಿಸಿ ರಾಹುಲ್ ಗಾಂಧಿ ತೆಗೆದುಕೊಂಡಿರುವ ದಿಟ್ಟ ನಿರ್ಧಾರಕ್ಕೆ ನಾವು ಸಂಪೂರ್ಣ ಬೆಂಬಲ ವ್ಯಕ್ತಪಡಿಸಬೇಕಿದೆ ಎಂದರು.

ಶಾಸಕರ ಜೊತೆ ಚರ್ಚೆ ನಂತರ ಅವರನ್ನೂ ಕೂರಿಸಿಕೊಂಡು ಪಕ್ಷದ ಕಚೇರಿಯಲ್ಲೇ ಸಭೆ ನಡೆಸಿದರು, ಈ ಸಭೆಯಲ್ಲಿ ಮುಖ್ಯಮಂತ್ರಿ ಅಲ್ಲದೆ, ಇತರ ಮುಖಂಡರೂ ಭಾಗವಹಿಸಿದ್ದರು.

ಕಳೆದ ವಾರ ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಸಿದ್ದರಾಮಯ್ಯ ವಿಧಾನ ಸೌಧದ ತಮ್ಮ ಕಚೇರಿಯಲ್ಲಿ ಮೂರು ದಿನಗಳ ಕಾಲ ಪಕ್ಷದ ಜಿಲ್ಲಾವಾರು ಶಾಸಕರ ಸಭೆ ನಡೆಸಿದ್ದು, ಇದರಲ್ಲಿ ಸಚಿವರೂ ಪಾಲ್ಗೊಂಡಿದ್ದರು.

ಆ ಸಭೆಗೆ ಉಪಮುಖ್ಯಮಂತ್ರಿ ಅವರಿಗೆ ಆಹ್ವಾನ ಇರಲಿಲ್ಲ. ಆದರೆ, ಶಿವಕುಮಾರ್ ಎರಡು ದಿನಗಳ ಕಾಲ ವಿಧಾನ ಸೌಧದಲ್ಲೇ ಇಲಾಖಾ ಪ್ರಗತಿ ಸಭೆಗಳನ್ನು ನಡೆಸಿದ್ದರು. ಪ್ರಧಾನಿ ನರೇಂದ್ರ ಮೋದಿ ನಗರದಲ್ಲಿ ಭಾನುವಾರ ಮೂರನೇ ಹಂತದ ನಮ್ಮ ಮೆಟ್ರೋ ಹಳದಿ ಮಾರ್ಗ ಸಂಚಾರಕ್ಕೆ ಚಾಲನೆ ನೀಡುವುದರ ಜೊತೆಗೆ ಕೇಂದ್ರದ ಹಲವು ಅಭಿವೃದ್ಧಿ ಯೋಜನೆಗಳಿಗೂ ಹಸಿರು ನಿಶಾನೆ ತೋರಲಿದ್ದಾರೆ.

ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶಿವಕುಮಾರ್, ಪ್ರಧಾನಿ ಕಾರ್ಯಕ್ರಮದ ಬಗ್ಗೆಯೂ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲೂ ಮತಗಳ್ಳತನವಾಗಿದೆ!

ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೂ ಆಗಿದ್ದ ಕೆಪಿಸಿಸಿ ವಕ್ತಾರ ಲಕ್ಷ್ಮಣ ಆರೋಪ

- ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ಇವಿಎಂ ರಿಗ್ಗಿಂಗ್
- ಬಿಜೆಪಿಗೆ ಶೇಕಡ 90ರಷ್ಟು ಮತ, ಕಾಂಗ್ರೆಸ್‌ಗೆ ಬರೀ ಶೇ.10 ಮತ
- ನಾಳೆ ರಾಹುಲ್ ಗಾಂಧಿ ಪ್ರತಿಭಟನೆಯಲ್ಲಿ ಪ್ರಸ್ತಾಪ
- ಚುನಾವಣಾ ಆಯೋಗಕ್ಕೂ ದೂರು ನೀಡಲು ನಿರ್ಧಾರ



ಮೈಸೂರಿನ ಪೊಲೀಸ್ ಆಯುಕ್ತರ ಕಚೇರಿ ಬಳಿಯ ಬ್ಯಾಂಡ್‌ಹೌಸ್ ಆವರಣದಲ್ಲಿ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಆ.6(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಕೆಪಿಸಿಸಿ ವಕ್ತಾರರೂ ಆದ ಇದೇ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪರಾಜಿತರಾಗಿರುವ ಎಂ.ಲಕ್ಷ್ಮಣ್ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಬ್ಯಾಂಡ್‌ಹೌಸ್ ಬಳಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ನಡೆಯುತ್ತಿರುವ ಮತಗಳ್ಳತನದ ವಿರುದ್ಧ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆಗಸ್ಟ್ 8 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಈ ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದರು.

ಮೈಸೂರಿನ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 8 ವಿಧಾನಸಭಾ ಕ್ಷೇತ್ರಗಳಿದ್ದು, 23 ಲಕ್ಷ ಮತದಾರರಿದ್ದಾರೆ. ಒಟ್ಟು 2202 ಬೂತ್‌ಗಳಿವೆ. ಮತದಾನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮತಗಳ್ಳತನ ಆಗಿರುವುದು ಕಂಡುಬಂದಿದೆ ಎಂದು ಆಪಾದಿಸಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರ, ಚಾಮರಾಜ ಕ್ಷೇತ್ರ, ಕೊಡಗಿನ ಮಡಿಕೇರಿ ಹಾಗೂ ವಿರಾಜಪೇಟೆಯಲ್ಲಿ ಇವಿಎಂ ಯಂತ್ರದಲ್ಲಿ ರಿಗ್ಗಿಂಗ್ ಆಗಿದೆ. ನಾಲ್ಕು ಕ್ಷೇತ್ರದಲ್ಲಿ 1,45,616 ಮತಗಳು ಚಲಾವಣೆಯಾಗಿದ್ದು, ಇದರಲ್ಲಿ ಬಿಜೆಪಿಗೆ 1 ಲಕ್ಷದ 18 ಸಾವಿರದ 94 ಮತಗಳು ಬಂದಿದ್ದರೆ, ಕಾಂಗ್ರೆಸ್‌ಗೆ 27,522 ಮತಗಳು ಬಂದಿವೆ ಎಂದು ಅಂಕಿ–ಅಂಶ ಸಹಿತ ಮಾಹಿತಿ ನೀಡಿದರು.

2019 ಮತ್ತು 2023ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಶೇಕಡ 40ಕ್ಕಿಂತ ಹೆಚ್ಚು ಮತ ಬಂದಿದೆ. ಆದರೆ 2024ರ ಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಶೇಕಡ 10ರಷ್ಟು ಹಾಗೂ ಬಿಜೆಪಿಗೆ ಶೇಕಡ 90ರಷ್ಟು ಮತ ಬಂದಿದೆ. ಈ ಮೂಲಕ ಎಲ್ಲೆಲ್ಲಿ ಮತಗಳ್ಳತನ ಮಾಡಲು ಸಾಧ್ಯವೋ ಅಲ್ಲೆಲ್ಲಾ ಬಿಜೆಪಿ ಮಾಡಿದೆ ಎಂದು ದೂರಿದರು.

ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಒಂದೇ ಸಮುದಾಯದವರು ಹೆಚ್ಚಾಗಿದ್ದಾರೆ. ಶಾಂತಿನಗರದಲ್ಲಿ 700 ಮತಗಳಿವೆ. ಇಲ್ಲಿ ಕಾಂಗ್ರೆಸ್‌ಗೆ 500 ಮತ ಬಂದಿದ್ದರೆ, ಬಿಜೆಪಿಗೆ 200 ಮತ ಬಂದಿದೆ. ಒಂದೇ ಕುಟುಂಬವಿರುವ ಕಾಂಗ್ರೆಸ್ ಕಾರ್ಯಕರ್ತರ 15 ಮನೆಯಲ್ಲಿ 50 ಮತ ಮಾತ್ರ ಬಂದಿದೆ ಎಂದು ಆರೋಪಿಸಿದರು.

ಮತದಾನದಂದು ಬೆಳಿಗ್ಗೆ ಮತದಾನ ಆರಂಭಕ್ಕೂ ಮುನ್ನ ಚುನಾವಣಾ ಸಿಬ್ಬಂದಿ ಇವಿಎಂನಲ್ಲಿ 50 ಓಟ್ ಮೂಲಕ ಅಣಕು ಮತದಾನ ಮಾಡಬೇಕು. ತರುವಾಯ ಅದನ್ನು ಶೂನ್ಯಗೊಳಿಸಬೇಕು. ಆದರೆ ಶಾಂತಿನಗರದ ಒಂದು ಬೂತ್‌ನಲ್ಲಿ ಒಟ್ಟು ಇರುವುದೇ 700 ಮತದಾರರು. ಆದರೆ ಇಲ್ಲಿ 750 ಮತ ಸಂಖ್ಯೆಯನ್ನು ತೋರಿಸಿದ್ದಾರೆ. ಈ ಮೂಲಕ ದೇಶದ ಬೇರೆ ರಾಜ್ಯದಂತೆ ಮೈಸೂರಿನಲ್ಲಿಯೂ ಮತಗಳ್ಳತನ ನಡೆದಿದೆ. ಈ ಸಂಬಂಧ ರಾಹುಲ್ ಗಾಂಧಿ ಪ್ರತಿಭಟನೆ ನಡೆಯುವ ಸ್ಥಳದಲ್ಲಿ ಈ ವಿಚಾರ ಪಸ್ತಾಪಿಸಿ, ನಂತರ ಚುನಾವಣಾ ಆಯೋಗಕ್ಕೆ ದೂರು ನೀಡುತ್ತೇನೆ ಎಂದು ಲಕ್ಷ್ಮಣ್ ತಿಳಿಸಿದರು.

ಟಿಪ್ಪುಸುಲ್ತಾನ್ ಅಡಿಗಲ್ಲು ಹಾಕಿದ್ದು: ಕೃಷ್ಣರಾಜಸಾಗರಕ್ಕೆ ಟಿಪ್ಪುಸುಲ್ತಾನ್ ಅಡಿಗಲ್ಲು ಹಾಕಿದ್ದು ಎಂಬ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹೇಳಿಕೆ ಸರಿಯಾಗಿದೆ ಎಂದರು.

ಕೆಆರ್‌ಎಸ್ ನಿರ್ಮಾಣಕ್ಕೂ ಮುನ್ನ ಟಿಪ್ಪು ಸುಲ್ತಾನ್ ಬ್ಯಾರೇಜ್ ನಿರ್ಮಾಣ ಮಾಡಿ, ಅಲ್ಲಿ 6.50 ಟಿಎಂಸಿ ನೀರನ್ನು ಶ್ರೀರಂಗಪಟ್ಟಣಕ್ಕೆ ನೀಡಿದ್ದರು. ತರುವಾಯ ಅಲ್ಲಿ ವಿಶ್ವೇಶ್ವರಯ್ಯ ಅವರು ಸರ್ವೆ ಮಾಡಿಸಿದರು. ಅದೇ ಸ್ಥಳದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೆಆರ್‌ಎಸ್ ಜಲಾಶಯ ನಿರ್ಮಿಸಿದರು ಎಂದರು.

ಸಿದ್ದರಾಮಯ್ಯ ನಾಲ್ವಡಿಯವರಿಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ: ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ನಂತರ ಮೈಸೂರಿ ನಲ್ಲಿ ಸಿದ್ದರಾಮಯ್ಯ ಅವರೇ ಹೆಚ್ಚು ಅಭಿವೃದ್ಧಿ ಮಾಡಿದ್ದಾರೆ ಎಂಬ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ನೀಡಿರುವ ಹೇಳಿಕೆ ಕೂಡ ಸರಿಯಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತೆರಿಗೆ ಸಂಗ್ರಹಿಸಿ ಅಭಿವೃದ್ಧಿ ಮಾಡಿದ್ದರು. ಹಾಗೆಯೇ ಸಿದ್ದರಾಮಯ್ಯ ಅವರು ನಾಲ್ವಡಿ ಅವರಿಗಿಂತ ಹೆಚ್ಚು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದು ಲಕ್ಷ್ಮಣ್ ಹೇಳಿದರು.

ಆದರೆ ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಈ ವಿಚಾರವಾಗಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಹಾಲಿ ಸಂಸದ ಯದುವೀರ್ ಅವರನ್ನು ನಾಲ್ವಡಿ ಅವರಿಗೆ ಹೋಲಿಕೆ ಮಾಡುತ್ತಾರೆ. ನಾಲ್ವಡಿ ಅವರು ರಾಜರಾಗಿ ಅಭಿವೃದ್ಧಿ ಮಾಡಿದ್ದರು. ಆದರೆ ಯದುವೀರ್ ಅವರು ಚುನಾವಣೆ ಮೂಲಕ ರಾಜಕಾರಣ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಕೆಆರ್‌ಎಸ್ ನಿರ್ಮಾಣಕ್ಕೆ ಟಿಪ್ಪುಸುಲ್ತಾನ್ ಅಡಿಗಲ್ಲು ಹಾಕಿದ್ದಾನೆ ಎಂಬ ವಾಸ್ತವತೆ ಇದ್ದರೂ ಪ್ರತಾಪ್ ಸಿಂಹ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಈ ಬಗ್ಗೆ ಸ್ಪಷ್ಟ ಮಾಹಿತಿ ಬೇಕಿದ್ದರೆ ಪ್ರತಾಪ್ ಸಿಂಹ ಅವರು ಬ್ರಿಟಿಷ್ ಕಾಲದ ದಾಖಲೆಗಳನ್ನು ನೋಡಲಿ ಎಂದು ಸಲಹೆ ನೀಡಿದರು.

ಕೆಆರ್‌ಎಸ್ ಅಣೆಕಟ್ಟೆಗೆ ಟಿಪ್ಪು ಅಡಿಗಲ್ಲು ಹಾಕಿದ್ದು!; ಡಾ.ಮಹದೇವಪ್ಪ ಹೇಳಿಕೆಗೆ ಪ್ರತಾಪ್ ಸಿಂಹ ಕಿಡಿ

ಜೂನಿಯರ್ ಡಾಕ್ಟರ್ ಯತೀಂದ್ರರಿಂದ ಇತಿಹಾಸ ಸೃಷ್ಟಿ; ಸೀನಿಯರ್ ಡಾಕ್ಟರ್ ಮಹದೇವಪ್ಪರಿಂದ ಇತಿಹಾಸ ತಿರುಚುವಿಕೆ

ಮೈಸೂರು, ಆ.6(ಬಿಎಲ್‌ಯು)– ಕೆಆರ್‌ಎಸ್ ಜಲಾಶಯಕ್ಕೆ ಟಿಪ್ಪು ಸುಲ್ತಾನ್ ಅಡಿಗಲ್ಲು ಹಾಕಿದ್ದಾನೆ ಎಂಬ ಡಾ.ಹೆಚ್.ಸಿ.ಮಹದೇವಪ್ಪ ಅವರ ಹೇಳಿಕೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತೊಮ್ಮೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.



ಪ್ರತಾಪ್ ಸಿಂಹ

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಜೂನಿಯರ್ ಡಾಕ್ಟರ್ ಯತೀಂದ್ರ ನಾಲ್ವಡಿಯವರಿಗಿಂತ ನಮ್ಮಪ್ಪನೆ ದೊಡ್ಡ ವ್ಯಕ್ತಿ ಎಂದಿದ್ದರು. ಆದರೆ ಈಗ ಸೀನಿಯರ್ ಡಾಕ್ಟರ್ ಮಹದೇವಪ್ಪ ಅವರ ಸರದಿ. ಜೂನಿಯರ್ ಡಾಕ್ಟರ್ ಯತೀಂದ್ರ ಹೊಸ ಇತಿಹಾಸ ಬರೆಯಲು ಹೊರಟರೆ, ಸೀನಿಯರ್ ಡಾಕ್ಟರ್ ಇತಿಹಾಸ ತಿರುಚಲು ಯತ್ನಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಟಿಪ್ಪು ಸುಲ್ತಾನ್ ಕೆಆರ್‌ಎಸ್ ಜಲಾಶಯಕ್ಕೆ ಅಡಿಗಲ್ಲು ಇಟ್ಟಿದ್ದರೆ, ಡಿಪಿಆರ್ ಮಾಡಿದವರು ಯಾರು ಎಂದು ಡಾ.ಮಹದೇವಪ್ಪ ಅವರು ತಿಳಿಸಲಿ ಎಂದು ಸಲಹೆ ನೀಡಿದರು.

ಟಿಪ್ಪು ಆಳ್ವಿಕೆ ವೇಳೆ ವಿಶ್ವೇಶ್ವರಯ್ಯ ಅವರು ಹುಟ್ಟೆ ಇರಲಿಲ್ಲ. 1799ರಲ್ಲಿ ಟಿಪ್ಪು ಮೃತಪಟ್ಟನು. 1911ರಲ್ಲಿ ಕೆಆರ್‌ಎಸ್ ನಿರ್ಮಾಣ ಕಾರ್ಯ ಆರಂಭವಾಯಿತು. ನೀವು ನೀಡಿದ ಹೇಳಿಕೆಯನ್ನು ನೋಡಿದರೆ ಎಲ್ಲಿಂದ ಎಲ್ಲಿಗೆ ಲಿಂಕ್ ಮಾಡುತ್ತಿದ್ದೀರಾ ಮಹದೇವಪ್ಪ ಅವರೇ. ಟಿಪ್ಪು ಸುಲ್ತಾನ್ ದಸರಾ ಆರಂಭ ಮಾಡಿದ ಎಂದು ಹೇಳಿ ಬಿಡಿ ಎಂದು ಡಾ.ಮಹದೇವಪ್ಪ ಹೇಳಿಕೆಯನ್ನು ಪ್ರತಾಪ್ ಸಿಂಹ ಗೇಲಿ ಮಾಡಿದರು.

ನಾಲ್ವಡಿ ಹಾಗೂ ವಿಶ್ವೇಶ್ವರಯ್ಯ ಅವರು ಇರದಿದ್ದರೆ ಕೆಆರ್‌ಎಸ್ ಜಲಾಶಯ ನಿರ್ಮಾಣವೇ ಆಗುತ್ತಿರಲಿಲ್ಲ. ನಾಲ್ವಡಿ ಅವರ ಬಗ್ಗೆ ನಿಮಗೇಕೆ ಇಷ್ಟು ಕೋಪ. ಕಳೆದ ವಾರ ನಾಲ್ವಡಿ ಅವರ ಬಗ್ಗೆ ಯತೀಂದ್ರ ಅವಹೇಳನ ಮಾಡಿದರು, ಈಗ ಡಾ.ಮಹದೇವಪ್ಪ ಸರದಿ ಎಂದು ಕಿಡಿಕಾರಿದರು. ಮೈಸೂರು ಮಹಾರಾಜರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಕ್ತಗತ ದ್ವೇಷವಿದೆ. ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದನು. ಇದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಟಿಪ್ಪು ಅದು ಹೇಗೆ ಸ್ವಾತಂತ್ರ್ಯ ಹೋರಾಟಗಾರನಾದನು. ಇದಕ್ಕೆ ಟೈಮ್ ಲೈನ್ ಇಲ್ಲವೆ ಎಂದು ಪ್ರಶ್ನಿಸಿದರು.

ಟಿಪ್ಪು ಸುಲ್ತಾನ್ ಆಳ್ವಿಕೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಲ್ಪನೆಯೇ ಇರಲಿಲ್ಲ. ತಮ್ಮ ಸಂಸ್ಥಾನದ ಉಳಿವಿಗೆ ಹಲವು ರಾಜರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದರು. ಅವರಲ್ಲಿ ಟಿಪ್ಪು ಕೂಡ ಒಬ್ಬ. ವಾಸ್ತವ ವಿಚಾರ ಮರೆಮಾಡಿ ಒಂದು ಸಮುದಾಯದ ಮತಕ್ಕಾಗಿ ಇತಿಹಾಸ ತಿರುಚುವುದು ಡಾ.ಮಹದೇವಪ್ಪ ಅವರಿಗೆ ಶೋಭೆ ತರುವುದಿಲ್ಲ ಎಂದು ಪ್ರತಾಪ್ ಸಿಂಹ ಹೇಳಿದರು.

ರಾಜ್ಯಾದ್ಯಂತ 2,000 ಮದರಸಾಗಳಲ್ಲಿ ಕನ್ನಡ ಕಲಿಕೆ ಆರಂಭ

ಬೆಂಗಳೂರು, ಆ.6– ಕನ್ನಡ ಅಭಿವೃದ್ಧಿ ಪ್ರಾಧಿಕಾರ (ಕೆಡಿಎ) ಸುಮಾರು 2,000 ಮದರಸಾಗಳಲ್ಲಿ ಕನ್ನಡ ಭಾಷಾ ಶಿಕ್ಷಣವನ್ನು ಪರಿಚಯಿಸುವ ಕಾರ್ಯಕ್ರಮ ಆರಂಭಿಸಿದೆ. 180 ಮದರಸಾ ಶಿಕ್ಷಕರಿಗೆ ತರಬೇತಿಯೊಂದಿಗೆ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ಆರಂಭವಾಗಿದೆ.

ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಕೆಡಿಎ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ, ರಾಜ್ಯ ಭಾಷೆಯ ಮೂಲಕ ಸಮುದಾಯಗಳ ನಡುವೆ ಸಂವಹನ ಮತ್ತು ತಿಳುವಳಿಕೆಯನ್ನು ಬಲಪಡಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಕನ್ನಡ ಕಲಿಕೆಯು ಅಲ್ಪಸಂಖ್ಯಾತ ಸಮುದಾಯಗಳು ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಹೆಚ್ಚು ಆಳವಾಗಿ ತೊಡಗಿಸಿಕೊಳ್ಳಲು ನೆರವಾಗುತ್ತದೆ. ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಸೌಹಾರ್ದತೆಯ ಬುನಾದಿಗಳು ಎಂಬ ಶೀರ್ಷಿಕೆಯಡಿ 100 ಪುಸ್ತಕಗಳನ್ನು ಪ್ರಕಟಿಸಲು ಕೆಡಿಎ ಕಾರ್ಯೋನ್ಮುಖವಾಗಿದ್ದು, ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಪ್ರಸ್ತುತ ಸ್ವಾಯತ್ತವಾಗಿ ಕಾರ್ಯನಿರ್ವಹಿಸುತ್ತಿರುವ ಉರ್ದು ಅಕಾಡೆಮಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ತರುವಂತೆ ಬಿಳಿಮಲೆ ಸಲಹೆ ನೀಡಿದರು. ಇತರ ಭಾಷಾ ಅಕಾಡೆಮಿಗಳು ಈಗಾಗಲೇ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಿಯಮಿತವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ ಮತ್ತು ಉರ್ದು ಅಕಾಡೆಮಿಯನ್ನು ಈ ರೀತಿ ಮಾಡುವುದರಿಂದ ಸಾರ್ವಜನಿಕ ಸಂಬಂಧಿತ ಕಾರ್ಯಕ್ರಮಗಳಲ್ಲಿ ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ಇರುತ್ತದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಜಮೀರ್ ಅಹಮದ್, ಇಲಾಖೆ ಅಗತ್ಯ ಕ್ರಮ ಕೈಗೊಳ್ಳಲಿದೆ. ಮಸೀದಿಗಳಲ್ಲಿ ಕೆಲಸ ಮಾಡುವ ಮೌಲ್ವಿಗಳಿಗೂ ಕನ್ನಡ ಪಾಠ ಕಲಿಸಲಾಗುವುದು ಎಂದು ತಿಳಿಸಿದರು.

ಪ್ಲಾಸ್ಟಿಕ್ ಮುಕ್ತ ಪರಿಸರ ಸಂರಕ್ಷಣೆ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ

ಮೈಸೂರು, ಆ.6(ಎಂಕೆ)– ಪರಿಸರ ಸಂರಕ್ಷಣೆ ಅಗತ್ಯ ಮತ್ತು ಅನಿವಾರ್ಯ ಎಂದು ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಎಸ್.ಮಹಾದೇವ ಮೂರ್ತಿ ಹೇಳಿದರು.



ಮೈಸೂರಿನ ಯುವರಾಜ ಕಾಲೇಜು ಆವರಣದಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು.

ಕಾಲೇಜಿನ ಕನ್ನಡ ಅಧ್ಯಯನ ವಿಭಾಗ ವತಿಯಿಂದ ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 'ಪ್ಲಾಸ್ಟಿಕ್ ಮುಕ್ತ ಪರಿಸರ ಸಂರಕ್ಷಣೆ–ಸ್ವಚ್ಛತಾ ಅಭಿಯಾನ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸ್ವಚ್ಛ ಹಾಗೂ ನಿರ್ಮಲ ವಾತಾವರಣಕ್ಕಾಗಿ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪರಿಸರವನ್ನು ಉಳಿಸಿಕೊಳ್ಳಲು ಸಹಕರಿಸಬೇಕು ಎಂದರು.

ಪ್ಲಾಸ್ಟಿಕ್ ಸೇರಿದಂತೆ ಯಾವುದೇ ಅನುಪಯುಕ್ತ ವಸ್ತುಗಳನ್ನು ಎಲ್ಲೆಂದರಲ್ಲಿ ಬೀಸಾಡದೆ ಶುಚಿತ್ವ ಕಾಪಾಡಬೇಕು. ಸುಂದರವಾದ ಪರಿಸರವನ್ನು ವಿದ್ಯಾವಂತರಾದ ನಾವುಗಳು ಮಲಿನಗೊಳಿಸಬಾರದು. ಪ್ರಕೃತಿ, ನಿಸರ್ಗ ಸೌಂದರ್ಯ ನಮಗೆ ಸಿಕ್ಕಿರುವ ವರವಾಗಿದ್ದು, ಪರಿಸರ ಸಂರಕ್ಷಣೆ ಮೂಲಕ ಜೀವ ಸಂಕುಲಕ್ಕೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕು ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ. ಪರಶುರಾಮು, ಪ್ರಾಧ್ಯಾಪಕರಾದ ಪ್ರೊ.ಜಿ. ಶ್ರೀನಿವಾಸ್, ಪ್ರೊ.ಎಂ.ಪಿ. ರೇಖಾ, ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಎಸ್. ಸುರೇಶ್, ಎನ್‌ಎಸ್‌ಎಸ್ ಅಧಿಕಾರಿ ಡಾ.ಗಿರೀಶ್ ಚಂದ್ರ, ಎನ್‌ಸಿಸಿ ಅಧಿಕಾರಿ ಡಾ. ಅನಿಲ್ ಕುಮಾರ್ ಮತ್ತಿತರರಿದ್ದರು.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಆ.6– ಶ್ರೀ ರವಿಶಂಕರ್ ಗುರುದೇವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಆ. 12 ರಿಂದ 16 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8.30 ಹಾಗೂ ಸಂಜೆ 6 ರಿಂದ 8.30 ವರೆಗೆ ಎರಡು ಅವಧಿಯಲ್ಲಿ ಶಿಬಿರ ನಡೆಯಲಿದೆ. ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಆ.6– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ. 7 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಆ. 6– ಮೈಸೂರಿನ ಕುವೆಂಪುನಗರದ ಸುರುಚಿ ರಂಗಮನೆ ವತಿಯಿಂದ ಆ. 9 ರಂದು ಸಂಜೆ 4.30 ರಿಂದ 5.30 ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಥೆ ಹೇಳುವವರು: ಶ್ರೀಮತಿ ಪ್ರಭಾ ಶಾಸ್ತ್ರಿ ಜೋಶ್ಯುಲ, ಕವಿ, ಲೇಖಕಿ, ಅನುವಾದಕಿ ಹಾಗೂ ಗಾಯಕಿ, ಮೈಸೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9243581097, 9945943115 ಸಂಪರ್ಕಿಸಬಹುದು.

ಟಿಪ್‌ಸ್ಟರ್ ಟ್ಯಾಲಿ ಟ್ರೋಫಿ ವಿತರಣೆ



'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ರೇಸಿಂಗ್ ಪ್ರತಿನಿಧಿ ಪಿ.ಜಿ. ಚಂದ್ರಶೇಖರ್ ಅವರಿಗೆ ಮೈಸೂರು ರೇಸ್ ಕ್ಲಬ್ ವತಿಯಿಂದ ಎಂಆರ್‌ಸಿ ಕಮಿಟಿ ಮೆಂಬರ್ ಡಾ. ಅಜಿತ್‌ಕುಮಾರ್ ರಾಜ ಅರಸ್ ಅವರು ಟಿಪ್‌ಸ್ಟರ್ ಟ್ಯಾಲಿ ಟ್ರೋಫಿ ವಿತರಿಸಿದರು. ಈ ವೇಳೆ ಎಂಆರ್‌ಸಿ ಚೇರ್ಮನ್ ಜಿ. ವೆಂಕಟೇಶ್, ಸ್ಟೀವರ್ಡ್‌ಗಳು, ಕಮಿಟಿ ಸದಸ್ಯರು ಉಪಸ್ಥಿತರಿದ್ದರು.

ಶಾಸಕ ಶ್ರೀವತ್ಸರಿಂದ ಪಾದಯಾತ್ರೆ: ನಿವಾಸಿಗಳಿಂದ ಅಹವಾಲು ಆಲಿಕೆ

ಮೈಸೂರು, ಆ.6(ಎಂಕೆ)– ಕೆ.ಆರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.50ರ ಡಿ.ಸುಬ್ಬಯ್ಯ ರಸ್ತೆ, ದಿವಾನ್ಸ್ ರಸ್ತೆ, ಬೆಸ್ತರಗೇರಿ, ಕುಂಬಾರಗೇರಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿ ಸ್ಥಳೀಯ ನಿವಾಸಿಗಳ ಸಮಸ್ಯೆ ಆಲಿಸಿದರು.



ಶಾಸಕ ಟಿ.ಎಸ್.ಶ್ರೀವತ್ಸ ಬುಧವಾರ ವಾರ್ಡ್ ನಂ.50ರ ವ್ಯಾಪ್ತಿಯಲ್ಲಿ ಪಾದಯಾತ್ರೆ ನಡೆಸಿ, ನಿವಾಸಿಗಳ ಅಹವಾಲು ಆಲಿಸಿದರು.

ಯುಜಿಡಿ ಸಮಸ್ಯೆ, ಕುಡಿಯುವ ನೀರು ಸಂಬಂಧ ಸಾಕಷ್ಟು ದೂರುಗಳು ಕೇಳಿಬಂದ ಹಿನ್ನೆಲೆ ಕೂಡಲೇ ಸಮಸ್ಯೆ ಬಗೆಹರಿಸುವಂತೆ ಪಾಲಿಕೆ ಎಇಇ ಧನುಷ್, ಎ.ಇ. ಪ್ರಶಾಂತ್ ಅವರಿಗೆ ಸೂಚನೆ ನೀಡಿದರು. ಹಲವಾರು ವರ್ಷಗಳಿಂದ ಒಳಚರಂಡಿ ಸ್ವಚ್ಛಗೊಳಿಸದೆ ದುರ್ವಾಸನೆ ಹೆಚ್ಚಾಗುತ್ತಿದೆ ಎಂಬ ಬೆಸ್ತರಗೇರಿ ನಿವಾಸಿಗಳ ಸಮಸ್ಯೆ ಆಲಿಸಿದ ಶಾಸಕರು, ವಲಯ ಕಚೇರಿ–1ರ ಉಪ ಆಯುಕ್ತ ಮಂಜುನಾಥ್ ರೆಡ್ಡಿ ಅವರಿಗೆ ಕೂಡಲೇ ಒಳಚರಂಡಿ ಸ್ವಚ್ಛತೆಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಹಾಗೆಯೇ ಸೀತಾವಿಲಾಸ ಛತ್ರದ ಹಿಂಭಾಗದ ಖಾಲಿ ಜಾಗದಲ್ಲಿ ರಾತ್ರಿ ವೇಳೆ ಪುಂಡರ ಹಾವಳಿ ನಿಯಂತ್ರಿಸುವಂತೆ ಲಕ್ಷ್ಮಿಪುರಂ ಠಾಣೆ ಪೊಲೀಸರಿಗೆ ತಿಳಿಸಿದರಲ್ಲದೆ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ರಾತ್ರಿ ವೇಳೆ ಗಸ್ತು ತಿರುಗಬೇಕು ಎಂದು ತಿಳಿಸಿದರು.

ಹಾಗೆಯೇ ಕುಂಬಾರಗೇರಿ ಮುಖ್ಯ ರಸ್ತೆಗೆ ಡಾಂಬರ್ ಮಾಡುವಂತೆ ಇಲ್ಲಿನ ನಿವಾಸಿಗಳು ಮನವಿ ಮಾಡಿದರು. ಮಾಜಿ ಮೇಯರ್ ಶಿವಕುಮಾರ್, ವಾರ್ಡ್ ಅಧ್ಯಕ್ಷ ಮಾಸ್ಟರ್ ಮಂಜು, ಮುಖಂಡರಾದ ಜೋಗಪ್ಪ, ಜೋಗಿ ಮಂಜು, ಕೃಷ್ಣ ನಾಯಕ್, ನಂದೀಶ್, ಲೋಕೇಶ್ ಜಯಸಿಂಹ, ವಿಜಯಕುಮಾರ್, ಅರುಣ್, ಜಯಲಕ್ಷ್ಮಿ, ಕಿಶೋರ್, ಅನಿಲ್, ಶರತ್, ಹೇಮಂತ್, ಗಂಗಾಧರ್ ಮತ್ತಿತರರಿದ್ದರು.

ಮೊಬೈಲ್ ಹ್ಯಾಕ್ ಮಾಡಿ 1.98 ಲಕ್ಷ ರೂ. ಕಳವು

ಮೈಸೂರು, ಆ.6– ಮೊಬೈಲ್ ಹ್ಯಾಕ್ ಮಾಡಿ ಮಹಿಳೆ ಖಾತೆಯಲ್ಲಿದ್ದ 1.98 ಲಕ್ಷ ರೂ. ದೋಚಿರುವ ಘಟನೆ ಮೈಸೂರಿನಲ್ಲಿ ಮಂಗಳವಾರ ನಡೆದಿದೆ.



ಶ್ರೀರಾಂಪುರ ನಿವಾಸಿ ಮಹಿಳೆ ಹಣ ಕಳೆದುಕೊಂಡವರು. ಜ್ಯೋತಿಷ್ಯದ ಬಗ್ಗೆ ಆಸಕ್ತಿ ಹೊಂದಿದ್ದ ಅವರು ನಿತ್ಯಕುಂಡಲಿ ಪುಸ್ತಕ ಖರೀದಿಸುವ ಸಲುವಾಗಿ ಗೂಗಲ್‌ನಲ್ಲಿ ಸರ್ಚ್ ಮಾಡಿದ್ದಾರೆ. ಗೌರಿಶಂಕರ ಬುಕ್ ಡಿಪೋ ಫೋನ್ ನಂಬರ್ ಪಡೆದುಕೊಂಡು ಕಾಲ್ ಮಾಡಿದ್ದಾರೆ. ಕರೆ ಸ್ವೀಕರಿಸಿದ ವ್ಯಕ್ತಿ ಪುಸ್ತಕ ಇರುವುದಾಗಿ ಉತ್ತರಿಸಿದ್ದಾನೆ. ಈ ವೇಳೆ ಒಪಿಕೆ ಫೈಲ್ ಬಂದಿದ್ದು, ಆಕಸ್ಮಿಕವಾಗಿ ಫೈಲ್ ಓಪನ್ ಆಗಿದೆ.

ಇನ್ನು, ಮಾತನಾಡುವಾಗಲೇ ಇದೊಂದು ಫ್ರಾಡ್ ಕಾಲ್ ಎಂಬುದು ಗೊತ್ತಾಗಿದ್ದು, ಕಾಲ್ ಕಟ್ ಮಾಡಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ತಕ್ಷಣ ಬ್ಯಾಂಕ್ ಖಾತೆಯಿಂದ ಹಣ ಡ್ರಾ ಆಗಿರುವ ಬಗ್ಗೆ ಫೇಕ್ ಮೆಸೇಜ್ ಬಂದಿದೆ. ಮಾತನಾಡುತ್ತಿದ್ದ ವ್ಯಕ್ತಿ ನಿಮ್ಮ ಹಣ ಹಿಂಪಡೆಯಬೇಕಾದರೆ ನಾನು ಹೇಳಿದಂತೆ ಕೇಳಬೇಕು ಎಂದು ಕರೆಯಲ್ಲೇ ಬೆದರಿಕೆ ಹಾಕಿದ್ದಾನೆ. ಆತ ಹೇಳಿದಂತೆ ಮಾಡಿ ಎರಡು ಖಾತೆಗಳಿಂದ ತಲಾ 99 ಸಾವಿರ ರೂ. ಸೇರಿ ಒಟ್ಟು 1.98 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಕರೆ ಕಟ್ ಮಾಡಲು ಸಾಧ್ಯವಾಗದೆ ಮೊಬೈಲ್ ಸ್ವಿಚ್ ಆಫ್ ಮಾಡಿ, ಬಳಿಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಮೈಸೂರಿನ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಮೈಸೂರು ವಾರಿಯರ್ಸ್‌ಗೆ ಸ್ಥಳೀಯ ಪ್ರತಿಭೆಗಳಾದ ಗೌತಮ್ ಸಾಗರ್, ಜಯಂತ್ ಸೇರ್ಪಡೆ

ಮೈಸೂರು, ಆ.6(ಎಂಟಿವೈ)– ಮಹಾರಾಜ ಟ್ರೋಫಿ–2025 ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿರುವ ಎನ್‌ಆರ್ ಗ್ರೂಪ್‌ನ 'ಮೈಸೂರು ವಾರಿಯರ್ಸ್' ಕ್ರಿಕೆಟ್ ತಂಡಕ್ಕೆ ಮೈಸೂರಿನ ಕ್ರಿಕೆಟ್ ಪಟುಗಳಾದ ಗೌತಮ್ ಸಾಗರ್ ಮತ್ತು ಎಂ.ಆರ್.ಜಯಂತ್ ಆಯ್ಕೆಯಾಗಿದ್ದಾರೆ.



ಗೌತಮ್ ಸಾಗರ್



ಜಯಂತ್

ಭಾರತದ ಪ್ರಮುಖ ಅಗರಬತ್ತಿ ತಯಾರಕರಾದ ಎನ್‌ಆರ್ ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡಕ್ಕಾಗಿ ನಡೆಸಿದ ಪ್ರತಿಭಾನ್ವೇಷಣಾ ಕಾರ್ಯಕ್ರಮದಲ್ಲಿ 184 ಮಂದಿ ಕ್ರಿಕೆಟ್ ಆಟಗಾರರು ಪಾಲ್ಗೊಂಡಿದ್ದು, ಅವರಲ್ಲಿ ಅಂತಿಮವಾಗಿ ಹತ್ತು ಮಂದಿ ಆಟಗಾರರು ಆಯ್ಕೆಯಾಗಿದ್ದರು. ಬಳಿಕ ಮುಖ್ಯ ತಂಡದೊಂದಿಗೆ ನಡೆದ ಕಠಿಣ ತರಬೇತಿ ಹಾಗೂ ಮೌಲ್ಯಮಾಪನದಲ್ಲಿ ಅಂತಿಮವಾಗಿ ಗೌತಮ್ ಸಾಗರ್ ಮತ್ತು ಜಯಂತ್ ಅವರನ್ನು ಆಯ್ಕೆ ಮಾಡಲಾಗಿದೆ. ಗೌತಮ್ ಸಾಗರ್ ಬಲಗೈ ಮಧ್ಯಮ ವೇಗದ ಬೌಲರ್ ಆಗಿದ್ದು, ಅತ್ಯುತ್ತಮ ಪ್ರತಿಭೆ. ಜೋ ಜೋ ಕ್ಲಬ್‌ನಿಂದ ಬಂದಿರುವ ಇವರು ಮೈಸೂರು ವಾರಿಯರ್ಸ್ ತಂಡಕ್ಕೆ ಸೇರ್ಪಡೆಯಾಗಿರುವುದು ತಂಡಕ್ಕೆ ಮತ್ತಷ್ಟು ಬಲ ಬಂದಿದೆ. ಜಯಂತ್ ಬಲಗೈ ಮಧ್ಯಮ ವೇಗದ ಬೌಲರ್ ಆಗಿದ್ದು, ಅತ್ಯುತ್ತಮ ಸ್ಥಿರ ಪ್ರದರ್ಶನಕ್ಕೆ ಹೆಸರು ಮಾಡಿಸಿದಂತಿದ್ದಾರೆ. ಇವರು ಕರಾವಳಿ ಕ್ರಿಕೆಟ್ ಕ್ಲಬ್‌ಗೆ ಸೇರಿದವರು.

ಈ ಕುರಿತು ಪ್ರತಿಕ್ರಿಯಿಸಿರುವ ಮೈಸೂರು ವಾರಿಯರ್ಸ್ ತಂಡದ ಮಾಲೀಕರು ಹಾಗೂ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್ ರಂಗ, ಗೌತಮ್ ಸಾಗರ್ ಮತ್ತು ಜಯಂತ್ ಎಂ.ಆರ್. ಅವರನ್ನು ಮೈಸೂರು ವಾರಿಯರ್ಸ್ ತಂಡಕ್ಕೆ ಅತ್ಯಂತ ಉತ್ಸಾಹದಿಂದ ಬರಮಾಡಿಕೊಂಡಿದ್ದೇವೆ. ಈ ಇಬ್ಬರ ಸೇರ್ಪಡೆಯಿಂದ ಸ್ಥಳೀಯ ಪ್ರತಿಭೆಗಳನ್ನು ಪೋಷಿಸುವ ಮತ್ತು ಅವರಿಗೆ ಉತ್ತಮ ವೇದಿಕೆ ಒದಗಿಸುವ ನಮ್ಮ ಬದ್ಧತೆಗೆ ಪುರಾವೆಯಾಗಿದೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ನಡೆದ ಪ್ರತಿಭಾನ್ವೇಷಣಾ ಕಾರ್ಯಕ್ರಮದ ಬಳಿಕ ಈ ಇಬ್ಬರು ಆಟಗಾರರನ್ನು ಆಯ್ಕೆ ಮಾಡಲಾಗಿದೆ. ಈ ಇಬ್ಬರೂ ಅಸಾಧಾರಣ ಕೌಶಲ ಮತ್ತು ಸಾಮರ್ಥ್ಯ ಹೊಂದಿದ್ದಾರೆ. ಇವರು ನಮ್ಮ ತಂಡದ ಬಲ ಹೆಚ್ಚಿಸಲಿದ್ದಾರೆ ಎಂಬ ನಂಬಿಕೆ ನಮಗಿದೆ ಎಂದರು.

2025ರ ಮಹಾರಾಜ ಟ್ರೋಫಿ ಪಂದ್ಯಾವಳಿಯು ಆ.11ರಿಂದ 28ರವರೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಪ್ರಕಟಿಸಲಾಗಿತ್ತಾದರೂ, ಈಗ ಪಂದ್ಯಾವಳಿ ಮೈಸೂರಿಗೆ ಸ್ಥಳಾಂತರಗೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರಾಗನ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಈ ಪಂದ್ಯಾವಳಿಯಲ್ಲಿ ಸೆಣಸಲಿವೆ.

ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ದುರಂತ

ಮೃತಪಟ್ಟ 11 ಮಂದಿ ಕುಟುಂಬಕ್ಕೆ ತಲಾ 5 ಕೋಟಿ ಪರಿಹಾರ ಕಲ್ಪಿಸಲು ವಾಟಾಳ್ ಆಗ್ರಹ



ಆರ್‌ಸಿಬಿ ವಿಜಯೋತ್ಸವದ ವೇಳೆ ಉಂಟಾದ ಕಾಲ್ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ 5 ಕೋಟಿ ಪರಿಹಾರ ನೀಡುವಂತೆ ಕನ್ನಡ ಚಳವಳಿ ವಾಟಾಳ್ ಪಕ್ಷದ ಮುಖಂಡ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.6(ಎಂಟಿವೈ)– ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಉಂಟಾದ ಕಾಲ್ತುಳಿತದಲ್ಲಿ ಮೃತಪಟ್ಟ 11 ಕುಟುಂಬದವರಿಗೆ ತಲಾ 5 ಕೋಟಿ ಪರಿಹಾರ ನೀಡುವಂತೆ ಒತ್ತಾಯಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ನಾಯಕರಾದ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವರು ಪಾಲ್ಗೊಂಡು, ಕಾಲ್ತುಳಿತದಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ 5 ಕೋಟಿ ರೂ. ಪರಿಹಾರ ನೀಡಬೇಕೆಂದು ಆಗ್ರಹಿಸಿದರು. ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿ ತಂಡ ಗೆಲುವು ಸಾಧಿಸಿದ್ದ ಹಿನ್ನೆಲೆಯಲ್ಲಿ ಬೆಂಗಳೂರಲ್ಲಿ ಆಯೋಜಿಸಿದ್ದ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಸಂಭವಿಸಿತ್ತು. ಈ ದುರಂತದಲ್ಲಿ ಮೃತಪಟ್ಟ ಮಕ್ಕಳ ಕುಟುಂಬದ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ. ಆ ಕುಟುಂಬ ಸತ್ತ ಮಕ್ಕಳ ಸಮಾಧಿ ಮುಂದೆ ಕಣ್ಣೀರು ಹಾಕುತ್ತಿದೆ. ಈ ಘಟನೆಯನ್ನು ರಾಜ್ಯ ಸರ್ಕಾರ ಆರ್‌ಸಿಬಿ ಆಡಳಿತ ಮಂಡಳಿ ಮೇಲೆ ಹಾಕಿದೆ. ಹಾಗಿದ್ದರೆ ಸರ್ಕಾರದ ಜವಾಬ್ದಾರಿ ಇಲ್ಲವೆ? ಈ ಘಟನೆಗೆ ಯಾರೇ ಕಾರಣರಾಗಿರಲಿ ಮೊದಲು ಮೃತಪಟ್ಟವರ ಕುಟುಂಬಗಳಿಗೆ ತಲಾ 5 ಕೋಟಿ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಕನ್ನಡ ಹೋರಾಟಗಾರರಾದ ನಂಜುಂಡಸ್ವಾಮಿ, ಪಾರ್ಥಸಾರಥಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಗೋಲ್ಡ್ ಸುರೇಶ್, ಶಿವಕುಮಾರ್, ರಾಧಾಕೃಷ್ಣ, ಕುಮಾರ್, ಹನುಮಂತಯ್ಯ, ಪ್ರಭಾಕರ್, ರಘು ಅರಸ್, ಬಸವರಾಜು, ರವೀಶ್, ದರ್ಶನ್ ಗೌಡ, ವಿಷ್ಣು ಸೇರಿದಂತೆ ಇನ್ನೂ ಇತರರು ಉಪಸ್ಥಿತರಿದ್ದರು.

ಮನುಷ್ಯನ ದೈಹಿಕ, ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಶಾಸಕ ಹೆಚ್.ಟಿ.ಮಂಜು



ಕ್ರೀಡಾಕೂಟವನ್ನು ಶಾಸಕ ಹೆಚ್.ಟಿ.ಮಂಜು ಗುಂಡು ಎಸೆಯುವ ಮೂಲಕ ಉದ್ಘಾಟಿಸಿದರು.

ಕೆ.ಆರ್.ಪೇಟೆ, ಆ.6– ಕ್ರೀಡೆ ಮಕ್ಕಳಲ್ಲಿ ಸ್ನೇಹ ಬಲ ಪಡಿಸುತ್ತದೆ. ಕ್ರೀಡೆಗಳು ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗಿದ್ದು, ಕ್ರೀಡೆಗಳ ಮೂಲಕ ಶೈಕ್ಷಣಿಕ ಕಾರ್ಯಕ್ಷಮತೆ ಹೆಚ್ಚಿಸಬಹುದು. ಹಾಗಾಗಿ ಪ್ರತಿಯೊಬ್ಬರೂ ತಮಗಿಷ್ಟವಾದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಸಿಂಧುಘಟ್ಟ ಸರ್ಕಾರಿ ಪ್ರಾಥಮಿಕ ಶಾಲಾ ವರಣದಲ್ಲಿ ಹಮ್ಮಿಕೊಂಡಿದ್ದ ಶೀಳನೆರೆ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟವನ್ನು ಗುಂಡು ಎಸೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಯಲ್ಲಿ ಆದ ಸ್ನೇಹ ಜೀವಿತಾವಧಿಯವರೆಗೆ ಇರುತ್ತದೆ. ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಗುವಿನ ಅರಿವು ಸುಧಾರಿಸಬಹುದು. ಇದು ಮಗುವಿನ ಸ್ಮರಣಶಕ್ತಿ, ಗಮನ ಮತ್ತು ಕಲಿಕೆ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸುವುದ ರಿಂದ ಕಠಿಣ ದೈಹಿಕ ಚಟುವಟಿಕೆ ನಂತರ ತರಗತಿಯಲ್ಲಿ ಹೆಚ್ಚು ಶಾಂತವಾಗಿರುತ್ತಾರೆ ಮತ್ತು ಪಾಠ ಆಲಿಸಲು ಮುಕ್ತರಾಗಿರುತ್ತಾರೆ. ಹೀಗಾಗಿ ಕ್ರೀಡೆಗಳು ಮಕ್ಕಳನ್ನು ತರಗತಿಯ ಬೋಧನೆಗೆ ಹೆಚ್ಚು ಒಳಗಾಗುವಂತೆ ಮಾಡುತ್ತದೆ. ಕ್ರೀಡೆ ಮತ್ತು ದೈಹಿಕ ಚಟುವಟಿಕೆ ಮಕ್ಕಳಲ್ಲಿ ಯೋಜನೆ, ವಿಮರ್ಶಾತ್ಮಕ ಚಿಂತನೆ, ಆದ್ಯತೆ ನೀಡುವಿಕೆ ಮತ್ತು ಸ್ಮರಣ ಶಕ್ತಿಯನ್ನು ಸುಧಾರಿಸುತ್ತದೆ. ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ಮಕ್ಕಳು ತಮ್ಮ ಉನ್ನತ ಕ್ರಮಾಂಕದ ಚಿಂತನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಮತ್ತು ಅವರ ಶೈಕ್ಷಣಿಕ ಕಾರ್ಯಕ್ಷಮತೆ ಸುಧಾರಿಸಬಹುದಾಗಿದೆ. ಹೀಗಾಗಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಕ್ರೀಡೆ ಆಸಕ್ತಿ ಗುರುತಿಸಿ ಅವರಿಗೆ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು ಎಂದರು.

ತಾಪಂ ಇಓ ಕೆ.ಸುಷ್ಮ ಕ್ರೀಡಾಜ್ಯೋತಿ ಸ್ವೀಕರಿಸಿ ಮಾತನಾಡಿ, ಕ್ರೀಡಾಕೂಟದಲ್ಲಿ ಮಕ್ಕಳು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಎಂದರು.

ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಆರ್.ಆನಂದ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಎಲ್.ಎಸ್.ಧರ್ಮಪ್ಪ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪೂರ್ಣಚಂದ್ರ, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಪ್ರಭುಕುಮಾರ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣಗೌಡ, ಮುಖ್ಯ ಶಿಕ್ಷಕ ಶಶಿಧರ್, ಹಿರಿಯ ಶಿಕ್ಷಕ ಭಗವಾನ್, ಟಿಎಪಿಸಿ ಎಂಎಸ್ ನಿರ್ದೇಶಕ ದಿನೇಶ್, ಶಿಕ್ಷಣ ಸಂಯೋಜಕ ಮೋಹನಕುಮಾರ್, ಸಿಂಧುಘಟ್ಟ ಗ್ರಾಪಂ ಅಧ್ಯಕ್ಷೆ ಲಾವಣ್ಯ ಕುಮಾರ್, ಪಿಡಿಓ ಕೆ.ಜೆ.ವಾಣಿ, ಕಾರ್ಯದರ್ಶಿ ನಾಗಪ್ಪ, ಸದಸ್ಯರಾದ ಸುಮಲತಾ, ನಂಜಪ್ಪ ಆಶಾ, ಎಸ್.ಐ.ಗಿರೀಶ್, ಗ್ರಾಪಂ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಲೋಕೇಶ್, ದೈಹಿಕ ಶಿಕ್ಷಕರಾದ ಸುಂದರೇಶ್, ಎಂ.ಪಿ.ಕಿರಣ್‌ಕುಮಾರ್, ರವಿಕುಮಾರ್ ಸೇರಿ ದಂತೆ ಶೀಳನೆರೆ ಹೋಬಳಿ ವ್ಯಾಪ್ತಿಯ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ದೈಹಿಕ ಶಿಕ್ಷಕರು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ಈ ವೇಳೆ ಗ್ರಾಪಂ ವತಿಯಿಂದ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಟ್ರ್ಯಾಕ್‌ಸೂಟ್ ಹಾಗೂ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ 10 ಸಾವಿರ ರೂ. ಬಹುಮಾನವನ್ನು ಅಧ್ಯಕ್ಷೆ ಲಾವಣ್ಯ ಕುಮಾರ್ ನೀಡಿದರು.

ನ್ಯಾಮನಹಳ್ಳಿ ಪಿಎಸಿಎಸ್ ಎನ್‌ಡಿಎ ಮೈತ್ರಿಕೂಟದ ತೆಕ್ಕೆಗೆ

ಜೆಡಿಎಸ್–ಬಿಜೆಪಿ ಬೆಂಬಲಿತ ನಿರ್ದೇಶಕರಿಗೆ ಮಾಜಿ ಸಚಿವ ಸಿಎಸ್‌ಪಿ ಅಭಿನಂದನೆ



ನ್ಯಾಮನಹಳ್ಳಿ ಪಿಎಸಿಎಸ್ ಜೆಡಿಎಸ್–ಬಿಜೆಪಿ ಬೆಂಬಲಿತ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಪಾಂಡವಪುರ, ಆ.6– ತಾಲೂಕಿನ ಜಕ್ಕನಹಳ್ಳಿಯಲ್ಲಿರುವ ನ್ಯಾಮನಹಳ್ಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ 12 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 9 ಸ್ಥಾನಗಳಲ್ಲಿ ಗೆಲುವು ಸಾಧಿಸಿದ ಜೆಡಿಎಸ್–ಬಿಜೆಪಿ ಬೆಂಬಲಿತ ಎನ್‌ಡಿಎ ಮೈತ್ರಿಕೂಟದ ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ನ್ಯಾಮನಹಳ್ಳಿ ಪಿಎಸಿಎಸ್‌ನ 12 ಸ್ಥಾನಗಳ ಪೈಕಿ ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಎ.ಎನ್.ಮಂಜು ನಾಥ್ ಅರಕನಕೆರೆ(ಸಾಲಗಾರರಲ್ಲದ ಕ್ಷೇತ್ರ), ಎಸ್‌ಎನ್‌ಟಿ ಸೋಮಶೇಖರ್, ಕೆಂಪೇಗೌಡ, ಶೀಲಾವತಿ, ನಾಗೇಶ್, ಸೋಮಶೇಖರ್, ಪಿ.ಎಸ್.ಅರುಣಕುಮಾರ್, ಪಿ.ಪ್ರಕಾಶ್, ಜೆ.ಅಂಬಿಕಾ ಸೇರಿದಂತೆ 9 ಅಭ್ಯರ್ಥಿಗಳು ಆಯ್ಕೆಯಾದರೇ, ರೈತ ಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾಗಿ ಚನ್ನೇಗೌಡ, ಕೋಕಿಲಾ ಜ್ಞಾನೇಶ್, ರೈತ ಸಂಘದ ಬಂಡಾಯ ಅಭ್ಯರ್ಥಿಯಾಗಿ ಶಿವರಾಮೇಗೌಡ ಗೆಲುವು ಸಾಧಿಸಿದರು.

ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ತಾಲೂಕಿನ ನ್ಯಾಮನಹಳ್ಳಿ ಪಿಎಸಿಎಸ್ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. 12 ಸ್ಥಾನಗಳ ಪೈಕಿ 9 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಸಂಘದ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಆ ಮೂಲಕ ಪಕ್ಷ ಬಲ ಪಡಿಸುವ ಕೆಲಸ ಮಾಡಿದ್ದಾರೆ. ಮೇಲುಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ ನಡೆದ ಬಹುತೇಕ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳೇ ಅಧಿಕ ಸಂಖ್ಯೆಯಲ್ಲಿ ಆಯ್ಕೆಯಾಗುವ ಮೂಲಕ ಪಕ್ಷದ ಕೈ ಬಲಪಡಿಸಿದ್ದು ಈ ಚುನಾವಣೆಗಳ ಫಲಿತಾಂಶ ಮುಂದಿನ ಜಿಪಂ, ತಾಪಂ ಚುನಾವಣೆಗಳ ಫಲಿತಾಂಶದ ದಿಕ್ಸೂಚಿ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಹೆಚ್.ಮಂಜುನಾಥ್, ಮುಖಂಡ ಆನಂದ್, ಸೊಸೈಟಿ ಮಾಜಿ ಅಧ್ಯಕ್ಷ ಜೆ.ಪಿ.ಶಿವಶಂಕರ್, ಗ್ರಾಪಂ ಸದಸ್ಯ ದಿವಾಕರ, ಮುಖಂಡರಾದ ನಾಗೇಗೌಡ, ಬೆಟ್ಟಸ್ವಾಮಿಗೌಡ, ದಿನೇಶ್, ಶ್ರೀನಿವಾಸ್, ರವಿ, ಅರಸೇಗೌಡ, ದೇವೇಂದ್ರ, ಕುಮಾರ್, ಧರ್ಮರಾಜು, ಸುರೇಂದ್ರ, ತಮ್ಮಣ್ಣ, ಲಕ್ಷ್ಮೀಸಾಗರ ಸೊಸೈಟಿ ಮಾಜಿ ಅಧ್ಯಕ್ಷ ಅಶೋಕ್ ಸೇರಿದಂತೆ ಹಲವರಿದ್ದರು.

ವೈಯಕ್ತಿಕ ದ್ವೇಷ: ಯುವಕನ ಬರ್ಬರ ಹತ್ಯೆ



ಮಳವಳ್ಳಿ, ಆ.6–ಬಾರ್‌ಗೆ ನುಗ್ಗಿದ ದುಷ್ಕರ್ಮಿಗಳು ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಪಟ್ಟಣದ ಮಾಗನೂರು ಗೇಟ್ ಬಳಿಯ ಸಿದ್ದೇಶ್ವರ ಬಾರ್‌ನಲ್ಲಿ ಬುಧವಾರ ಮಧ್ಯಾಹ್ನ ನಡೆದಿದೆ.

ಮಳವಳ್ಳಿ ಪಟ್ಟಣದ ನಿವಾಸಿ ಮಧು ಅವರ ಪುತ್ರ ಯೋಗೇಶ್(26) ಹತ್ಯೆಗೀಡಾದವರಾಗಿದ್ದು, ಮೃತ ಯುವಕ ಖಾಸಗಿ ವಾಹನದ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಎಂದು ತಿಳಿದು ಬಂದಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ ನಾಲ್ಕೈದು ದುಷ್ಕರ್ಮಿಗಳು ಬಾರೊಳಗೆ ನುಗ್ಗಿ ಯೋಗೀಶ್‌ನ ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿದು, ನಂತರ ಮಚ್ಚಿನಿಂದ ಕೊಚ್ಚಿ ಹತ್ಯೆಗೈದಿದ್ದಾರೆ. ಕೊಲೆಗೆ ಕಾರಣ ಸ್ಪಷ್ಟವಾಗದೇ ಇದ್ದರೂ, ವೈಯಕ್ತಿಕ ದ್ವೇಷ ಹಿನ್ನಲೆ ಕೊಲೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಘಟನಾ ಸ್ಥಳಕ್ಕೆ ಮಳವಳ್ಳಿ ಗ್ರಾಮಾಂತರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಮಹೇಶ್, ಎಸ್‌ಐ ಶ್ರವಣ್‌ದಾಸ್ ರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ಮಂಡ್ಯ, ಆ.6– ಜಿಲ್ಲೆಯಲ್ಲಿ ಆಟೋರಿಕ್ಷಾ ಪ್ರಯಾಣ ದರ ಪರಿಷ್ಕರಿಸುವಂತೆ ಮತ್ತು ಇತರೆ ಬೇಡಿಕೆ ಪೂರ್ಣಗೊಳಿಸುವಂತೆ ಕರ್ನಾಟಕ ರಾಜೀವ್ ಗಾಂಧಿ ಆಟೋ/ಟ್ಯಾಕ್ಸಿ ಚಾಲಕರ ವೇದಿಕೆಯಿಂದ ಜು.20 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಆ.12ರಂದು ಬೆಳಗ್ಗೆ 10.30ಕ್ಕೆ ಮಂಡ್ಯ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಿಗದಿಪಡಿಸಲಾಗಿದೆ. ಈ ಬಗ್ಗೆ ಆಕ್ಷೇಪಣೆ ಇದ್ದಲ್ಲಿ 3 ದಿನಗಳ ಒಳಗಾಗಿ ವಿವರಗಳೊಂದಿಗೆ ಲಿಖಿತ ರೂಪದಲ್ಲಿ ಹೇಳಿಕೆಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತ

ಜನತೆಗೆ ಮಾಜಿ ಸಚಿವ ಪುಟ್ಟರಾಜು ಅನುಪಸ್ಥಿತಿ ಕಾಡುತ್ತಿದೆ

ಪಾಂಡವಪುರ, ಆ.6– ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಕ್ಷೇತ್ರದ ಜನತೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅನುಪಸ್ಥಿತಿ ಇದೀಗ ಕಾಡುತ್ತಿದೆ ಎಂದು ಜಿಪಂ ಮಾಜಿ ಸದಸ್ಯ ಹೆಚ್.ಮಂಜುನಾಥ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರದ ಶಾಸಕರಾಗಿದ್ದ ವೇಳೆ ಕ್ಷೇತ್ರ ಸಾಕಷ್ಟು ಅಭಿವೃದ್ಧಿಯಾಗಿತ್ತು. ಆದರೆ ಪ್ರಸ್ತುತ ಶಾಸಕರಾಗಿರುವ ದರ್ಶನ್ ಪುಟ್ಟಣ್ಣಯ್ಯ ಅವರು ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವಲ್ಲಿ ವಿಫಲರಾಗಿದ್ದಾರೆ. ಸರ್ಕಾರವೂ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡುತ್ತಿಲ್ಲ ಎಂದು ಕಿಡಿಕಾರಿದರು.

ಕ್ಷೇತ್ರದಲ್ಲಿ ಕಳೆದ ವಿಧಾನಸಭೆ ಚುನಾವಣೆ ವೇಳೆ ಇದ್ದ ಒಲವು ಇದೀಗ ಬದಲಾಗಿದೆ. ಮಾಜಿ ಸಚಿವ ಪುಟ್ಟರಾಜು ಅವರ ಅನುಪಸ್ಥಿತಿ ಕ್ಷೇತ್ರದ ಜನತೆಗೆ ಕಾಡುತ್ತಿದೆ. ಕ್ಷೇತ್ರದಲ್ಲಿ ನಡೆಯುತ್ತಿರುವ ಎಲ್ಲಾ ಸ್ಥಳೀಯ ಸಂಸ್ಥೆ ಹಾಗೂ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿದ್ದಾರೆ. ಈ ಚುನಾವಣೆಗಳ ಫಲಿತಾಂಶ ಮುಂದಿನ ಎಲ್ಲಾ ಚುನಾವಣೆಗಳ ಫಲಿತಾಂಶದ ದಿಕ್ಸೂಚಿಯಾಗಲಿದೆ ಎಂದರು.

ಶಾಸಕರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಆಸಕ್ತಿ ತೋರದ ಪರಿಣಾಮ ನ್ಯಾಮನಹಳ್ಳಿ ಪಿಎಸಿಎಸ್‌ಗೆ ಚುನಾವಣೆಗೆ ನಡೆಸಬೇಕಾಯಿತು. ಸೊಸೈಟಿಗೆ ಚುನಾವಣೆ ಬೇಡ. ಒಗ್ಗಟ್ಟಿನಿಂದ ಮಾತುಕತೆ ಮೂಲಕ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳೋಣವೆಂದು ಚರ್ಚಿಸಿದೇವು. ಆದರೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಕೆಲವು ಹಿಂಬಾಲಕರ ಮಾತು ಕಟ್ಟಿಕೊಂಡು ಅವಿರೋಧ ಆಯ್ಕೆಗೆ ಒಪ್ಪಿಗೆ ನೀಡಲಿಲ್ಲ. ಅದರ ಪರಿಣಾಮ ನ್ಯಾಮನಹಳ್ಳಿ ಸೊಸೈಟಿಗೆ ಚುನಾವಣೆ ನಡೆದು ಬಿಜೆಪಿ–ಜೆಡಿಎಸ್ ಬೆಂಬಲಿತ ನಿರ್ದೇಶಕರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾದರು. ಹೀಗಾಗಿ ಸಹಕಾರ ಸಂಘಗಳ ಚುನಾವಣೆ ವೇಳೆ ಶಾಸಕರು ತಮ್ಮ ಹಿಂಬಾಲಕರ ಮಾತು ಕೇಳುವುದನ್ನು ಬಿಟ್ಟು ತಮ್ಮ ಸ್ವಂತ ಬುದ್ಧಿಯಿಂದ ಆಲೋಚನೆ ಮಾಡಬೇಕು. ಮುಂದಿನ ದಿನಗಳಲ್ಲಿ ಶಾಸಕರು ಸಹಕಾರ ಸಂಘಗಳಲ್ಲಿ ಅವಿರೋಧ ಆಯ್ಕೆಗೆ ಸಹಮತ ನೀಡುವ ಮೂಲಕ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು.

ಗೋಷ್ಠಿಯಲ್ಲಿ ನ್ಯಾಮನಹಳ್ಳಿ ಸೊಸೈಟಿ ನಿರ್ದೇಶಕರಾದ ಎ.ಎನ್.ಮಂಜುನಾಥ್, ಎಸ್‌ಎನ್‌ಟಿ ಸೋಮಶೇಖರ್, ಮಾಜಿ ಅಧ್ಯಕ್ಷ ಜೆ.ಪಿ.ಶಿವಕುಮಾರ್, ಜೆಡಿಎಸ್ ಮುಖಂಡ ಆನಂದ್ ಸೇರಿದಂತೆ ಹಲವರಿದ್ದರು.



ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ಹೆಚ್.ಮಂಜುನಾಥ್ ಮಾತನಾಡಿದರು.

ವಿದ್ಯಾರ್ಥಿಗಳು ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಿ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮಳವಳ್ಳಿ, ಆ.6– ವಿದ್ಯಾರ್ಥಿಗಳು ತಮಗೆ ಸಿಕ್ಕಿರುವ ಅವಕಾಶ ಸದುಪಯೋಗಪಡಿಸಿಕೊಂಡು ಉನ್ನತ ಮಟ್ಟಕ್ಕೆ ಏರಬೇಕು ಎಂದು ಸಹಾಯಕ ಪ್ರಾಧ್ಯಾಪಕ ಡಾ.ಭೀಮ್‌ರಾಜ್ ಈರೇಗೌಡ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಶಾಂತಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕ್ರೀಡೆ ಮತ್ತು ಸಾಂಸ್ಕೃತಿಕ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಮಿಳುನಾಡಿನ ಒಬ್ಬ ಬಡ ಕುಟುಂಬ ಬದಲ್ಲಿ ಹುಟ್ಟಿದ ವಿದ್ಯಾರ್ಥಿನಿ ತನ್ನ ಪರಿಶ್ರಮದಿಂದ ಇಂದು ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಅದರಂತೆ ವಿದ್ಯಾರ್ಥಿಗಳು ದೂರದೃಷ್ಟಿ ಮತ್ತು ದೀರ್ಘಕಾಲೀನ ಗುರಿ ಹೊಂದಿರಬೇಕು. ಶೈಕ್ಷಣಿಕ ಸಾಧನೆ ಜೊತೆಗೆ ಶಿಸ್ತು, ಮೌಲ್ಯಗಳನ್ನು ರೂಢಿ ಸಿಕೊಳ್ಳಬೇಕು ಎಂದರು.

ಇದೇ ವೇಳೆ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಾಂತಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ನಾಗಮಣಿ ನಾಗೇಗೌಡ, ಕಾರ್ಯದರ್ಶಿಗಳಾದ ತಿಮ್ಮೇಗೌಡ, ಪುಟ್ಟರಾಜು, ಪ್ರಾಂಶುಪಾಲ ನಾಗರಾಜು, ಅನಿತಾ, ಉಪನ್ಯಾಸಕ ರಂಗಸ್ವಾಮಿ, ಪುಟ್ಟಮ್ಮ, ರತ್ನಮ್ಮ ಸೇರಿದಂತೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಇದ್ದರು.

ಒಂದನೇ ಪುಟದಿಂದ

ಸಚಿವ ಜಾರ್ಜ್‌ಗೆ ಬಿಗ್ ರಿಲೀಫ್

ಲೋಕಾಯುಕ್ತ ಎಸ್ಪಿ ಹಾಗೂ ದೂರುದಾರರಾದ ಬಿಜೆಪಿ ನಾಯಕರಾದ ಸಿಎನ್ ಅಶ್ವಥ್ ನಾರಾಯಣ್, ಎಸ್ ಆರ್ ವಿಶ್ವನಾಥ್, ಧೀರಜ್ ಮುನಿರಾಜು ಅವರಿಗೆ ನೋಟಿಸ್ ನೀಡಿದೆ. ಲೋಕಾಯುಕ್ತ ಪೊಲೀಸರಿಂದ ವರದಿ ನೀಡುವಂತೆ ವಿಚಾರಣಾಧೀನ ನ್ಯಾಯಾಲಯ ಮಾಡಿರುವ ಆದೇಶಕ್ಕೆ ತಡೆ ನೀಡಿ ಹೈಕೋರ್ಟ್ 2 ವಾರ ವಿಚಾರಣೆ ಮುಂದೂಡಿದೆ. ಈ ಮೂಲಕ ಸಚಿವ ಜಾರ್ಜ್ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಂತಾಗಿದೆ. ಅರ್ಜಿ ವಿಚಾರಣೆ ವೇಳೆ ಒಂದು ರಾಜಕೀಯ ಪಕ್ಷ ಮತ್ತೊಂದು ಪಕ್ಷದ ವಿರುದ್ಧ ಕೇಸ್ ಹಾಕುವ ಸಂಪ್ರದಾಯ ಇದು. ತಮಿಳುನಾಡಿನಲ್ಲಿದ್ದ ಸಂಪ್ರದಾಯ ಈಗ ಇಲ್ಲೂ ಶುರುವಾಗಿದೆ ಎಂದು ವಿಚಾರಣೆ ವೇಳೆ ನ್ಯಾ. ಎಂಐ ಅರುಣ್ ಅವರ ಏಕಸದಸ್ಯ ಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ. ನಾವು ಪ್ರಕರಣದ ಮೆರಿಟ್ ಮೇಲೆ ವಾದಿಸುತ್ತಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ ಎಂದು ಜಾರ್ಜ್ ಪರ ಹಿರಿಯ ವಕೀಲ ಸಿವಿ ನಾಗೇಶ್ ಪೀಠಕ್ಕೆ ತಿಳಿಸಿದರು.

ಸುಪ್ರೀಂನಲ್ಲಿ ಸರ್ಕಾರದ ಪ್ರಬಲ ವಾದ

ಬೆನ್ನು ನೋವಿನ ಕಾರಣ ನೀಡಿ ನ್ಯಾಯಾಲಯಕ್ಕೆ ಹಾಜರಾಗುವುದರಿಂದ ವಿನಾಯಿತಿ ಪಡೆದಿದ್ದ ದರ್ಶನ್, ಅದರ ಮರು ದಿನವೇ ಚಲನಚಿತ್ರವೊಂದರ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಇದು ಅವರ ನಡವಳಿಕೆಯ ಬಗ್ಗೆ ಸಂಶಯ ಮೂಡಿಸುತ್ತದೆ ಎಂದು ಸರ್ಕಾರ ಉಲ್ಲೇಖಿಸಿದೆ. ಒಟ್ಟಿನಲ್ಲಿ ಬಲವಾದ ಸಾಕ್ಷ್ಯಾಧಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರವು ದರ್ಶನ್ ಮತ್ತು ಗ್ಯಾಂಗ್‌ನ ಜಾಮೀನು ರದ್ದತಿಗೆ ಪ್ರಬಲವಾಗಿ ಪಟ್ಟುಹಿಡಿದಿದೆ. ಸರ್ಕಾರದ ಈ ಹೆಚ್ಚುವರಿ ಅಫಿಡವಿಟ್ ಪ್ರಕರಣಕ್ಕೆ ಮಹತ್ವದ ತಿರುವು ನೀಡಿದ್ದು, ಸುಪ್ರೀಂಕೋರ್ಟ್‌ನ ತೀರ್ಪು ಏನಾಗಲಿದೆ ಎಂಬುದು ತೀವ್ರ ಕುತೂಹಲ ಕೆರಳಿಸಿದೆ.

ದರ್ಶನ್ ಪಾತ್ರದ ಬಗ್ಗೆ ಯಾವುದೆ ಸಾಕ್ಷ್ಯವಿಲ್ಲ: ನಟ ದರ್ಶನ್ ಜಾಮೀನು ರದ್ದುಪಡಿಸಬಾರದೆಂದು ಆತನ ಪರ ವಕೀಲರು ಲಿಖಿತ ವಾದ ಮಂಡಿಸಿದ್ದು, ದರ್ಶನ್ ಯಾವುದೇ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿಲ್ಲ. ಅಪಹರಣದಲ್ಲಿ ದರ್ಶನ್ ಪಾತ್ರದ ಬಗ್ಗೆ ಯಾವುದೆ ಸಾಕ್ಷ್ಯವಿಲ್ಲ. ಅಪಹರಣಕ್ಕೆ ದರ್ಶನ್ ಸೂಚನೆ ನೀಡಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ದರ್ಶನ್ ಮತ್ತು ಎ–3 ನಡುವೆ ಕರೆಗಳು ಅಥವಾ ವಾಟ್ಸಾಪ್ ಸಂದೇಶಗಳ ವಿನಿಮಯ ಇಲ್ಲ. 3 ಸೆಕೆಂಡ್ ವೀಡಿಯೊ ಇದೆ ಎನ್ನುತ್ತಿರುವ ರಾಜ್ಯ ಸರ್ಕಾರದ ವಾದದಲ್ಲಿ ಹುರುಳಿಲ್ಲ. ಮೂರು ಸೆಕೆಂಡ್‌ಗಳ ವಿಡಿಯೋ ಅಸ್ತಿತ್ವದಲ್ಲೇ ಇಲ್ಲ. ಯಾವುದೇ 3 ಸೆಕೆಂಡ್ ವೀಡಿಯೋ ಚಾರ್ಜ್‌ಶೀಟ್‌ನಲ್ಲಿ ಅಥವಾ ಹೈಕೋರ್ಟ್‌ನಲ್ಲಿ ಸಲ್ಲಿಸಿಲ್ಲ. ಮರಣದ ಸಮಯವನ್ನು ಪ್ರಾಸಿಕ್ಯೂಷನ್ ಕಥೆಗೆ ಅನುಗುಣವಾಗಿ ನಿರ್ಧರಿಸಲಾಗಿದೆ ಎಂದು ಆರೋಪ ಮಾಡಿದ್ದಾರೆ.

ನನ್ನ ಮಗಳನ್ನು ನೋಡಿಕೊಳ್ಳಬೇಕಿದೆ: ನಾನು ಒಬ್ಬಂಟಿ ಪೋಷಕಿಯಾಗಿದ್ದು, ನನಗೆ 10ನೇ ತರಗತಿಯಲ್ಲಿ ಓದುತ್ತಿರುವ ಮಗಳಿದ್ದು, ಅವಳನ್ನು ನೋಡಿಕೊಳ್ಳಬೇಕಿದೆ. ಅಲ್ಲದೇ ವಯಸ್ಸಾದ ಪೋಷಕರಿಗೆ ನಾನೇ ಆಧಾರವಾಗಿದ್ದೇನೆ. ನನಗೆ ಯಾವುದೇ ಕ್ರಿಮಿನಲ್ ಹಿನ್ನಲೆ ಇಲ್ಲ. ಅಲ್ಲದೇ ನನ್ನ ಬಂಧನಕ್ಕೆ ಕಾರಣಗಳನ್ನು ಲಿಖಿತವಾಗಿ ನೀಡಲಾಗಿಲ್ಲ. ಹೀಗಾಗಿ ನಾನು ಮಹಿಳೆಯಾಗಿರು ವುದರಿಂದ ಜಾಮೀನು ರದ್ದು ಮಾಡುವುದು ಕಠಿಣ ಕ್ರಮವಾಗ ಲಿದೆ ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಲಿಖಿತ ವಾದದಲ್ಲಿ ಪವಿತ್ರಾ ಗೌಡ ಪರ ವಕೀಲರು ಮನವಿ ಮಾಡಿದ್ದಾರೆ.

ಪವಿತ್ರಾಗೌಡ ಮೃತ ರೇಣುಕಾಸ್ವಾಮಿಯಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದರು. ಪವಿತ್ರಾಗೌಡ ಮತ್ತು ಇತರ ಆರೋಪಿಗಳ ನಡುವೆ ಸಂವಹನ ನಡೆದಿಲ್ಲ. ಈ ಕೇಸ್‌ನಲ್ಲಿ ಪ್ರಾಸಿಕ್ಯೂಷನ್ ಅವರು ಕ್ರಿಮಿನಲ್ ಸಂಚನ್ನು ಸಾಬೀತುಪಡಿಸಲು ವಿಫಲವಾಗಿದ್ದಾರೆ.

ಧರ್ಮಸ್ಥಳ ಉದ್ವಿಗ್ನ

ಕಾಡ್ಗಿಚ್ಚಿನಂತೆ ಹರಡಿದೆ. ಪೊಲೀಸರು ಲಾಠಿ ಚಾರ್ಜ್ ಮಾಡಿ ಜನರನ್ನು ಚದುರಿಸಿದ ನಂತರವೂ ಸುತ್ತಲಿನ ಗ್ರಾಮಸ್ಥರು ಜಮಾವಣೆ ಆದರು. ಜನರ ನಿಯಂತ್ರಣ ಮಾಡಲು ಪೊಲೀಸರು ಹರಸಹಸಪಟ್ಟರು. ಇನ್ನು ಹೆಚ್ಚುವರಿ ಪೊಲೀಸರನ್ನು ನಿಯೋಜನೆ ಮಾಡಲಾಗುತ್ತಿದೆ. ಇದೀಗ ಗಾಯಾಳುಗಳನ್ನು ಮಂಗಳೂರು ಹಾಗೂ ಉಜಿರೆ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಧರ್ಮಸ್ಥಳ ಭಾಗದಿಂದ ಬಂದ ಜನರು, ಪಾಂಗಳದ ಸೌಜನ್ಯಾ ಮನೆಗೆ ಕಲ್ಲು ತೂರಾಟ ಕೂಡ ನಡೆದಿದೆ ಎನ್ನಲಾಗುತ್ತಿದೆ. ಸೌಜನ್ಯಾ ಚಿಕ್ಕಪ್ಪನಿಗೆ ಸೇರಿದ ವಾಹನದ ಮೇಲೆ ಕಲ್ಲೆಸೆದು ಗಾಜು ಒಡೆದಿದ್ದಾರೆ. ಇನ್ನು ಯೂಟ್ಯೂಬರ್‌ಗಳಿಗೆ ಸೇರಿದ ಓಮಿನಿ ವಾಹನವನ್ನೂ ಜಖಂ ಮಾಡಿದ್ದಾರೆ.

ಆ.9ರಂದು ತ್ರಿಮತಸ್ಥ ಉಪಕರ್ಮ

ಮೈಸೂರು, ಆ.6– ಮೈಸೂರಿನ ಚಾಮುಂಡಿಪುರಂನಲ್ಲಿರುವ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದ ವತಿಯಿಂದ ಆ.9 ರಂದು ಬೆಳಗ್ಗೆ 7ಕ್ಕೆ 'ತ್ರಿಮತಸ್ಥ ಉಪಕರ್ಮವನ್ನು' ಆಯೋಜಿಸಲಾಗಿದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಮೊ:9986160674 ಅನ್ನು ಸಂಪರ್ಕಿಸಬಹುದು.

ಸಾಮಾಜಿಕ ಕಳಕಳಿಯುಳ್ಳ ನಾಯಕರು ವಿ.ಶ್ರೀನಿವಾಸ ಪ್ರಸಾದ್

'ವಿಚಾರ ಮಂಥನ' ಕಾರ್ಯಕ್ರಮವನ್ನು ಬುದ್ಧ, ಬಸವ, ಅಂಬೇಡ್ಕರ್ ಹಾಗೂ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ರಾಜಕೀಯ ಜೀವನ ಪ್ರಾರಂಭವಾದಾಗಿನಿಂದಲೂ ವಿ.ಶ್ರೀನಿವಾಸ ಪ್ರಸಾದ್ ಅವರೊಂದಿಗೆ ಒಡನಾಟವಿದ್ದು, ಹಲವಾರು ಬಾರಿ ಚರ್ಚಿಸಿದ್ದೇವೆ. ಅವರೊಬ್ಬರು ಧೀಮಂತ ರಾಜಕಾರಣಿ. ವಿಚಾರ ವಂತರು, ಸಾಮಾಜಿಕ ಕಳಕಳಿಯುಳ್ಳ ಮಹಾನ್ ನಾಯಕರು. ಯಾವಾಗಲೂ ಸಮಾಜದ ಏಳ್ಗೆ, ದೀನ–ದಲಿತರು, ಹಿಂದುಳಿದವರ ಬಗ್ಗೆ ಚಿಂತಿಸುತ್ತಿದ್ದರು. ಅದರಲ್ಲೂ ಅಭಿವೃದ್ಧಿ ಬಗ್ಗೆ ಹೆಚ್ಚಿನ ಕಾಳಜಿ ಅವರಲ್ಲಿತ್ತು. ಭೇಟಿಯಾದಾಗಲೆಲ್ಲಾ ಪ್ರೀತಿ–ವಿಶ್ವಾಸದಿಂದ ಮಾತನಾಡಿಸುತ್ತಿದ್ದ ಶ್ರೀನಿವಾಸ ಪ್ರಸಾದ್ ಅವರ ವ್ಯಕ್ತಿತ್ವ, ನಡೆ–ನುಡಿಯೇ ಶ್ಲಾಘನೀಯ. ಬಹಳ ನಿಷ್ಠುರವಾಗಿ ಮಾತನಾಡುವ ಸ್ವಭಾವದವರಾದ ಅವರಲ್ಲಿ ಇದ್ದದ್ದನ್ನು ಇದ್ದಂಗೆ ಹೇಳುವ ಗುಣವಿತ್ತು. ನನ್ನ 45 ವರ್ಷದ ರಾಜಕೀಯ ಜೀವನದಲ್ಲಿ ಬಹಳಷ್ಟು ಮಂದಿ ರಾಜಕಾರಣಿಗಳನ್ನು ನೋಡಿದ್ದೇನೆ. ಬಹುತೇಕ ರಾಜಕಾರಣಿಗಳು ಬಣ್ಣದ ಮಾತುಗಳನ್ನೇ ಆಡುತ್ತಾರೆ. ಆದರೆ, ನಿಷ್ಠುರವಾಗಿ ಇದ್ದದ್ದನ್ನು ಇದ್ದಂಗೆ ಹೇಳುವವರು ಬಹಳ ವಿರಳ. ಅಂತಹವರಲ್ಲಿ ವಿ.ಶ್ರೀನಿವಾಸ ಪ್ರಸಾದ್ ಒಬ್ಬರಾಗಿದ್ದಾರೆ ಎಂದು ಹೇಳಿದರು.

ನನ್ನ ಪ್ರಿಯ ಮಿತ್ರ ವಿ.ಶ್ರೀನಿವಾಸ್ ಪ್ರಸಾದ್: 'ವಿ.ಶ್ರೀನಿವಾಸ ಪ್ರಸಾದ್: ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾಳಜಿ' ಕುರಿತು ವಿಚಾರ ಮಂಡಿಸಿದ ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ, ನನ್ನ ಪ್ರಿಯ ಮಿತ್ರ ವಿ.ಶ್ರೀನಿವಾಸ ಪ್ರಸಾದ್‌ರನ್ನು ಮೊದಲು ಭೇಟಿ ಮಾಡಿದ್ದು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ. ತುರ್ತು ಪರಿಸ್ಥಿತಿ ತೆರವಾಗಿ, ಚುನಾವಣೆ ಘೋಷಣೆ ಮಾಡಿದಾಗ ಅಂದಿನ ಯುವ ಜನತಾ ಅಧ್ಯಕ್ಷರನ್ನಾಗಿ ಪಿ.ಜಿ.ಆರ್.ಸಿಂಧ್ಯಾ ಹಾಗೂ ಉಪಾಧ್ಯಕ್ಷರನ್ನಾಗಿ ವಿ.ಶ್ರೀನಿವಾಸ್ ಪ್ರಸಾದ್‌ರನ್ನು ನೇಮಕ ಮಾಡಲಾಗಿತ್ತು. ಅಂದು ಯಾರ(ರಾಜಕಾರಣಿಗಳನ್ನು)ನ್ನು ಒಪ್ಪದ ಲಂಕೇಶ್ ಪತ್ರಿಕೆಯ ಲಂಕೇಶ್ 'ನೋಡ್ರಿ ಎಂತಹ ಒಳ್ಳೆ ಹುಡುಗನನ್ನು ಯುವ ಜನತಾಗೆ ಹಾಕಿದ್ದಾರೆ. ಯುವ ಜನತೆಗೆ ಇವರಿಗಿಂತ(ಶ್ರೀನಿವಾಸ್ ಪ್ರಸಾದ್) ಒಳ್ಳೆಯವರು ಯಾರ್ ಸಿಕ್ತಾರೆ' ಎಂದಿದ್ದರು. 50 ವರ್ಷದ ಹಿಂದೆಯೇ ಇಂತಹ ಸರ್ಟಿಫಿಕೇಟ್ ಪಡೆದ ಶ್ರೀನಿವಾಸ್ ಪ್ರಸಾದ್‌ರ ನಡೆ–ನುಡಿ, 50 ವರ್ಷದ ನಂತರವೂ ಸುಳ್ಳಾಗಲಿಲ್ಲ ಎಂದು ನೆನೆದರು.

ನನಗಿಂತ ಅವರು ಯೋಗ್ಯರು!: 1978 ಲೋಕಸಭಾ ಚುನಾವಣೆ ವೇಳೆ ಜನತಾ ಪಕ್ಷದಿಂದ ಬಿ.ರಾಚಯ್ಯ ಅವರ ವಿರುದ್ಧ ಚಾಮರಾಜನಗರ ಕ್ಷೇತ್ರದಿಂದ ಯಾರನ್ನು ನಿಲ್ಲಿಸಬೇಕು ಎಂದು ಹೆಚ್.ಡಿ.ದೇವೇಗೌಡರು, ದೇವನೂರು ಮಹದೇವ ಹಾಗೂ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಸಂಪರ್ಕಿಸಿದಾಗ, ಶ್ರೀನಿವಾಸ ಪ್ರಸಾದ್ ನನಗಿಂತ ಯೋಗ್ಯ ದೇವನೂರು ಮಹದೇವ, ಅವರಿಗೆ ಟಿಕೆಟ್ ಕೊಡಿ ಎಂದರೆ, ದೇವನೂರು ಮಹದೇವ, ನನಗಿಂತ ಯೋಗ್ಯ ವಿ.ಶ್ರೀನಿವಾಸ್ ಪ್ರಸಾದ್. ಅವರಿಗೆ ಟಿಕೆಟ್ ಕೊಡಿ ಎಂದಿದ್ದರು. ಟಿಕೆಟ್ ಕೊಟ್ಟರೆ ಸಾಕು ಎಂದು ಗುದ್ದಾಡುವವರ ನಡುವೆ ನನಗಿಂತ ನೀನು ಯೋಗ್ಯ ಎಂದೇಳುವ ಗುಣವುಳ್ಳ ಶ್ರೀನಿವಾಸ್ ಪ್ರಸಾದ್‌ರ ಮೇಲೆ ನನ್ನಲ್ಲಿ ಮೂಡಿದ ಗೌರವ, ಇಂದಿಗೂ ಹಾಗೆಯೇ ಇದೆ ಎಂದು ಸ್ಮರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಸಂಚಾಲಕರಾದ ಶ್ರೀಮತಿ ಪ್ರತಿಮಾ ಪ್ರಸಾದ್, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಅಧ್ಯಕ್ಷ ಪ್ರೊ.ಸಿ.ಬಸವರಾಜು, ಸಂಚಾಲಕ ಪ್ರೊ.ಎಂ.ಆರ್.ಗಂಗಾಧರ್, ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ಪಿ.ನಂದಕುಮಾರ್, ಸಮಾನತೆ ಪ್ರಕಾಶನದ ಪ್ರಕಾಶಕ ಭರತ್ ರಾಮಸ್ವಾಮಿ, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ.ನೀಲಗಿರಿ ಎಂ.ತಳವಾರ, ಕಾರ್ಯದರ್ಶಿ ಡಾ.ಮುಳ್ಳೂರು ನಂಜುಂಡಸ್ವಾಮಿ, ಅಭಿಮಾನಿ ಬಳಗದ ಪ್ರಧಾನ ಕಾರ್ಯದರ್ಶಿ ಡಿ.ವೆಂಕಟರಾಜು, ಟ್ರಸ್ಟಿಗಳಾದ ಕುಂಬ್ರಳ್ಳಿ ಸುಬ್ಬಣ್ಣ, ಶಿವಕುಮಾರ್, ಶಾಂತ ರಾಮಶೆಟ್ಟಿ ಮತ್ತಿತರರಿದ್ದರು.

ಪಕ್ಷಾಂತರಿಯೇ ಹೊರತು ತತ್ವಾಂತರಿಯಲ್ಲ

ಮೈಸೂರು, ಆ.6(ಎಂಕೆ)– ವಿ.ಶ್ರೀನಿವಾಸ್ ಪ್ರಸಾದ್ ಅವರು ಪಕ್ಷಾಂತರಿಯೇ ಹೊರತು ತತ್ವಾಂತರಿಯಲ್ಲ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಆದರ್ಶ ಹಾಗೂ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟುಕೊಂಡು ಹೋರಾಟ ನಡೆಸಿದವರು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ತಿಳಿಸಿದರು.

'ವಿ.ಶ್ರೀನಿವಾಸ ಪ್ರಸಾದ್: ರಾಜಕೀಯ ಬದ್ಧತೆ' ಕುರಿತು ವಿಚಾರ ಮಂಡಿಸಿದ ಅವರು, ಅಂಬೇಡ್ಕರ್ ಅವರ ವಿಚಾರಗಳನ್ನು ತಮ್ಮ ಜೀವನದಲ್ಲಿ ಅವಳವಡಿಸಿಕೊಂಡು, ತಮ್ಮ ಆಧ್ಯಾತ್ಮಿಕ ನಾಯಕ ಎಂದು ಪರಿಗಣಿಸಿದ್ದರು. ತಮಗೆ ಸರಿ ಕಾಣದ, ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗಲೆಲ್ಲಾ ತಿರುಗಿ ಬೀಳುತ್ತಿದ್ದರು ಎಂದು ಸ್ಮರಿಸಿದರು. ತಮ್ಮ 5 ದಶಕಗಳ ರಾಜಕಾರಣದಲ್ಲಿ ದಲಿತರ ಗಟ್ಟಿ ಧ್ವನಿಯಾಗಿದ್ದರು. ಶೋಷಿತರ ಪರ ಹೋರಾಟ ಮಾಡಿದ್ದಾರೆ. ಹಠವಾದಿ ಆಗಿದ್ದ ಅವರು, ಮೈಸೂರು ಭಾಗದಲ್ಲಿ 14 ಚುನಾವಣೆಗಳನ್ನು ಎದುರಿಸಿ, 8 ರಲ್ಲಿ ಗೆದ್ದಿದ್ದರು. ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಹಾಗೂ ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಪರಿಕಲ್ಪನೆ ಸರ್ವವ್ಯಾಪಿಯಾಗಬೇಕು ಎಂದು ಕನಸು ಕಂಡಿದ್ದ ಅವರು, ಎಲ್ಲಾ ವರ್ಗದ ಜನರ ಪ್ರೀತಿ ಗಳಿಸಿದ್ದರು ಎಂದು ತಿಳಿಸಿದರು.

ಅವರ ಮಾತುಗಳು ನನಗೆ ಗೆಲುವಿನ ಮತಗಳಾದವು...!

"ಸಾಮಾನ್ಯ ಕಾರ್ಯಕರ್ತನಾಗಿದ್ದ ನನಗೆ ಟಿಕೆಟ್ ಕೊಟ್ಟ ಬಳಿಕ ಪ್ರತಿಕಾಗೋಷ್ಠಿ ನಡೆಸಿದ್ದ ಪ್ರಸಾದ್ ಸಾಹೇಬರು, ಶ್ರೀವತ್ಸ ಮರಳುಗಾಡಿನಲ್ಲಿ ಸಿಗುವ ಓಯಸಿಸ್‌ನಂತೆ ಎಂದು ಹೇಳಿದ್ದರು. ಹಿರಿಯ ಸಜ್ಜನ ರಾಜಕಾರಣಿಯ ಆ ಮಾತುಗಳು ನನಗೆ ಮತಗಳಾಗಿ, ಗೆದ್ದು ನಿಮ್ಮ ಮುಂದೆ ಶಾಸಕನಾಗಿ ನಿಲ್ಲಲು ಸಾಧ್ಯವಾಗಿದೆ. ಅವರ ಹೆಸರಿನಲ್ಲಿ ನಡೆಸಲು ಇಚ್ಛಿಸಿರುವ ಶೈಕ್ಷಣಿಕ ಕಾರ್ಯಕ್ಕೆ ಶಾಸಕರ ನಿಧಿಯಿಂದ 10 ಲಕ್ಷ ರೂ. ಅನುದಾನ ನೀಡುತ್ತೇನೆ.

–ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್. ವಿಧಾನಸಭಾ ಕ್ಷೇತ್ರ

ಕೃತಜ್ಞತೆ ಸಲ್ಲಿಸಿದ್ದೇನೆ...!

"ದಲಿತರ ಗಟ್ಟಿ ಧ್ವನಿಯಾಗಿದ್ದ ವಿ.ಶ್ರೀನಿವಾಸ ಪ್ರಸಾದ್ ಸಾಹೇಬರು, ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಾನು ವಕೀಲ ವಿದ್ಯಾಭ್ಯಾಸದ ಪ್ರವೇಶ ಪರೀಕ್ಷೆಗೆ ಕೋಚಿಂಗ್ ಕ್ಲಾಸ್ ತೆಗೆದುಕೊಳ್ಳಬೇಕಿದ್ದ ವೇಳೆ ನಮ್ಮ ತಂದೆ(ಆರ್.ಧ್ರುವನಾರಾಯಣ್) ಮನವಿ ಮಾಡಿದ್ದರ ಮೇರೆಗೆ ಅವರಿಗೆ ನೀಡಿದ್ದ ಕೊಠಡಿಯಲ್ಲೇ ಉಳಿದುಕೊಂಡು ಅಧ್ಯಯನ ನಡೆಸಲು ಅನುಕೂಲ ಮಾಡಿಕೊಟ್ಟಿದ್ದರು. ನಂಜನಗೂಡು ಕ್ಷೇತ್ರಕ್ಕೆ ಹಾಗೂ ನನ್ನ ವೈಯಕ್ತಿಕ ಏಳಿಗೆಗೆ ಬೆಂಬಲ ನೀಡಿದ ಅವರಿಗೆ ಕೃತಜ್ಞತಾ ರೂಪದಲ್ಲಿ ನಂಜನಗೂಡು ಮೇಲ್ಸೆತುವೆಗೆ ಅವರ ಹೆಸರನ್ನು ನಾಮಕರಣ ಮಾಡಿದ್ದೇವೆಯೇ ಹೊರತು ಇದರಲ್ಲಿ ಯಾವುದೇ ರಾಜ ಕಾರಣವಿಲ್ಲ.

–ದರ್ಶನ್ ಧ್ರುವನಾರಾಯಣ್, ಶಾಸಕ, ನಂಜನಗೂಡು ಕ್ಷೇತ್ರ

ಮುಷ್ಕರದಲ್ಲಿ ಪಾಲ್ಗೊಂಡ ಸಾರಿಗೆ ನೌಕರರಿಗೆ ನೋಟಿಸ್

ಬೆಂಗಳೂರು, ಆ.6– ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಮುಷ್ಕರದಲ್ಲಿ ಪಾಲ್ಗೊಂಡ ವಿವಿಧ ನಿಗಮಗಳ ನೌಕರರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಮಂಗಳವಾರ ಮುಷ್ಕರ ನಡೆಸಲು ಕರೆ ನೀಡಲಾಗಿತ್ತು. ಮುಷ್ಕರ ನಡೆಸದಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಈ ನಡುವೆ ಚಾಲಕರು, ನಿರ್ವಾಹಕರು, ಡಿಪೋ ಸಿಬ್ಬಂದಿ ಸೇರಿ ಹಲವರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಬೆಳಗ್ಗೆ ಕರ್ತವ್ಯಕ್ಕೆ ಹಾಜರಾಗದೇ ಮಧ್ಯಾಹ್ನದ ಬಳಿಕ ಹಾಜರಾದವರಿಗೆ ತಡವಾಗಲು ಕಾರಣವೇನು ಎಂದು ವಿವರಣೆ ನೀಡುವಂತೆ ನೋಟಿಸ್ ಕಳುಹಿಸಲಾಗಿದೆ. ಮಧ್ಯಾಹ್ನದ ಬಳಿಕವೂ ಬಾರದವರಿಗೆ ನಿಮ್ಮ ಮೇಲೆ ಯಾಕೆ ಶಿಸ್ತು ಕ್ರಮ ಕೈಗೊಳ್ಳಬಾರದು ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ.

ಸಾರಿಗೆಯು 'ಕರ್ನಾಟಕ ಅಗತ್ಯ ಸೇವಾ ನಿರ್ವಹಣೆ' ಆಗಿರುವುದರಿಂದ ಮುಷ್ಕರದಲ್ಲಿ ಪಾಲ್ಗೊಳ್ಳುವಂತಿಲ್ಲ. ಆದರೂ, ರಜೆ ಹಾಕದೇ ಅನಧಿಕೃತವಾಗಿ ಗೈರಾಗುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡಿದ್ದೀರಿ. ಇದರಿಂದಾಗಿ ದೈನಂದಿನ ಕಾರ್ಯ ನಿರ್ವಹಣೆಗೆ ಅಡಚಣೆಯಾಗಿದೆ. ಕಾನೂನು ಬಾಹಿರವಾಗಿ ಮುಷ್ಕರದಲ್ಲಿ ಭಾಗವಹಿಸುವ ಮೂಲಕ ಸಂಸ್ಥೆಯ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸಿದ್ದೀರಿ. ಸಂಸ್ಥೆಗೆ ಕೆಟ್ಟ ಹೆಸರು ಬರುವಂತೆ ಮಾಡಿದ್ದೀರಿ. ನಿಗಮದ ನೌಕರರ ನಡತೆ ಮತ್ತು ಶಿಸ್ತು ನಿಯಮಾವಳಿಯನ್ನು ಉಲ್ಲಂಘಿಸಿದ್ದೀರಿ ಎಂದು ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

ಅನುಭವಿ ವೃತ್ತಿಪರರಿಗೆ ಕೇಂದ್ರ ಸರ್ಕಾರಿ ಸೇವೆಗೆ ಅವಕಾಶ

ಯುಪಿಎಸ್‌ಸಿ ಹೊಸ ನೇಮಕಾತಿ ಅಧಿಸೂಚನೆ

ಬೆಂಗಳೂರು: ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಯುಪಿಎಸ್‌ಸಿ) ದೇಶದ ಮಧ್ಯಮ ಹಂತದ ಅನುಭವಿ ವೃತ್ತಿಪರರಿಗೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪ್ರಮುಖ ಹುದ್ದೆಗಳನ್ನು ತುಂಬಲು ನೇಮಕಾತಿ ನಡೆಸುತ್ತಿದೆ. ಸಾಮಾನ್ಯವಾಗಿ, ಯುಪಿಎಸ್‌ಸಿ ಪ್ರವೇಶ ಮಟ್ಟದ ಪರೀಕ್ಷೆಗಳ ಬಗ್ಗೆ ಹೆಚ್ಚಿನ ಪ್ರಚಾರವಿದ್ದರೂ, ಅನುಭವಿ ವೃತ್ತಿಪರರಿಗೆ ಇರುವ ಈ ಅವಕಾಶಗಳ ಬಗ್ಗೆ ಸಾಕಷ್ಟು ಜನರಿಗೆ ಮಾಹಿತಿ ಇರುವುದಿಲ್ಲ. ಈ ಕೊರತೆಯನ್ನು ನಿವಾರಿಸಲು ಯುಪಿಎಸ್‌ಸಿ ಹೊಸ ಮಾದರಿಯನ್ನು ಪರಿಚಯಿಸಿದೆ.

ಯುಪಿಎಸ್‌ಸಿ ತನ್ನ ನೇಮಕಾತಿ ಕುರಿತ ಅಧಿಸೂಚನೆಗಳನ್ನು ನೇರವಾಗಿ ವೃತ್ತಿಪರ ಸಂಸ್ಥೆಗಳು, ಉದ್ಯಮ ಒಕ್ಕೂಟಗಳು ಮತ್ತು ದೊಡ್ಡ ಕಂಪನಿಗಳಿಗೆ ಕಳುಹಿಸಲು ಮುಂದಾಗಿದೆ. ಈ ಮೂಲಕ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಗೆ ಮಾಹಿತಿ ತಲುಪಿಸುವುದು ಇದರ ಹಿಂದಿನ ಉದ್ದೇಶ.

ಪ್ರಮುಖ ಇಲಾಖೆಗಳಲ್ಲಿ ಹುದ್ದೆಗಳು: ಯುಪಿಎಸ್‌ಸಿ 2025–26ರ ಅವಧಿಯಲ್ಲಿ ವಿವಿಧ ಸಚಿವಾಲಯಗಳು ಮತ್ತು ಸಂಸ್ಥೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಿದೆ.

ವೈದ್ಯಕೀಯ ವಿಭಾಗ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರೈಲ್ವೇಸ್, ದೆಹಲಿ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯಗಳಂತಹ ಇಲಾಖೆಗಳಲ್ಲಿ ಒಟ್ಟು 464 ಹುದ್ದೆಗಳು ಲಭ್ಯವಿವೆ. ಈ ಹುದ್ದೆಗಳಿಗೆ 1ರಿಂದ 5 ವರ್ಷಗಳ ವೃತ್ತಿ ಅನುಭವ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ವೈಜ್ಞಾನಿಕ ಮತ್ತು ತಾಂತ್ರಿಕ ವಿಭಾಗ: ರಕ್ಷಣೆ, ಗೃಹ ವ್ಯವಹಾರ, ಪರಿಸರ ಮತ್ತು ಅರಣ್ಯ ಸಚಿವಾಲಯ ಸೇರಿದಂತೆ ಹಲವು ಇಲಾಖೆಗಳಲ್ಲಿ ಒಟ್ಟು 496 ಹುದ್ದೆಗಳು ಇವೆ. ಇದಕ್ಕೆ 1ರಿಂದ 10 ವರ್ಷಗಳ ಅನುಭವವಿರುವವರು ಅರ್ಹರು.

ನಿರ್ವಹಣೆ, ಹಣಕಾಸು ಮತ್ತು ಸಂಶೋಧನಾ ವಿಭಾಗ: ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಇಲಾಖೆಗಳಿಗೆ ಸಂಬಂಧಿಸಿದಂತೆ 82 ಹುದ್ದೆಗಳು ಲಭ್ಯ. 1ರಿಂದ 3 ವರ್ಷ ಅನುಭವದ ಅಗತ್ಯವಿದೆ.

ಬೋಧನಾ ವೃತ್ತಿ: ರಕ್ಷಣೆ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯಗಳಲ್ಲಿ ಬೋಧನಾ ಕ್ಷೇತ್ರಕ್ಕೆ ಸಂಬಂಧಿಸಿದ 20 ಹುದ್ದೆಗಳಿಗೆ 1ರಿಂದ 12 ವರ್ಷ ಅನುಭವ ಹೊಂದಿವವರು ಅರ್ಹರು.

ಕಾನೂನು ವಿಭಾಗ: ಕಾನೂನು, ನ್ಯಾಯ ಮತ್ತು ವಿದೇಶಾಂಗ ವ್ಯವಹಾರಗಳ ಇಲಾಖೆಗಳಲ್ಲಿ 68 ಹುದ್ದೆಗಳಿವೆ. ಈ ಹುದ್ದೆಗಳಿಗೆ 1ರಿಂದ 13 ವರ್ಷಗಳ ಅನುಭವವಿರುವವರು ಅರ್ಜಿ ಸಲ್ಲಿಸಬಹುದಾಗಿದೆ.

ಮಾಹಿತಿ ಪಡೆಯುವ ವಿಧಾನ: ಅರ್ಹ ಅಭ್ಯರ್ಥಿಗಳನ್ನು ಹೊಂದಿರುವ ಸಂಸ್ಥೆಗಳು ಮತ್ತು ಕಂಪನಿಗಳು, ಈ ಖಾಲಿ ಹುದ್ದೆಗಳ ಕುರಿತು ನೇರ ಮಾಹಿತಿ ಪಡೆಯಲು ಯುಪಿಎಸ್‌ಸಿಯ ra-upsc@gov.in ಇ–ಮೇಲ್ ವಿಳಾಸಕ್ಕೆ ಸಂಪರ್ಕಿಸಬಹುದು. ಇದು ಸಾಂಸ್ಥಿಕ ಮಟ್ಟದಲ್ಲಿ ಹೆಚ್ಚು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳನ್ನು ತಲುಪಲು ಸಹಕಾರಿಯಾಗಿದೆ.

ವೈಯಕ್ತಿಕವಾಗಿ ಆಸಕ್ತಿ ಹೊಂದಿರುವ ವೃತ್ತಿಪರರು ಯುಪಿಎಸ್‌ಸಿಯ ಅಧಿಕೃತ ವೆಬ್‌ಸೈಟ್ www.upsc.gov.in ಅಥವಾ ಅದರ ಅಧಿಕೃತ ಲಿಂಕ್ಡ್‌ಇನ್ ಪುಟದ ಮೂಲಕ ನೇಮಕಾತಿ ಅಧಿಸೂಚನೆಗಳನ್ನು ತಿಳಿದುಕೊಳ್ಳಬಹುದಾಗಿದೆ.

ಮೈಸೂರು ಮಿತ್ರ ಗುರುವಾರ 7 ಆಗಸ್ಟ್ 2025

ಕೆಆರ್‌ಎಸ್ ಜಲಾಶಯಕ್ಕೆ ಟಿಪ್ಪು ಅಡಿಗಲ್ಲು ಹಾಕಿದ್ದರು ಎಂಬ ಸಚಿವ ಡಾ.ಮಹದೇವಪ್ಪ ಹೇಳಿಕೆ ಸರಿಯಿದೆ

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಸಮರ್ಥನೆ

ಮೈಸೂರು, ಆ.6(ಜಿಎ)–ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಕೆಆರ್‌ಎಸ್ ಜಲಾಶಯವನ್ನು ಟಿಪ್ಪುಸುಲ್ತಾನ್ ಕಟ್ಟಿಸಿದ್ದು ಎಂದು ಎಲ್ಲೂ ಹೇಳಿಲ್ಲ, ಕಾವೇರಿ ನದಿಗೆ ಅಣೆಕಟ್ಟೆ ಕಟ್ಟುವ ಯೋಜನೆ ರೂಪಿಸಿ ಅದಕ್ಕೆ ಮೊದಲು ಅಡಿಗಲ್ಲು ಹಾಕಿಸಿದ್ದು ಟಿಪ್ಪು ಎಂದು ಹೇಳಿದ್ದಾರೆ ಅಷ್ಟೇ. ಬಿಜೆಪಿ ನಾಯಕರು ಇತಿಹಾಸ ಗೊತ್ತಿಲ್ಲದೇ ಟೀಕೆ ಮಾಡುತ್ತಿದ್ದಾರೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಿನ ಉದಯಗಿರಿಯಲ್ಲಿರುವ ಎಸ್‌ಡಿಪಿಐ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ಇತಿಹಾಸ ಗೊತ್ತಿಲ್ಲ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನೀಡಿರುವ ಹೇಳಿಕೆ ಸರಿ ಇದೆ. ಶಾಸನವನ್ನು ಕೆಆರ್‌ಎಸ್ ಜಲಾಶಯ ಕಟ್ಟಿಸಿದ ಮಹಾತ್ಮರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೇ ಟಿಪ್ಪು ಪರ್ಶಿಯನ್ ಭಾಷೆಯಲ್ಲಿ ಬರೆಸಿದ್ದ ಶಾಸನವನ್ನು ಕನ್ನಡದಲ್ಲಿ ಬರೆಸಿ ಜಲಾಶಯದ ಬಳಿಯೇ ಹಾಕಿಸುವ ಮೂಲಕ ತಮ್ಮ ದೊಡ್ಡತನವನ್ನು ಮೆರೆದಿದ್ದಾರೆ ಎಂದು ಹೇಳಿದರು.



ಅಬ್ದುಲ್ ಮಜೀದ್

ಟಿಪ್ಪುಸುಲ್ತಾನ್ ಮತ್ತು ಹೈದರ್ ಆಲಿ ಅವರು ಈ ನಾಡಿನ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಬರಗಾಲದ ಸಂದರ್ಭದಲ್ಲಿ ಚೀನಾದಿಂದ ರೇಷ್ಮೆ ಬೆಳೆಯನ್ನು ತರಿಸಿ ರಾಜ್ಯದಲ್ಲಿ ಅಭಿವೃದ್ಧಿಪಡಿಸಿದರು. ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡಿದರು. 1782ರಲ್ಲಿ ಟಿಪ್ಪುಸುಲ್ತಾನ್ ಅವರು, ಕಾವೇರಿ ನದಿಗೆ 70 ಅಡಿ ಎತ್ತರದ ಅಣೆಕಟ್ಟೆ ಕಟ್ಟುವ ಮೂಲಕ ರೈತರ ಬದುಕು ಹಸನು ಮಾಡಲು ಯತ್ನಿಸಿ ಅದಕ್ಕೆ ಹಣಕಾಸು ಹೊಂದಿಸಿದ್ದರು, ಆದರೆ, 3ನೇ ಮೈಸೂರು–ಆಂಗ್ಲೋ ಯುದ್ಧದಲ್ಲಿ ಟಿಪ್ಪು ಬ್ರಿಟೀಷರ ವಿರುದ್ಧ ಸೋಲು ಅನುಭವಿಸಿ ಯುದ್ಧದ ಖರ್ಚು 3 ಕೋಟಿ ಹಣವನ್ನು ಬ್ರಿಟಿಷರಿಗೆ ಕೊಡಲಾಗದೆ ತಮ್ಮ ಮಕ್ಕಳನ್ನು ಒತ್ತೆ ಇಟ್ಟಿದ್ದು ಯಾರೂ ಮರೆಯಲು ಸಾಧ್ಯವಿಲ್ಲ. ಬಳಿಕ ನಾಲ್ಕನೇ ಮೈಸೂರು–ಆಂಗ್ಲೋ ಯುದ್ಧದಲ್ಲಿ ಟಿಪ್ಪು ವೀರ ಮರಣ ಹೊಂದಿದಾಗ ಅಣೆಕಟ್ಟೆ ಕಟ್ಟಲು ಆಗುವುದಿಲ್ಲ, ಆದರೇ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೆಆರ್‌ಎಸ್ ಜಲಾಶಯ ಕಟ್ಟುವ ಸಂದರ್ಭದಲ್ಲಿ ಸಿಕ್ಕ ಶಾಸನವನ್ನು ಅದೇ ಜಾಗದಲ್ಲಿ ಇರಿಸಿದ್ದರು ಎಂದು ವಿವರಿಸಿದರು.

ಟಿಪ್ಪು ಸುಲ್ತಾನರು ತಮ್ಮ ಆಳ್ವಿಕೆಯಲ್ಲೇ ಭೂರಹಿತ ದಲಿತರಿಗೆ, ಇತರರಿಗೆ ಭೂಮಿ ಒಡೆತನ ನೀಡಿದ್ದರು ಎನ್ನುವುದು ಮಾಜಿ ಸಂಸದರಿಗೆ ಗೊತ್ತಿಲ್ಲದಿದ್ದರೆ ಇತಿಹಾಸ ಓದಲಿ ಎಂದರು. ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಸ್ವಾಮಿ, ಜಿಲ್ಲಾಧ್ಯಕ್ಷ ರಫತ್ ಖಾನ್, ಫಿರ್ದೋಸ್, ಸಫಿಯುಲ್ಲಾ ಉಪಸ್ಥಿತರಿದ್ದರು.

ಮುಕ್ತ ವಿವಿಯಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ

ಇಸ್ರೋ ಅನ್ವೇಷಣೆಯ ಉಪಗ್ರಹ, ರಾಕೆಟ್‌ಗಳ ಪ್ರತಿರೂಪ ಅನಾವರಣ

ಮೈಸೂರು,ಆ.6(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕೆಎಸ್‌ಒಯು) ಮತ್ತು ಇಸ್ರೋ ವತಿಯಿಂದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನ ಆಚರಿಸಲಾಯಿತು.

ಅಂತರರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆಯ ಅಂಗವಾಗಿ ಘಟಿಕೋತ್ಸವ ಭವನದ ಆವರಣದಲ್ಲಿ ಇಸ್ರೋದಿಂದ ಅನ್ವೇಷಣೆ ಮಾಡಿರುವ ವಿವಿಧ ಉಪಗ್ರಹಗಳು ಹಾಗೂ ರಾಕೆಟ್‌ಗಳ ಪ್ರತಿರೂಪವನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ವಿವಿಧ ಶಾಲೆಗಳಿಂದ ಬಂದಿದ್ದ ವಿದ್ಯಾರ್ಥಿಗಳು ಇಲ್ಲಿರುವ ಉಪಗ್ರಹ, ರಾಕೆಟ್‌ಗಳ ವೀಕ್ಷಿಸಿ, ಮಾಹಿತಿ ಪಡೆದುಕೊಂಡರು.

ನಂತರ 'ಆರ್ಯಭಟನಿಂದ ಗಗನಯಾನದವರೆಗೆ: ಪ್ರಾಚೀನ ಜ್ಞಾನದಿಂದ ಅನಂತ ಸಾಧ್ಯತೆಗಳು' ವಿಷಯ ಕುರಿತು ಇಸ್ರೊ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್(ಐಎಸ್‌ಟಿಆರ್‌ಎಸಿ) ಸಹಾಯಕ ನಿರ್ದೇಶಕ ಎಂ.ಆರ್.ರಾಘವೇಂದ್ರ ಅವರು ಮಾತನಾಡಿದರು.

ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶಕ್ಕೆ ದೀರ್ಘ ಇತಿಹಾಸವಿದ್ದು, ಆರ್ಯಭಟನ ಜ್ಞಾನ ಪರಂಪರೆಯು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ)ಗೆ ಭದ್ರ ಬುನಾದಿ ನೀಡಿದೆ. ಆರ್ಯಭಟ ಗ್ರಹಗಳ ಚಲನೆ, ಅಂತರ, ಭೂಮಿಯ ಸುತ್ತಳತೆಯನ್ನು ಕರಾರುವಕ್ಕಾಗಿ ಗುರುತಿಸಿದ್ದರು. ಹಾಗೇ ವರಹ, ಮಿಹಿರ, ಬ್ರಹ್ಮಗುಪ್ತ, ಭಾಸ್ಕರ ಸೇರಿದಂತೆ ಅಂದಿನ ಬಾಹ್ಯಾಕಾಶ ತಜ್ಞರು, ಗಣಿತವನ್ನೂ ಚೆನ್ನಾಗಿ ಅರಿತಿದ್ದರು. ಈ ಜ್ಞಾನವು ಇಂದಿಗೂ ಇಸ್ರೋಗೆ ಉಪಯುಕ್ತವಾಗುತ್ತಿದೆ ಎಂದರು.

ಇಸ್ರೋದ ಚಂದ್ರಯಾನ, ಆದಿತ್ಯ ಮುಂತಾದ ಯೋಜನೆಗಳು ನಮ್ಮ ಜ್ಞಾನ ಪರಂಪರೆಯ ಉತ್ಪನ್ನವಾಗಿದೆ. ಇಸ್ರೋದಿಂದ 2050ರವರೆಗೂ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಭಾರತೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆ, ಗಗನಯಾನ, ಶುಕ್ರ ಹಾಗೂ ಚಂದ್ರನ ಅಧ್ಯಯನ, ಮನುಷ್ಯರನ್ನು ಅಂತರಿಕ್ಷ, ಚಂದ್ರನತ್ತ ಕಳುಹಿಸುವುದು ಇದರಲ್ಲಿ ಒಳಗೊಂಡಿದೆ ಎಂದು 'ಆರ್ಯಭಟನಿಂದ ಗಗನಯಾನದವರೆಗೆ: ಪ್ರಾಚೀನ ಜ್ಞಾನದಿಂದ ಅನಂತ ಸಾಧ್ಯತೆಗಳು' ಬಗ್ಗೆ ವಿವರಿಸಿದರು

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಈ ಕಾರ್ಯಕ್ರಮದ ಮೂಲಕ ವಿಜ್ಞಾನಿಗಳು ಹೇಗೆ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ವಿದ್ಯಾರ್ಥಿಗಳು ಅರಿಯಬೇಕು. ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶ ಸಾಕಷ್ಟು ಮುಂದುವರೆದಿದ್ದು, ಇದರ ಭಾಗವಾಗಲು ಪ್ರಯತ್ನಿಸಬೇಕು ಎಂದರು.

ನಮ್ಮ ಅಗತ್ಯತೆಗೆ ಅನುಗುಣವಾಗಿ ಇಂದು ತಂತ್ರಜ್ಞಾನ ಬದಲಾಗುತ್ತಿದೆ. ವಿಜ್ಞಾನದ ಕುರಿತು ಕುತೂಹಲ ಬೆಳೆಸಿಕೊಳ್ಳುವುದು ನಮಗೆ ಜ್ಞಾನ ಹಾಗೂ ಭವಿಷ್ಯದ ಗುರಿ ಸಾಧನೆಗೆ ಸಹಕಾರಿ. ಇಸ್ರೋ ಸಂಸ್ಥೆಯು ಬಾಹ್ಯಾಕಾಶ ತಂತ್ರಜ್ಞಾನವುಳ್ಳ ಮಾದರಿಗಳ ಪ್ರದರ್ಶನ ಆಯೋಜಿಸಿದ್ದು, ವಿದ್ಯಾರ್ಥಿಗಳು ಗಮನಿಸಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ನವೀನ್‌ಕುಮಾರ್, ಅಂತಾರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಮುಖ್ಯ ಸಮಿತಿ ಚೇರ್ಮನ್ ಜಸ್ವಿಂದರ್ ಸಿಂಗ್ ಖೋರಲ್, ಸ್ಥಳೀಯ ಸಮಿತಿ ಚೇರ್ಮನ್ ನಂದಿನಿ ಹರಿನಾಥ್, ಎಲ್‌ಎಚ್‌ಡಬ್ಲ್ಯುಸಿ ಪ್ರಧಾನ ವ್ಯವಸ್ಥಾಪಕ ಶಿವಪ್ರಸಾದ್ ಇದ್ದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕೆಎಸ್‌ಒಯು) ಮತ್ತು ಇಸ್ರೋ ವತಿಯಿಂದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ರಾಷ್ಟ್ರೀಯ ಬಾಹ್ಯಾಕಾಶ ದಿನ ಆಚರಿಸಿ, ಇಸ್ರೋದಿಂದ ಅನ್ವೇಷಣೆ ಮಾಡಿರುವ ವಿವಿಧ ಉಪಗ್ರಹಗಳು ಹಾಗೂ ರಾಕೆಟ್‌ಗಳ ಬಗ್ಗೆ ವಿವರಿಸಲಾಯಿತು.

ಕೆಆರ್‌ಎಸ್ ಜಲಾಶಯಕ್ಕೆ ಟಿಪ್ಪು ಅಡಿಗಲ್ಲು ಹಾಕಿದ್ದು ಎಂದು ನಾನು 15 ವರ್ಷದ ಹಿಂದೆಯೇ ಹೇಳಿದ್ದೆ!

- ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್ ಪ್ರತಿಕ್ರಿಯೆ
- ಈಗ ಸಚಿವ ಮಹದೇವಪ್ಪ ಹೇಳಿದ್ದು ವಿವಾದವಾಗಿದೆ
- ಅಣೆಕಟ್ಟೆ ಬಳಿಯ ಶಿಲಾಶಾಸನವೇ ಇದನ್ನು ಸಾರುತ್ತಿದೆ
- ದಸರಾ ಉದ್ಘಾಟಕರಿಗೆ ಸೂಕ್ತ ಗೌರವ ಕೊಡುವ ವ್ಯವಸ್ಥೆ ಆಗಲಿ



ಮೈಸೂರು,ಆ.6(ಎಂಟಿವೈ)–ಕೆಆರ್‌ಎಸ್ ಜಲಾಶಯ ನಿರ್ಮಿಸಲು ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪುಸುಲ್ತಾನ್ ಎಂದು ನಾನು 15 ವರ್ಷಗಳ ಹಿಂದೆಯೇ ಹೇಳಿದ್ದೆ. ಆದರೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಈಗ ಹೇಳಿದ್ದಾರೆ. ಇದನ್ನು ವಿವಾದ ಮಾಡುವವರು ಕೆಆರ್‌ಎಸ್ ಡ್ಯಾಂನಲ್ಲಿರುವ ಶಾಸನವನ್ನು ಹೋಗಿ ನೋಡಲಿ ಎಂದು ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್ ಸವಾಲು ಹಾಕಿದರು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಟಿಪ್ಪುಸುಲ್ತಾನ್ ಕೆಆರ್‌ಎಸ್ ಅಣೆಕಟ್ಟೆ ಕಟ್ಟಲು ಮೊದಲು ಅಡಿಪಾಯ ಹಾಕಿದ್ದರು. ಅದಕ್ಕೆ ಸಾಕ್ಷಿಯೂ ಇದೆ. ಇದನ್ನು ವಿವಾದ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಯಾಕೆಂದರೆ ಕೆಆರ್‌ಎಸ್ ಡ್ಯಾಂ ಒಳಹೋದರೆ ಬಲಭಾಗದ ಗೋಡೆ ಮೇಲೆ 3 ಭಾಷೆಗಳಲ್ಲಿ ಸ್ಪಷ್ಟವಾಗಿ ಟಿಪ್ಪು ಬರೆಸಿರುವ ಶಿಲಾಶಾಸನ ಹಾಕಲಾಗಿದೆ. ಅದನ್ನು ಯಾರು ಬೇಕಾದರೂ ಹೋಗಿ ನೋಡಬಹುದು.

ಟಿಪ್ಪು ಅಡಿಗಲ್ಲು ಹಾಕಿದ್ದರೆ, ಅಣೆಕಟ್ಟೆ ಕಟ್ಟಿದ್ದು ಮಾತ್ರ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯ. ಇದನ್ನು ಮೈಸೂರಿನಲ್ಲಿರುವ ಇಬ್ಬರು ಮತ್ತು ಬೆಂಗಳೂರಿನಲ್ಲಿರುವ ನಾಲ್ಕೈದು ಮಂದಿ ಮಾತ್ರ ವಿವಾದ ಮಾಡುತ್ತಿದ್ದಾರೆ. ಬೇರೆ ಯಾರೂ ವಿವಾದ ಮಾಡುತ್ತಿಲ್ಲ ಎಂದು ಹೇಳಿದರು.

ದಸರಾ ಉದ್ಘಾಟಕರಿಗೆ ಗೌರವ ಕೊಡಿ: ವಿಶ್ವವಿಖ್ಯಾತ ಮೈಸೂರು ದಸರಾ ಆಚರಣೆ ಮೈಸೂರಿಗೆ ಮಾತ್ರ ಸೀಮಿತವಲ್ಲ. ಇದು ರಾಜ್ಯದ ಹಬ್ಬ, ದಸರಾ ಆಚರಣೆ ಬಗ್ಗೆ ಎಲ್ಲಾ ಕಡೆ ಪ್ರಚಾರ ಮಾಡಬೇಕು. ದಸರಾ ಉದ್ಘಾಟನೆ ಯಾರೇ ಮಾಡಲಿ ಅವರಿಗೆ ಗೌರವ ಕೊಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದರು.

ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ನಡೆಯಲಿದೆ. ಉದ್ಘಾಟನೆ ಬಳಿಕ ಯಾರು ಉದ್ಘಾಟನೆ ಮಾಡುತ್ತಾರೆಯೋ ಅವರನ್ನು ಹಿಂದಕ್ಕೆ ತಳ್ಳಿ ರಾಜಕಾರಣಿಗಳೇ ದರ್ಬಾರ್ ಮಾಡುತ್ತಾರೆ. ಇದು ಆಗಬಾರದು. ಯಾರು ದಸರಾ ಉದ್ಘಾಟನೆ ಮಾಡುತ್ತಾರೋ ಅವರು ಮತ್ತು ಮುಖ್ಯಮಂತ್ರಿಗಳು ಮಾತ್ರ ವೇದಿಕೆ ಮೇಲೆ ಇದ್ದು ಭಾಷಣ ಮಾಡಲಿ. ಉಳಿದ ಸಚಿವರು ಮತ್ತು ಅಧಿಕಾರಿಗಳು ಕೆಳಗೆ ಕುಳಿತುಕೊಳ್ಳಲಿ ಎಂದು ಹೇಳಿದರು.

ದಸರಾ ಉದ್ಘಾಟನೆಗೆ ಬಂದವರನ್ನು ಒಂದು ದಿನ ಐಷಾರಾಮಿ ಹೋಟೆಲ್‌ನಲ್ಲಿ ಉಳಿಸಿ ಕಾರಿನಲ್ಲಿ ಚಾಮುಂಡಿಬೆಟ್ಟಕ್ಕೆ ಕರೆದುಕೊಂಡು ಬಂದು ಉದ್ಘಾಟನೆ ಮಾಡಿಸುತ್ತೀರಿ. ಬಳಿಕ ಅವರನ್ನು ಕ್ಯಾರೆ ಎನ್ನುವುದಿಲ್ಲ. ಅವರು ಬಸ್ ಹತ್ತಿ ಅಲ್ಲೊ ಇಲ್ಲೊ ಇದ್ದು ಹೋಗಬೇಕು. ಅದರ ಬದಲು ದಸರಾ ಉದ್ಘಾಟನೆಗೆ ಬರುವವರಿಗೆ ಒಂದು ಹೊಸ ಕಾರನ್ನೆ ಕೊಡಬೇಕು ಎಂದು ಒತ್ತಾಯಿಸಿದರು.

ಸಿಎಂ ಸಿದ್ದರಾಮಯ್ಯರಿಂದ ಆ.9ರಂದು ಕೆಆರ್ ಸಹಕಾರ ಬ್ಯಾಂಕ್‌ನ ನವೀಕೃತ ಕಟ್ಟಡ ಉದ್ಘಾಟನೆ

ಮೈಸೂರು, ಆ.6(ಎಂಟಿವೈ)–ಮೈಸೂರಿನ ಅಗ್ರಹಾರದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನ ನೆಲ ಅಂತಸ್ತಿನ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ ಆ.9ರಂದು ಸಂಜೆ 4 ಗಂಟೆಗೆ ನೆರವೇರಲಿದೆ ಎಂದು ಬ್ಯಾಂಕ್ ಅಧ್ಯಕ್ಷ ಡಿ.ಬಸವರಾಜು (ಬಸಪ್ಪ) ತಿಳಿಸಿದ್ದಾರೆ.

ಕೆ.ಆರ್.ಬ್ಯಾಂಕ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೆ.ಆರ್.ಬ್ಯಾಂಕ್ ನವೀಕೃತ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.



ಕೆ.ಆರ್.ಬ್ಯಾಂಕ್‌ಗೆ 106 ವರ್ಷ: ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಲೆಂದು ಶೆಟ್ಟಿಪ್ಪ ಸಿದ್ದಪ್ಪ ಅವರು 1919ರಲ್ಲಿ ಕೆ.ಆರ್.ಬ್ಯಾಂಕ್ ಸ್ಥಾಪಿಸಿದರು. 106 ವರ್ಷಗಳನ್ನು ಪೂರ್ಣಗೊಳಿಸಿದ್ದು, ಶತಮಾನದ ಹಿರಿಮೆ ಹೊಂದಿದೆ. 25 ಪೈಸೆಯಿಂದ ಆರಂಭವಾದ ಬ್ಯಾಂಕ್, ಬರಬರುತ್ತಾ ನೂರಾರು ಕೋಟಿ ರೂ. ವಹಿವಾಟು ನಡೆಸಿದೆ. ಎ ಗ್ರೇಡ್‌ನಲ್ಲಿರುವ ನಮ್ಮ ಬ್ಯಾಂಕಿನಲ್ಲಿ ಪ್ರಸ್ತುತ 9028 ಸದಸ್ಯರಿಂದ ವಾರ್ಷಿಕ 95 ಕೋಟಿ ರೂ. ವಹಿವಾಟು ನಡೆಸುತ್ತಿದೆ. 14 ಕೋಟಿ ಸ್ವಂತ ಬಂಡವಾಳ, 78 ಕೋಟಿ 25 ಲಕ್ಷ ದುಡಿಯುವ ಬಂಡವಾಳ, 65 ಕೋಟಿ ಠೇವಣಿ, 45 ಕೋಟಿ 61 ಲಕ್ಷ ರೂ. ಸಾಲ ನೀಡಲಾಗಿದೆ ಎಂದರು.

ಬ್ಯಾಂಕ್ ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತಾ ಪತ್ರಗಳು ಹಾಗೂ ಠೇವಣಿಗಳಲ್ಲಿ 25.33 ಕೋಟಿ ರೂ. ಹೂಡಿಕೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 32 ಲಕ್ಷ ನಿವ್ವಳ ಲಾಭ ಗಳಿಸಿದೆ. ಬ್ಯಾಂಕ್ ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಂಡಿದೆ. ನವೀಕೃತ ಕೆಳಹಂತಸ್ತಿಗೆ ಬ್ಯಾಂಕ್ ಕೆಲಸಗಳನ್ನು ಸ್ಥಳಾಂತರ ಮಾಡಲಾಗುತ್ತಿದೆ ಎಂದರು. ಮಾಜಿ ಕೇಂದ್ರ ಸಚಿವ ಎಂ.ರಾಜಶೇಖರಮೂರ್ತಿ, ಮಾಜಿ ಶಾಸಕ ಎಚ್.ಗಂಗಾಧರನ್, ವೇದಾಂತ ಹೆಮ್ಮಿಗೆ ಅವರು ಅಧ್ಯಕ್ಷರಾಗಿ ಕೆಲಸ ಮಾಡಿರುವ ಸಂಸ್ಥೆಯ ಅಧ್ಯಕ್ಷನಾಗಿರುವುದು ಹೆಮ್ಮೆ ತಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಯಾವುದೇ ಬೇಡಿಕೆ ಇಡುವುದಿಲ್ಲ ಎಂದರು. ಗೋಷ್ಠಿಯಲ್ಲಿ ಕೆ.ಆರ್.ಬ್ಯಾಂಕ್ ಸದಸ್ಯರಾದ ನಂ.ಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಎಂ.ಡಿ.ಪಾರ್ಥಸಾರಥಿ ಇನ್ನಿತರರು ಇದ್ದರು.

ಒಡನಾಡಿಯಲ್ಲಿ ವಿ.ಶ್ರೀನಿವಾಸಪ್ರಸಾದ್ ಹುಟ್ಟುಹಬ್ಬದ ಪ್ರಯುಕ್ತ ವಿಚಾರ ಮಂಥನ

ಮೈಸೂರು,ಆ.6–ಮೈಸೂರಿನ ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದ ಆವರಣದಲ್ಲಿ ಮಾಜಿ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ 78ನೇ ಹುಟ್ಟುಹಬ್ಬದ ಅಂಗವಾಗಿ 'ವಿಚಾರ ಮಂಥನ' ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಮ್, ಶ್ರೀನಿವಾಸ ಪ್ರಸಾದ್ ಅವರು ಒಡನಾಡಿಯ ಪ್ರಾರಂಭದ ದಿನಗಳಿಂದಲೂ ಸಂಸ್ಥೆಗೆ ನೈತಿಕ ಶಕ್ತಿಯಾಗಿ ನಿಂತಿದವರಲ್ಲದೇ, ನಮ್ಮ ಪ್ರತೀ ಹೋರಾಟದಲ್ಲೂ ಜೊತೆಯಾಗಿದ್ದವರು. ಇವರ ಹುಟ್ಟುಹಬ್ಬವನ್ನು ನಾವು ಮತ್ತು ಮಕ್ಕಳು ನಮ್ಮ ಮನೆಯ ಹಿರಿಯಣ್ಣರೊಬ್ಬರ ಜನ್ಮದಿನವೆಂದೇ ಭಾವಿಸಿ, ಸಡಗರದಿಂದ ಆಚರಿಸುತ್ತಿದ್ದೆವು. ಅವರ ಅಗಲಿಕೆಯು ನಮ್ಮನ್ನು ತುಂಬಾ ಕಾಡುತ್ತಿದೆ. ಆದರೆ ಅವರ ಆದರ್ಶಗಳು, ಅವರ ಜಾತ್ಯಾತೀತ ನಿಲುವು ಇಂದಿಗೂ ಅನುಕರಣೀಯವಾದುದ್ದು ಎಂದು ಹೇಳಿದರು.

ಸಂಸ್ಥೆಯ ಮತ್ತೋರ್ವ ನಿರ್ದೇಶಕ ಸ್ಟ್ಯಾನ್ಲಿ ಮಾತನಾಡುತ್ತಾ, ಶ್ರೀನಿವಾಸ ಪ್ರಸಾದ್ ಅವರು ದಿಟ್ಟ, ನೇರ ನಡೆ–ನುಡಿ, ಸರಳ ಸಜ್ಜನಿಕೆ, ಸ್ವಾಭಿಮಾನಿ ವ್ಯಕ್ತಿತ್ವವನ್ನು ಹೊಂದಿದ್ದವರು. ಒಡನಾಡಿಯ ಸಂಕಷ್ಟದ ದಿನಗಳಲ್ಲಿ ಅವರು ನೀಡುತ್ತಿದ್ದ ನೈತಿಕ ಸ್ಥೈರ್ಯವನ್ನು ನಾವು ಎಂದಿಗೂ ಮರೆಯುವಂತಿಲ್ಲ. ಅವರು ನಮ್ಮ ಜೊತೆಗಿದ್ದದ್ದೇ ನಮಗೇ ದೊಡ್ಡ ಶಕ್ತಿ. ಒಡನಾಡಿ ಹಲವಾರು ಪ್ರಮುಖ ಪ್ರಕರಣಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡುತ್ತಿದ್ದು, ನಮಗೆ ಹಲವಾರು ಸಂದರ್ಭಗಳಲ್ಲಿ ಸಂಕಷ್ಟಗಳು ಎದುರಾಗುತ್ತಿದ್ದರೂ ಎದೆಗುಂದದೇ ಕೆಲಸ ಮಾಡುತ್ತಿದ್ದೇವೆ. ಯಾವುದೇ ಪ್ರಕರಣಗಳಲ್ಲಾಗಲೀ, ಹೋರಾಟಗಳಲ್ಲಾಗಲೀ ಶ್ರೀನಿವಾಸಪ್ರಸಾದ್ ಮತ್ತು ರಾಜಶೇಖರ ಕೋಟಿಯಂತವರು ಸದಾ ಮುಂಚೂಣಿಯಲ್ಲಿದ್ದು, ನಮಗೆ ನೀಡುತ್ತಿದ್ದ ನೈತಿಕ ಬೆಂಬಲ ಈಗ ಇಲ್ಲದಂತಾಗಿದೆ. ಇಂತಹವರ ಅಗಲಿಕೆಗಳು ನಮ್ಮನ್ನು ನಿರಂತರವಾಗಿ ಕಾಡುತ್ತಲೇ ಇರುತ್ತದೆ. ಅವರು ಹಾಕಿಕೊಟ್ಟ ದಾರಿಯಲ್ಲೇ ಇಂದಿಗೂ ನಾನು ನಮ್ಮ ಕೆಲಸದ ಮೂಲಕ ಯಾವುದೇ ರಾಜಿ ಮಾಡಿಕೊಳ್ಳದೇ ಮಾಡುತ್ತಿದ್ದೇವೆ. ಸಂಸ್ಥೆಯೊಂದಿಗೆ ಪ್ರಸಾದ್‌ರವರ ಸಂಬಂಧವು ಯಾವುದೇ ಹಣಕಾಸಿನ ವಿಚಾರಕ್ಕಾಗಲೀ, ರಾಜಕೀಯ ಕಾರಣಕ್ಕಾಗಲೀ ಇರುವಂತದಲ್ಲ. ಪ್ರಸಾದ್ ಅವರು ಸದಾಕಾಲ ಶೋಷಿತರ ಹಾಗೂ ನೊಂದವರ ಪರವಾಗಿ ಮಿಡಿಯುತ್ತಾ ಇದ್ದಂತವರು. ಪ್ರಸಾದ್ ಅವರು ಭೌತಿಕವಾಗಿ ನಮ್ಮೊಡನೆ ಇಲ್ಲದಿರಬಹುದು. ಆದರೆ ಮಾನಸಿಕವಾಗಿ ಎಂದೆಂದಿಗೂ ನಮ್ಮ ಜೊತೆಯಲ್ಲೇ ಇದ್ದಾರೆ ಎಂದುಕೊಂಡೆ ನಮ್ಮ ಕೆಲಸವನ್ನು ನಾವು ಬದ್ಧತೆಯಿಂದ ಮಾಡಬೇಕು. ಸಂಸ್ಥೆ ಒಂದಿಷ್ಟು ಉತ್ತಮ ಕೆಲಸಗಳನ್ನು ಮಾಡಿದ್ದು, ಹಲವಾರು ಮಕ್ಕಳು ಆಶ್ರಯ ಪಡೆದುಕೊಂಡು, ವಿದ್ಯಾಭ್ಯಾಸ ಮುಗಿಸಿರುತ್ತಾರೆ. ಸಂತೋಷದಿಂದ ಇಂದಿಗೂ ನಮ್ಮ ಜೊತೆಯಲ್ಲಿ ಇದ್ದಾರೆ ಅಂದರೆ ಅದಕ್ಕೆ ಪ್ರಸಾದ್ ಮತ್ತು ಕೋಟಿಯಂತವರು ಹಾಕಿಕೊಟ್ಟ ಭದ್ರ ಬುನಾದಿಯಿಂದಲೇ ಇದೆಲ್ಲವೂ ಸಾಧ್ಯವಾಯಿತು ಎಂದು ಹೇಳಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಮತ್ತೋರ್ವ ಅತಿಥಿ ಎಂ.ಆರ್.ಗಂಗಾಧರ್ ಮಾತನಾಡುತ್ತಾ, ಪ್ರಸಾದ್ ಅವರು ನಿಸ್ವಾರ್ಥ ಮನೋಭಾವದಿಂದ ಸೇವೆ ಮಾಡಲು ಬಯಸುತ್ತಿದ್ದವರು. ಬಡವರಿಗೆ–ಶೋಷಿತರಿಗೆ ಹೆಗಲು ಕೊಟ್ಟವರು. ಅಂಬೇಡ್ಕರ್ ಅವರ ತತ್ವ, ಸಿದ್ಧಾಂತ ಮತ್ತು ಮಾರ್ಗದರ್ಶನದಲ್ಲಿ ನಂಬಿಕೆ ಇಟ್ಟುಕೊಂಡೇ ಬದುಕಿದವರು. ಅವರ ಆದರ್ಶ ಮತ್ತು ಪ್ರೇರಣೆಗಳು ಎಲ್ಲರಿಗೂ ಸ್ಫೂರ್ತಿದಾಯಕವಾದಂತದ್ದು ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ ಪ್ರಸಾದ್, ಮಾಜಿ ಶಾಸಕ ಬಿ.ಹರ್ಷವರ್ಧನ್, ಪ್ರಸಾದ್ ಅವರ ಮಕ್ಕಳಾದ ಪೂನಂ ಹಾಗೂ ಪೂರ್ಣಿಮಾ, ಮುಖಂಡರಾದ ಪಿ.ನಂದಕುಮಾರ್, ರಮೇಶ್ ಇನ್ನಿತರರು ಹಾಜರಿದ್ದರು.



ಮೈಸೂರಿನ ಒಡನಾಡಿ ಸಂಸ್ಥೆಯ 'ಮಡಿಲು' ಪುನರ್ವಸತಿ ಕೇಂದ್ರದ ಆವರಣದಲ್ಲಿ ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ 78ನೇ ಹುಟ್ಟುಹಬ್ಬದ ಅಂಗವಾಗಿ 'ವಿಚಾರ ಮಂಥನ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಶ್ರೀನಿವಾಸ್ ಪ್ರಸಾದ್ ಅವರ ಪತ್ನಿ ಭಾಗ್ಯಲಕ್ಷ್ಮಿ ಪ್ರಸಾದ್, ಮಾಜಿ ಶಾಸಕ ಬಿ.ಹರ್ಷವರ್ಧನ್, ಪ್ರಸಾದ್ ಅವರ ಮಕ್ಕಳಾದ ಪೂನಂ ಹಾಗೂ ಪೂರ್ಣಿಮಾ, ಒಡನಾಡಿ ಸಂಸ್ಥೆಯ ನಿರ್ದೇಶಕ ಪರಶುರಾಮ್ ಇನ್ನಿತರರು ಉಪಸ್ಥಿತರಿದ್ದರು.

ವಿ.ಶ್ರೀನಿವಾಸಪ್ರಸಾದ್ ಹುಟ್ಟುಹಬ್ಬದ ಪ್ರಯುಕ್ತ ಅನಾಥಾಶ್ರಮದ ಮಕ್ಕಳಗೆ ಉಪಹಾರ



ರಾಜಕೀಯ ಮುತ್ಸದ್ದಿ, ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸ್‌ಪ್ರಸಾದ್ ಅವರ 78ನೇ ಹುಟ್ಟುಹಬ್ಬದ ಪ್ರಯುಕ್ತ ಜಯನಗರದ ಛಾಯಾದೇವಿ ಅನಾಥಾಶ್ರಮದ ಮಕ್ಕಳಿಗೆ ಉಪಾಹಾರ ನೀಡಲಾಯಿತು. ಅಶೋಕಪುರಂನ ಪ್ರೊ. ಶ್ರೀ ಜ್ಞಾನ ಸ್ವರೂಪನಂದ ಸ್ವಾಮೀಜಿ, ಬಳಗದ ಸಂಸ್ಥಾಪಕ ಅಧ್ಯಕ್ಷ ಎಂ.ರಾಜಕುಮಾರ್, ಮಾಜಿ ಉಪ ಮೇಯರ್ ವಿ. ಶೈಲೇಂದ್ರ, ಅಶೋಕಪುರಂ ಆದಿ ಕರ್ನಾಟಕ ಮಹಾ ಸಂಸ್ಥೆಯ ಕಾರ್ಯದರ್ಶಿ ಶಿವಸ್ವಾಮಿ, ಮುಖಂಡರಾದ ಅಶೋಕಪುರಂ ಮಹೇಶ್ ಉಪಸ್ಥಿತರಿದ್ದರು.

ದೇಶ - ವಿದೇಶ


ಭಾರತದ ಮೇಲೆ ಶೇ.25ರಷ್ಟು ಹೆಚ್ಚುವರಿ ಸುಂಕ ವಿಧಿಸಿದ ಅಮೆರಿಕಾ!

ವಾಷಿಂಗ್ಟನ್: ರಷ್ಯಾದಿಂದ ತೈಲ ಖರೀದಿಸಿದ್ದೇವೆ ಎಂಬ ಕಾರಣಕ್ಕೆ ಭಾರತದ ವಿರುದ್ಧ ಕತ್ತಿ ಮಸೆಯುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಮುಂದಿನ 24 ಗಂಟೆಯೊಳಗೆ ಭಾರತದ ಮೇಲಿನ ಸುಂಕವನ್ನು ಗಣನೀಯವಾಗಿ ಹೆಚ್ಚಿಸುತ್ತೇನೆ ಎಂದು ಬೆದರಿಕೆ ಹಾಕಿದ್ದರು. ಕೊನೆಗೂ ಹೇಳಿದಂತೆಯೇ ಮಾಡಿರುವ ಟ್ರಂಪ್, ಇಂದು ಭಾರತದ ಮೇಲೆ ಹೆಚ್ಚುವರಿಯಾಗಿ ಶೇ.25ರಷ್ಟು ಸುಂಕ ವಿಧಿಸಿದ್ದಾರೆ. ಈ ಮೂಲಕ ಭಾರತದ ಮೇಲೆ ಅಮೆರಿಕ ಹೇರಿರುವ ವ್ಯಾಪಾರ ಸುಂಕ ಶೇ.50ರಷ್ಟಾಗಿದೆ! ಆಗಸ್ಟ್ 27ರಿಂದ ಜಾರಿಗೆ ಬರಲಿರುವ ಈ ಕಾರ್ಯಕಾರಿ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಜುಲೈ 30ರಂದು ಟ್ರಂಪ್, ಆಗಸ್ಟ್ 1ರಿಂದ ಭಾರತೀಯ ಆಮದುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸಲಾಗುವುದು ಮತ್ತು ಹೆಚ್ಚುವರಿ ಅನಿರ್ದಿಷ್ಟ ದಂಡ ವಿಧಿಸಲಾಗುವುದು ಎಂದು ಘೋಷಿಸಿದ್ದರು. ಅದಾದ ಬಳಿಕ ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವ ಭಾರತದ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭಾರತಕ್ಕೆ ಎಚ್ಚರಿಕೆ ನೀಡಿದ್ದರು. ಅದರಂತೆ ಇಂದು ಟ್ರಂಪ್ ಭಾರತದ ಮೇಲೆ ಹೆಚ್ಚುವರಿ 25% ವ್ಯಾಪಾರ ಸುಂಕವನ್ನು ಘೋಷಿಸಿದ್ದಾರೆ.




ಆಂಧ್ರಪ್ರದೇಶದಲ್ಲಿ ಆ.15ರಿಂದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ

ಅಮರಾವತಿ: ಆಂಧ್ರಪ್ರದೇಶದಾದ್ಯಂತ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಯನ್ನು ಆ.15ರಿಂದ ಆರಂಭಿಸಲಾಗುತ್ತದೆ ಎಂದು ಸಚಿವ ಕೆ.ಪಾರ್ಥಸಾರಥಿ ಘೋಷಿಸಿದ್ದಾರೆ. ಈ ಯೋಜನೆಗೆ ವಾರ್ಷಿಕವಾಗಿ 1,942 ಕೋಟಿ, ಮಾಸಿಕವಾಗಿ ಸುಮಾರು 162 ಕೋಟಿ ವೆಚ್ಚವಾಗಲಿದೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಈ ಯೋಜನೆಗೆ ಸ್ತ್ರೀ ಶಕ್ತಿ ಎಂದು ಹೆಸರಿಡಲಾಗಿದ್ದು, ರಾಜ್ಯಾದ್ಯಂತ ಜಾರಿಗೊಳ್ಳಲಿದೆ. ಉಚಿತ ಬಸ್ ಯೋಜನೆ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತ ಎನ್ನುವ ವರದಿಗಳನ್ನು ಅಲ್ಲಗಳೆದ ಸಚಿವರು, ರಾಜ್ಯಾದ್ಯಂತ ಜಾರಿಗೊಳಿಸಲಾಗುವುದು. ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಎಪಿಎಸ್‌ಆರ್‌ಟಿಸಿ) ಬಳಿ 11,449 ಬಸ್‌ಗಳಿದ್ದು, 8,456 ಅಂದರೆ, ಸುಮಾರು ಶೇ.75ರಷ್ಟು ಬಸ್‌ಗಳು ಸ್ತ್ರೀ ಶಕ್ತಿ ಯೋಜನೆಗೆ ಒಳಪಡಲಿವೆ. ಪಲ್ಲೆ ವೆಲುಗು, ಅಲ್ಟ್ರಾ ಪಲ್ಲೆ ವೆಲುಗು, ಸಿಟಿ ಆರ್ಡಿನರಿ, ಮೆಟ್ರೊ ಎಕ್ಸ್‌ಪ್ರೆಸ್ ಬಸ್‌ಗಳು ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಿದೆ. ಈ ಯೋಜನೆ ವಾರ್ಷಿಕವಾಗಿ 1.4 ಕೋಟಿ ಮಹಿಳೆಯರಿಗೆ ಪ್ರಯೋಜನ ನೀಡಲಿದೆ.



ಭ್ರಷ್ಟಾಚಾರ ಪ್ರಕರಣ: ರಾಜಪಕ್ಸ ಕುಟುಂಬದ ಕುಡಿಯ ಬಂಧನ

ಕೊಲಂಬೊ: ಶ್ರೀಲಂಕಾ ರಾಜಕಾರಣದಲ್ಲಿನ ಪ್ರತಿಷ್ಠಿತ ರಾಜಪಕ್ಸ ಕುಟುಂಬದ ಕುಡಿ, ಮಾಜಿ ಸಚಿವ ಶಶೀಂದ್ರ ರಾಜಪಕ್ಸ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಬುಧವಾರ ಬಂಧಿಸಲಾಗಿದೆ. ಆಡಳಿತಾರೂಢ ಎನ್‌ಪಿಪಿ ಸರ್ಕಾರದ ಭ್ರಷ್ಟಾಚಾರ ವಿರೋಧಿ ಹೋರಾಟದಡಿ ಬಂಧನಕ್ಕೊಳಗಾದ ರಾಜಪಕ್ಸ ಕುಟುಂಬದ ಮೊದಲ ವ್ಯಕ್ತಿ ಶಶೀಂದ್ರ. ದ್ವೀಪ ರಾಷ್ಟ್ರದ ಆಗ್ನೇಯ ಪ್ರದೇಶದಲ್ಲಿ ಸರ್ಕಾರಿ ಸ್ವಾಮ್ಯದ ಜಮೀನನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಶಶೀಂದ್ರ ವಿರುದ್ಧ ಕೇಳಿಬಂದಿದೆ. 'ಅಕ್ರಮ ನಿರ್ಮಾಣದಲ್ಲೂ ಭಾಗಿಯಾಗಿರುವ ಆರೋಪ ಹೊತ್ತಿರುವ ಶಶೀಂದ್ರ, 2022ರ ಮೇ ತಿಂಗಳಿನಲ್ಲಿ ಸಾರ್ವಜನಿಕರು ನಡೆಸಿದ ಪ್ರತಿಭಟನೆ ಸಂದರ್ಭ ಬೆಂಕಿಗಾಹುತಿಯಾದ ಸರ್ಕಾರಿ ಸ್ವತ್ತಿಗೂ ತಮ್ಮ ಪ್ರಭಾವ ಬಳಸಿಕೊಂಡು ಪರಿಹಾರ ಪಡೆದಿದ್ದಾರೆ. ಸರ್ಕಾರಿ ಅಧಿಕಾರಿಗಳು ಪರಿಹಾರ ಪಾವತಿಗೆ ಹಿಂಜರಿದರೂ, ಇದು ಸಂಭವಿಸಿದೆ' ಎಂದು ದೂರಲಾಗಿದೆ.



ರಾಜಪಕ್ಸ ಸಹೋದರರಲ್ಲಿ ಹಿರಿಯರಾದ ಚಮಲ್ ರಾಜಪಕ್ಸ ಅವರ ಪುತ್ರ ಶಶೀಂದ್ರ ಅವರನ್ನು ಭ್ರಷ್ಟಾಚಾರ ನಿಗ್ರಹ ಆಯೋಗ ಬಂಧಿಸಿ ಕೊಲಂಬೊ ಚೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರುಪಡಿಸಿದೆ. ನ್ಯಾಯಾಲಯವು ಆಗಸ್ಟ್ 19ರವರೆಗೂ ಕಸ್ಟಡಿಗೆ ನೀಡಿದೆ.


ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಗಮ ಸಂಚಾರ ಕಲ್ಪಿಸದಿದ್ದರೆ ಶುಲ್ಕ ಬೇಡ

ಕೊಚ್ಚಿ: ಹೆದ್ದಾರಿಗಳಲ್ಲಿ ತಡೆರಹಿತ, ಸುರಕ್ಷಿತ, ಸುಗಮ ಸಂಚಾರ ಕಲ್ಪಿಸುವಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಅಥವಾ ಅದರ ಏಜೆಂಟ್‌ಗಳು ವಿಫಲವಾದರೆ ಅಂತಹ ರಸ್ತೆಗಳಲ್ಲಿ ಸಾರ್ವಜನಿಕರಿಂದ ಬಳಕೆದಾರರ ಶುಲ್ಕ ಅಥವಾ ಟೋಲ್ ಸಂಗ್ರಹಿಸುವಂತಿಲ್ಲ ಎಂದು ಕೇರಳ ಹೈಕೋರ್ಟ್ ಹೇಳಿದೆ.

ಈ ಕುರಿತು ಸಲ್ಲಿಕೆಯಾಗಿರುವ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ. ಮುಹಮ್ಮದ್ ಮುಸ್ತಾಕ್ ಮತ್ತು ಹರಿಶಂಕರ್ ವಿ. ಮೆನನ್ ಅವರನ್ನು ಒಳಗೊಂಡ ವಿಭಾಗೀಯ ಪೀಠವು, ಎಡಪಲ್ಲಿ–ಮನ್ನುತಿ ನಡುವಿನ ರಾಷ್ಟ್ರೀಯ ಹೆದ್ದಾರಿ–544 ಅಲ್ಲಿ ಟೋಲ್ ಸಂಗ್ರಹವನ್ನು ಅಮಾನತಿನಲ್ಲಿಟ್ಟು ಮಧ್ಯಂತರ ತೀರ್ಪು ನೀಡಿತು. ಈ ಮಾರ್ಗದಲ್ಲಿ 4 ವಾರಗಳವರೆಗೆ ಟೋಲ್ ಸಂಗ್ರಹವನ್ನು ಅಮಾನತಿನಲ್ಲಿ ಇಡುತ್ತಿದ್ದೇವೆ ಎಂದು ಪೀಠ ತೀರ್ಪಿನಲ್ಲಿ ತಿಳಿಸಿದೆ. ಹೆದ್ದಾರಿಯ ಈ ಭಾಗದಲ್ಲಿ ಕೆಳಸೇತುವೆ ಮತ್ತು ಮೇಲ್ಸೇತುವೆ, ಚರಂಡಿ ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. ಸರ್ವಿಸ್ ರಸ್ತೆಯ ನಿರ್ವಹಣೆ ಸರಿಯಿಲ್ಲ. ಇವೆಲ್ಲದರ ಕಾರಣ ಹೆದ್ದಾರಿಯಲ್ಲಿ ಸುಗಮ ಸಂಚಾರ ಸಾಧ್ಯವಾಗದೇ, ದಟ್ಟಣೆ ಹೆಚ್ಚಾಗಿದೆ. ಹೀಗಿದ್ದರೂ ಪ್ರಾಧಿಕಾರ ಟೋಲ್ ಸಂಗ್ರಹಿಸುತ್ತಿದ್ದು, ಅದಕ್ಕೆ ತಡೆ ನೀಡಬೇಕು ಎಂದು ಕೋರಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಕೆಯಾಗಿತ್ತು.

ಕೆನಡಾದಲ್ಲಿ ಅತಿ ಎತ್ತರದ ಶ್ರೀರಾಮನ ಪ್ರತಿಮೆ ಪ್ರತಿಷ್ಠಾಪನೆ

ಮಿಸ್ಸಿಸೌಗಾ: ಕೆನಡಾದ ಮಿಸ್ಸಿಸೌಗಾ ನಗರದಲ್ಲಿ 51 ಅಡಿ ಎತ್ತರದ ಶ್ರೀರಾಮನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಇದು, ನಗರದ ಹಿಂದೂ ಪಾರಂಪರಿಕ ಕೇಂದ್ರದಲ್ಲಿದ್ದು, ಉತ್ತರ ಅಮೆರಿಕ ಖಂಡದಲ್ಲಿ ಪ್ರತಿಷ್ಠಾಪಿಸಲಾದ ಅತಿ ಎತ್ತರದ ಶ್ರೀರಾಮನ ಪ್ರತಿಮೆ ಎನ್ನಲಾಗಿದೆ. ಪ್ರತಿಮೆಯ ಭಾಗಗಳನ್ನು ದೆಹಲಿಯಲ್ಲಿ ರೂಪಿಸಿ, ಕೆನಡಾದಲ್ಲಿ ಜೋಡಿಸಲಾಗಿದೆ. ನೂರಾರು ವರ್ಷಗಳವರೆಗೆ ಯಾವುದೇ ಹಾನಿಯಾಗದಂತೆ ಉಕ್ಕಿನ ಚೌಕಟ್ಟನ್ನು ಹಾಕಲಾಗಿದ್ದು, ಗಂಟೆಗೆ ಸುಮಾರು 200 ಕಿ.ಮೀ ವೇಗದಲ್ಲಿ ಬೀಸುವ ಗಾಳಿಯನ್ನು ತಡೆದುಕೊಳ್ಳುವಷ್ಟು ಗುಣಮಟ್ಟದಲ್ಲಿ ಇದನ್ನು ನಿರ್ಮಿಸಲಾಗಿದೆ. ಈ ಮೂರ್ತಿ ಸ್ಥಾಪನೆಗೆ ಉತ್ತರಪ್ರದೇಶದ ಅಯೋಧ್ಯೆಯಲ್ಲಿರುವ ರಾಮಮಂದಿರವೇ ಸ್ಫೂರ್ತಿ ಎನ್ನಲಾಗಿದೆ. ಮೂರ್ತಿ ಪ್ರತಿಷ್ಠಾಪನೆ ಕಾರ್ಯ ಸುಮಾರು 4 ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಭಾರತ ಮೂಲದ ಕೆನಡಾ ಉದ್ಯಮಿಯೊಬ್ಬರು ಹಣಕಾಸಿನ ನೆರವು ನೀಡಿದ ಬಳಿಕ ಯೋಜನೆ ಆರಂಭವಾಗಿತ್ತು ಟೊರೊಂಟೊ ಪಿಯರ್ಸನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯುವ ವಿಮಾನಗಳಿಂದಲೇ ಪ್ರಯಾಣಿಕರು ಈ ಮೂರ್ತಿಯನ್ನು ವೀಕ್ಷಿಸಲು ಸಾಧ್ಯವಾಗುವಂತೆ ನಿರ್ಮಿಸಲಾಗಿದೆ.



ಮೈಸೂರು ಮಿತ್ರ ಗುರುವಾರ 7 ಆಗಸ್ಟ್ 2025

ನಿರಂತರ ಕಾಡಾನೆಗಳ ದಾಳಿ: ಕೃಷಿ ಫಸಲು ಧ್ವಂಸ



ಕಾಡಾನೆ ದಾಳಿಯಿಂದ ಫಸಲು ಧ್ವಂಸಗೊಂಡಿವೆ

ಸುಂಟಿಕೊಪ್ಪ,ಆ.6– ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ನಿವಾಸಿ ಹೊಸಮನೆ ಪೂವಯ್ಯ ಎಂಬವರ ತೋಟಕ್ಕೆ ನಿರಂತರವಾಗಿ ಕಾಡಾನೆಗಳು ದಾಳಿ ನಡೆಸಿ ಅಪಾರ ಬೆಳೆ ನಷ್ಟಪಡಿಸಿರುವ ಬಗ್ಗೆ ವರದಿಯಾಗಿದೆ. ಕಾಡಾನೆಗಳು ತೋಟಗಳಿಗೆ ಆಹಾರ ಅರಸಿ ಬಂದು ಕಾಫಿ, ಕರಿಮೆಣಸು, ಬಾಳೆ ಸಹಿತ ಕೃಷಿ ಫಸಲನ್ನು ಧ್ವಂಸಗೊಳಿಸಿವೆ.

ಅರಣ್ಯ ಇಲಾಖೆಗೆ ನಷ್ಟ ಪರಿಹಾರಕ್ಕಾಗಿ ಹಲವು ವರ್ಷಗಳಿಂದ ಮನವಿ ಸಲ್ಲಿಸಲಾಗುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಹೊಸಮನೆ ಪೂವಯ್ಯ ಅಳಲು ತೋಡಿಕೊಂಡಿದ್ದಾರೆ. ಈ ವ್ಯಾಪ್ತಿಯಲ್ಲಿ ಕಾಡಾನೆಗಳು ಮರಳಿ ಕಾಡಿಗೆ ಹಿಂತೆರಳದೆ ಸುತ್ತಮುತ್ತಲಿನ ತೋಟಗಳಲ್ಲಿ ಹಗಲಿನ ವೇಳೆಯಲ್ಲಿ ರಾಜಾರೋಷವಾಗಿ ಸಂಚರಿಸುತ್ತಿವೆ. ಇದರಿಂದ ತೋಟಗಳಲ್ಲಿ ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸಲು ಹಿಂದೇಟು ಹಾಕುವಂತಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ತೋಟಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳನ್ನು ಓಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮೇಕೇರಿ ಬಳಿ ಅಲ್ಪ ಪ್ರಮಾಣದಲ್ಲಿ ಭೂ ಕುಸಿತ

ಮಡಿಕೇರಿ,ಆ.6–ವಿರಾಜಪೇಟೆ ಸಂಪರ್ಕ ರಸ್ತೆಯ ಮೇಕೇರಿ ಬಳಿ ಅಲ್ಪ ಪ್ರಮಾಣದ ಭೂ ಕುಸಿತವಾ ಗಿದ್ದು, ಕಾಂಕ್ರೀಟ್ ರಸ್ತೆಗೆ ಸಂಚಕಾರ ಎದುರಾಗಿದೆ.

ನಿನ್ನೆ ಸುರಿದ ಮಳೆಯಿಂದ ಚರಂಡಿ ನೀರು ಕಾಂಕ್ರೀಟ್ ರಸ್ತೆಯ ಮೇಲೆ ಹರಿದು ಇಳಿ ಜಾರು ಪ್ರದೇಶದಲ್ಲಿರುವ ಕಾಫಿ ತೋಟಕ್ಕೆ ಮಳೆ ನೀರು ನುಗ್ಗಿದೆ. ಪರಿಣಾಮ ಕಡಿದಾದ ಕಾಫಿ ತೋಟದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಅಲ್ಪ ಪ್ರಮಾಣದ ಭೂ ಕುಸಿದಿದ್ದು, ಕಾಂಕ್ರೀಟ್ ರಸ್ತೆ ನಿರ್ಮಿಸುವ ಸಂದರ್ಭ ಅಳವಡಿಸಿದ್ದ ಎಂ. ಸ್ಯಾಂಡ್ ಚೀಲಗಳು ಕೊಚ್ಚಿ ಹೋಗಿವೆ.

ಮುಂದಿನ ದಿನಗಳಲ್ಲಿ ಮತ್ತೆ ಮಳೆಯಾದಲ್ಲಿ ಮಡಿಕೇರಿ–ವಿರಾಜಪೇಟೆ ಸಂಪರ್ಕ ರಸ್ತೆಗೆ ಸಂಚಕಾರ ಎದುರಾಗುವ ಎಲ್ಲಾ ಸಾಧ್ಯತೆಗಳು ಕಂಡು ಬಂದಿದೆ. ಮಾಹಿತಿ ಅರಿತ ಬಳಿಕ ಲೋಕೋಪಯೋಗಿ ಇಲಾಖೆ, ಮಡಿಕೇರಿ ಸಂಚಾರಿ ಪೊಲೀಸರು ಘಟನಾ ಸ್ಥಳದಲ್ಲಿ ಎಚ್ಚರಿಕೆಯ ರಿಬ್ಬನ್ ಗಳನ್ನು ಅಳವಡಿಸಿದ್ದಾರೆ.



ಮೇಕೇರಿ ಬಳಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದ್ದು, ಸಂಚಾರಿ ಪೊಲೀಸರು ಸ್ಥಳದಲ್ಲಿ ಎಚ್ಚರಿಕೆಯ ರಿಬ್ಬನ್‌ಗಳನ್ನು ಅಳವಡಿಸಿರುವುದು

ಪೊಲೀಸರ ಮೇಲೆ ಹಲ್ಲೆ: ಆರೋಪಿಗಳ ಖುಲಾಸೆ

ವಿರಾಜಪೇಟೆ, ಆ.6–ಸಮೀಪದ ಬೇಟೋಳಿ ಗ್ರಾಮದ ಚಿಟ್ಟಡೆಯಲ್ಲಿ ಕರ್ತವ್ಯನಿರತ ಪೊಲೀಸರ ಮೇಲೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಪ್ರಿನ್ಸಿಪಲ್ ನ್ಯಾಯಾಧೀಶರಾದ ಪ್ರದೀಪ್ ಪೋತೆದಾರ್ 26 ಮಂದಿ ಆರೋಪಿಗಳನ್ನು ಖುಲಾಸೆಗೊಳಿಸಿ ಆದೇಶಿಸಿದ್ದಾರೆ

2010ರ ಏ.12ರಂದು ಜೀಪಿನಲ್ಲಿ ಕರ್ತವ್ಯದ ಮೇಲೆ ತೆರಳಿದ್ದಾಗ ವೈ.ಇ.ರಫೀಕ್ ನೇತೃತ್ವದಲ್ಲಿ 26 ಮಂದಿ ಪೊಲೀಸ್ ಜೀಪನ್ನು ಅಡ್ಡಗಟ್ಟಿ ಕರ್ತವ್ಯದಲ್ಲಿದ್ದ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಡಿ.ವಿ.ಕಾರ್ಯಪ್ಪ ಮತ್ತು ಜೊತೆಯಲ್ಲಿದ್ದ 8 ಪೊಲೀಸರ ಮೇಲೆ ಹಲ್ಲೆ ನಡೆಸಿ ಪೊಲೀಸ್ ಜೀಪನ್ನು ಜಖಂಗೊಳಿಸಿದ್ದರು.

ಪ್ರಕರಣದ ಸಂಬಂಧ ಆರೋಪಿಗಳ ಪತ್ತೆ ಕಾರ್ಯಕ್ಕೆ ತೆರಳಿದ ಸಂದರ್ಭದಲ್ಲಿ ಚಿಟ್ಟಡೆ ಗ್ರಾಮಸ್ಥರಾದ ವೈ.ಇ.ರಫೀಕ್ ಹಾಗೂ ಇತರೆ 25 ವ್ಯಕ್ತಿಗಳು ಹಲ್ಲೆ ನಡೆಸಿದ್ದರ ಬಗ್ಗೆ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡಿದ್ದರು. ಆರೋಪಿಗಳ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಗಳ ವಿರುದ್ಧ ಸಾಕ್ಷ್ಯಾಧಾರವನ್ನು ಸಾಬೀತುಪಡಿಸುವಲ್ಲಿ ಪೊಲೀಸರು ವಿಫಲವಾಗಿದ್ದಾರೆ ಎಂದು ತೀರ್ಮಾನಿಸಿ ಆರೋಪಿಗಳನ್ನು ಬಿಡುಗಡೆಗೊಳಿಸಿದೆ. ಆರೋಪಿಗಳ ಪರವಾಗಿ ವಕೀಲ ಡಿ.ಸಿ.ಧ್ರುವ ವಕಾಲತ್ತು ವಹಿಸಿದ್ದರು.

ಇಂದು ಐಪಣಿರ ಆಯಿಮೆ ಪಿಞ್ಞಕಳಿ ಪೈಪೋಟಿ

ಮಡಿಕೇರಿ ಆ.6–ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಬಿದ್ದಾಟಂಡ ಕುಟುಂಬ, ನಾಲ್‌ನಾಡ್ ಪ್ಲಾಂಟರ್ಸ್ ಕ್ಲಬ್ ಅಸೋಸಿಯೇಷನ್ ಮತ್ತು ಕೊಡವ ಸಮಾಜ ಕಲ್ಚರಲ್ ಆಂಡ್ ಸ್ಪೋರ್ಟ್ಸ್ ಅಸೋಸಿಯೇಷನ್ ಇವರ ಸಹಯೋಗದಲ್ಲಿ ಆ.7ರ ಬೆಳಗ್ಗೆ 10 ಗಂಟೆಯಿಂದ ನಾಪೋಕ್ಲುವಿನ ಬಿದ್ದಾಟಂಡ ಬುಟ್ಟಿಯಾಕ ಗದ್ದೆಯಲ್ಲಿ 'ಐಪಣಿರ ಆಯಿಮೆ ಪಿಞ್ಞಕಳಿ ಪೈಪೋಟಿ' ಕಾರ್ಯಕ್ರಮ ನಡೆಯಲಿದೆ.

ಅಧ್ಯಕ್ಷತೆಯನ್ನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಅಜ್ಜಿನಿ ಕಂಡ ಸಿ.ಮಹೇಶ್ ನಾಚಯ್ಯ ವಹಿಸಲಿದ್ದಾರೆ. ಶಾಸಕ ಎ.ಎಸ್. ಪೊನ್ನಣ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು, ಸಚಿವ ಚೆಲುವರಾಯ ಸ್ವಾಮಿ, ಶಾಸಕ ಡಾ.ಮಂತರ್ ಗೌಡ ನಾಪೋಕ್ಲು ಗ್ರಾಪಂ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಕೆ.ಡಿ.ಪಿ ನಿರ್ದೇಶಕ ಬಾಚಮ್ಮಂಡ ಲವ ಚಿಣ್ಣಪ್ಪ, ನಿವೃತ್ತ ನಬಾರ್ಡ್ ಸಹಾಯಕ ಪ್ರಧಾನ ವ್ಯವಸ್ಥಾಪಕ ಮುಂಡಂಡ ಸಿ. ನಾಣಯ್ಯ, ಕಾಫಿ ಪ್ಲಾಂಟರ್ ಬಿದ್ದಾಟಂಡ ಜೀವನ್ ತಿಮ್ಮಯ್ಯ, ಬಿದ್ದಾಟಂಡ ಕುಟುಂಬದ ಅಧ್ಯಕ್ಷ ಬಿದ್ದಾಟಂಡ ಕಾರ್ಯಪ್ಪ, ಅಕಾಡೆಮಿ ಮಾಜಿ ಅಧ್ಯಕ್ಷ ಬಿದ್ದಾಟಂಡ ಎಸ್.ತಮ್ಮಯ್ಯ, ವಿಎಸ್‌ಎಸ್‌ಎನ್ ಬ್ಯಾಂಕ್ ಅಧ್ಯಕ್ಷ ಕೇಟೋಳಿರ ಹರೀಶ್, ಬಲ್ಲಮಾವಟಿ ಗ್ರಾಪಂ ಮಾಜಿ ಅಧ್ಯಕ್ಷ ಮುಕ್ಕಾಟಿರ ಸುತನ್ ಸುಬ್ಬಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಕಲಿಯಂಡ ಸಂಪನ್ ಸೋಮಣ್ಣ, ಮಾಜಿ ಸದಸ್ಯ ಕುಡಿಯರ ಮುತ್ತಪ್ಪ ಭಾಗವಹಿಸಲಿದ್ದಾರೆ.

ಕೊಡಗಲ್ಲಿ ರವಿಯ ದರ್ಶನ: ಜನತೆಯಲ್ಲಿ ಹರ್ಷದ ವಾತಾವರಣ

ಮಡಿಕೇರಿ: ಸದಾ ಮಳೆಯ ಹಾವಳಿಯಿಂದ ಬಳಲುತ್ತಿದ್ದ ಜಿಲ್ಲೆಯ ಜನತೆ ಇಂದು ರವಿಯ ದರ್ಶನದಿಂದ ಹರ್ಷಗೊಂಡಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಬುಧವಾರ ಮತ್ತು ಗುರುವಾರ ಜಿಲ್ಲೆಯಲ್ಲಿ 'ಆರೆಂಜ್ ಅಲರ್ಟ್' ಘೋಷಿಸಿದ್ದರೂ ಬುಧವಾರ ನಿರೀಕ್ಷಿತ ಮಳೆಯಾಗಿಲ್ಲ. ಬದಲಾಗಿ ಎಲ್ಲೆಡೆ ಬಿಸಿಲಿನ ವಾತಾವರಣ ಕಂಡು ಬಂದಿತು.

2 ದಿನಗಳಿಂದ ಬಿಸಿಲಿನ ವಾತಾವರಣದ ನಡುವೆಯೇ ಆಶ್ಲೇಷ ಮಳೆಯ ಆತಂಕದ ಮೋಡ ಜಿಲ್ಲೆಯಲ್ಲಿದೆ. 2018ರಿಂದ ಸತತ 3 ವರ್ಷಗಳ ಕಾಲ ಆಗಸ್ಟ್ ತಿಂಗಳಲ್ಲಿ ಆರ್ಭಟಿಸಿದ್ದ ಆಶ್ಲೇಷ ಮಳೆಯಿಂದ ಉಂಟಾಗಿದ್ದ ಭಾರಿ ಪ್ರಾಕೃತಿಕ ವಿಕೋಪದಿಂದಾಗಿ ಕೊಡಗು ಜಿಲ್ಲೆ ಆಶ್ಲೇಷ ಮಳೆ ಹೆಸರು ಕೇಳಿ ದರೆ ಹೌಹಾರುತ್ತದೆ. ಈ ನಡುವೆಯೇ ಭಾರಿ ಮಳೆಯಾಗುವ ನಿರೀಕ್ಷೆಯಲ್ಲಿ ಅಂಗನವಾಡಿ, ಶಾಲೆ, ಪದವಿಪೂರ್ವ ಕಾಲೇಜುಗಳಿಗೆ ರಜೆ ನೀಡಿದ್ದು, ಇದೀಗ ಸಾಮಾಜಿಕ ಜಾಲ ತಾಣಗಳಲ್ಲಿ ಪರ ವಿರೋಧ ಚರ್ಚೆಗೆ ಎಡೆಮಾಡಿದೆ. ಮಳೆ ಕ್ಷೀಣಿಸಿರುವ ಹಿನ್ನೆಲೆಯಲ್ಲಿ ಈ ಹಿಂದೆ ಸುರಿದ ಗಾಳಿ ಮಳೆಗೆ ಹಾನಿಗೆ ಒಳಗಾಗಿದ್ದ ವಿದ್ಯುತ್ ಮಾರ್ಗಗಳ ದುರಸ್ಥಿ ಕಾರ್ಯವೂ ಸುಗಮವಾಗಿ ಸಾಗಿದೆ. ಜಿಲ್ಲೆಯ ಬಹುತೇಕ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆ ಮರು ಸ್ಥಾಪನೆ ಮಾಡಲಾಗಿದೆ.

ಮಳೆ ವಿವರ : ಕಳೆದ 24 ಗಂಟೆ ಅವಧಿಯಲ್ಲಿ ಜಿಲ್ಲೆಗೆ ಸರಾಸರಿ 15.87 ಮಿ.ಮೀ ಮಳೆಯಾಗಿದೆ. ತಾಲೂಕಿಗೆ 26.35, ವಿರಾಜಪೇಟೆ 10.95, ಪೊನ್ನಂಪೇಟೆ 8.48, ಸೋ.ಪೇಟೆ 23.55, ಕುಶಾಲನಗರ ತಾಲೂಕಿಗೆ 10 ಮಿ.ಮೀ ಮಳೆಯಾಗಿದೆ.

ಕಾಳಜಿ ಕೇಂದ್ರಕ್ಕೆ ಶಾಸಕ ಡಾ.ಮಂತರ್ ಗೌಡ ಭೇಟಿ



ಸಂತ್ರಸ್ತರ ಕಾಳಜಿ ಕೇಂದ್ರಕ್ಕೆ ಶಾಸಕ ಡಾ. ಮಂತರ್ ಗೌಡ ಭೇಟಿ ನೀಡಿ ಸಾಂತ್ವನ ಹೇಳಿದರು

ಸುಂಟಿಕೊಪ್ಪ: ಗರಗಂದೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತರ ಕಾಳಜಿ ಕೇಂದ್ರಕ್ಕೆ ಶಾಸಕ ಡಾ. ಮಂತರ್ ಗೌಡ ಭೇಟಿ ನೀಡಿದ್ದರು. ಮಳೆ ಹಾನಿ ಸಂತ್ರಸ್ತರ ಅಹವಾಲು ಆಲಿಸಿ ಸಾಂತ್ವನ ಹೇಳಿ, ಸಂತ್ರಸ್ತರು ಭಯಪಡುವ ಅಗತ್ಯವಿಲ್ಲ; ಗ್ರಾಮ ಪಂಚಾಯಿತಿ, ಜನಪ್ರತಿನಿಧಿಗಳು ನಿಮ್ಮ ಜೊತೆಗಿದ್ದಾರೆ ಎಂದು ಧೈರ್ಯ ತುಂಬಿದರು. ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಹರದೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭೋಜಮ್ಮ, ಉಪಾಧ್ಯಕ್ಷ ಮುಸ್ತಫಾ, ಇಓ ಪರಮೇಶ್ವರ್ ಇತರರು ಹಾಜರಿದ್ದರು.

ದೆಹಲಿ ಸ್ವಾತಂತ್ರೋತ್ಸವಕ್ಕೆ ರಾಯಭಾರಿಯಾಗಿ ಯಶಸ್ವಿ ರೈ ಆಯ್ಕೆ



ದೆಹಲಿ ಸ್ವಾತಂತ್ರೋತ್ಸವಕ್ಕೆ ರಾಯಭಾರಿಯಾಗಿ ಆಯ್ಕೆಯಾಗಿರುವ ಯಶಸ್ವಿ ರೈ ಅವರನ್ನು ಕಾಂತೂರು ಗ್ರಾಮ ಪಂಚಾಯತಿ ಸನ್ಮಾನಿಸಿತು.

ನಾಪೋಕ್ಲು: ದೆಹಲಿಯಲ್ಲಿ ನಡೆಯುವ ಸ್ವಾತಂತ್ರೋತ್ಸವಕ್ಕೆ ರಾಯಭಾರಿಯಾಗಿ ಯಶಸ್ವಿ ರೈ ಅವರು ಆಯ್ಕೆಯಾಗಿದ್ದಾರೆ.

ಯಶಸ್ವಿ ರೈ ಅವರನ್ನು ಕಾಂತೂರು ಗ್ರಾಮ ಪಂಚಾಯತಿ ವತಿಯಿಂದ ಸನ್ಮಾನಿಸಿ ಶುಭ ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಪಂಚಾಯತಿ ಅಧ್ಯಕ್ಷ ಕುಶನ್ ರೈ, ಉಪಾಧ್ಯಕ್ಷೆ ರೇಖಾ.ಬಿ.ಎಸ್, ಪಿಡಿಓ ಚಂದ್ರಮೌಳಿ, ಸದಸ್ಯರಾದ ವಿಜು ತಿಮ್ಮಯ, ಸೌಮ್ಯ ಸತೀಶ್, ರೀತಾ ಸುದರ್ಶನ್, ಸುಮಾ ಸುಂದರಿ, ಪುಷ್ಪ, ದಿವ್ಯ ಮಿತ್ತೂರ್, ಯಶ್ವಿನ್, ರಘು. ಹೀರ ಸುಬ್ಬಯ್ಯ ಶೃತಿ, ಲತ, ಶರ್ಮಿಳಾ, ಮೀನಾಕ್ಷಿ ದೇವಯ್ಯ ಮತ್ತು ಸಿಬ್ಬಂದಿಗಳಾದ ನಿರೂಪ, ಶಶಿ, ಲಿಖಿತ, ಕೋಮಲ, ದಿನೇಶ ಮತ್ತು ತಾಯಿ ಜಯಂತಿ ರೈ ಹಾಜರಿದ್ದರು.

ಯಶಸ್ವಿ ರೈ ಬಾಡಗ ಗ್ರಾಮದ ನಿವಾಸಿ ಜಯಂತಿ.ಬಿ.ಬಿ ಮತ್ತು ಲವಕುಮಾರ್ ದಂಪತಿಗಳ ದ್ವಿತೀಯ ಪುತ್ರ

ಜಿಲ್ಲಾ ಹಗ್ಗ ಜಗ್ಗಾಟ ಸ್ಪರ್ಧೆ

ನಾಪೋಕ್ಲು: ಇಲ್ಲಿನ ಹಿಂದೂ ಮಲಯಾಳಿ ಸಂಘದ ವತಿಯಿಂದ ಹಿಂದು ಬಾಂಧವರಿಗಾಗಿ ಜಿಲ್ಲಾಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆಯನ್ನು ಆ.17 ರಂದು ಸಮೀಪದ ಹಳೆ ತಾಲೂಕಿನ ಜಿಎಂಪಿ ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ನಾಪೋಕ್ಲು ಸಂಘದ ಅಧ್ಯಕ್ಷ ಕೆ.ಕೆ.ಅನಿಲ್ ಹೇಳಿದರು.

ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್, ನಾಪೋಕ್ಲು ಪೊಲೀಸ್ ಠಾಣೆಯ ಠಾಣಾಧಿಕಾರಿ ರಾಘವೇಂದ್ರ, ಶ್ರೀ ಪೊನ್ನು ಮುತ್ತಪ್ಪ ದೇವಾಲಯದ ಅಧ್ಯಕ್ಷ ಎ.ಕೆ.ಚಂದ್ರ, ಕಾಫಿ ಬೆಳೆಗಾರರಾದ ಅಪ್ಪಚೆಟ್ಟೋಳಂಡ ನವೀನ್ ಅಪ್ಪಯ್ಯ, ಚೀಯಕಪೂವಂಡ ಎಸ್. ಮಂಜುನಾಥ್ (ಕಟ್ಟಿ)ಹಾಗೂ ವಕೀಲ ಕೋಡಿಮಣಿಯಂಡ ಕುಟ್ಟಪ್ಪ ಉಪಸ್ಥಿತರಿರುವರು.

ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗೆ ಯೋಜನೆ

ಕಾರ್ಮಿಕ ಸಚಿವ ಸಂತೋಷ್ ಲಾಡ್



ಕಾರ್ಮಿಕ ಸಚಿವ ಸಂತೋಷ್ ಲಾಡ್ ಜಿಲ್ಲೆಯ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಿ ಮಾತನಾಡಿದರು

ಚಾಮರಾಜನಗರ, ಆ.6– ವಿವಿಧ ಅಸಂಘಟಿತ ವಲಯದ ಕಾರ್ಮಿಕರ ಅಭಿವೃದ್ಧಿಗೆ ಪೂರಕವಾಗಿ ರಾಜ್ಯಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ತಿಳಿಸಿದರು.

ತಾಲೂಕಿನ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿಂದು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ರಾಜ್ಯ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿ, ಸಾರಿಗೆ ಇಲಾಖೆ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 'ಶ್ರಮಿಕ ತಾತ್ಕಾಲಿಕ ವಸತಿ ಸಮುಚ್ಚಯಗಳ ಉದ್ಘಾಟನೆ ಹಾಗೂ ಜಿಲ್ಲೆಯ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಅರಿವು ಕಾರ್ಯಕ್ರಮ'ವನ್ನು ಉದ್ಘಾಟಿಸಿ ಅಸಂಘಟಿತ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಸರ್ಕಾರದ ನೂತನ ಯೋಜನೆಗಳ ಬಗ್ಗೆ ಅಸಂಘಟಿತ ಕಾರ್ಮಿಕರು ಹೆಚ್ಚಿನ ಅರಿವು ಹೊಂದಬೇಕು ಎಂದರು.

ಜೀವನೋಪಾಯಕ್ಕಾಗಿ ಇತರೆಡೆಯಿಂದ ವಲಸೆ ಬರುವ ಕಾರ್ಮಿಕರ ಅನುಕೂಲಕ್ಕಾಗಿ ವಸತಿ ಸಮುಚ್ಚಯಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ನಿರ್ಮಿಸಲಾಗುತ್ತಿದೆ. ಈಗಾಗಲೇ 10 ಜಿಲ್ಲೆಗಳಲ್ಲಿ ತಾತ್ಕಾಲಿಕ ವಸತಿ ಸಮುಚ್ಚಯಗಳನ್ನು ತೆರೆಯಲಾಗಿದ್ದು, ಸಮುಚ್ಚಯದಲ್ಲಿ ಎಲ್ಲಾ ಮೂಲ ಸೌಕರ್ಯದೊಂದಿಗೆ 7 ಸಾವಿರ ಜನ ಉಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಜೋಮ್ಯಾಟೋ, ಸ್ವಿಗ್ಗಿ, ಅಮೇಜಾನ್ ನಂತಹ ಸಂಸ್ಥೆಗಳಲ್ಲಿ ದುಡಿಯುತ್ತಿರುವವರಿಗೆ ನೆರವಾಗಲು ಗಿಗ್ ಬಿಲ್ (ಮಸೂದೆ), ಸಿನಿಮಾ ಪರದೆಯ ಹಿಂದೆ ಕೆಲಸ ಮಾಡುವ ಮೇಕಪ್ ಕಲಾವಿದರು, ಕ್ಯಾಮೆರಾಮನ್‌ಗಳು, ಸಹಾಯಕ ನೃತ್ಯಗಾರರಿಗೆ ಅನುಕೂಲ ಕಲ್ಪಿಸಲು ಸಿನಿ ಬಿಲ್ (ಮಸೂದೆ) ಹಾಗೂ ಬಸ್, ಆಟೋ ಚಾಲಕರು, ಕ್ಲೀನರ್, ಮೆಕಾನಿಕ್‌ಗಳು ಸೇರಿದಂತೆ ಇತರರ ಕಲ್ಯಾಣಕ್ಕಾಗಿ ಸಾರಿಗೆ ಬಿಲ್ (ಮಸೂದೆ)ಗಳು ಪೂರಕವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ ಜಿಲ್ಲೆಯಲ್ಲಿ ಕೈಗಾರಿಕೆಗಳು ಆರಂಭವಾಗಿ 11 ವರ್ಷಗಳಾಗಿವೆ. ಶಿಕ್ಷಣ ದಷ್ಟೇ ಉದ್ಯೋಗಕ್ಕೂ ಆದ್ಯತೆ ನೀಡುವ ಸಲುವಾಗಿ ಜಿಲ್ಲೆಯ 1460 ಎಕರೆ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಇತ್ತೀಚೆಗೆ ಜಿಲ್ಲೆಯಲ್ಲಿ ಕೈಗಾರಿಕೆ ಕ್ಷೇತ್ರ ಅಭಿವೃದ್ಧಿಯತ್ತ ಸಾಗುತ್ತಿದೆ. ಕೈಗಾರಿಕೆಗಳಲ್ಲಿ ಸ್ಥಳೀಯವಾಗಿ 10 ಸಾವಿರ ಜನರಿಗೆ ಉದ್ಯೋಗ ದೊರಕಿದೆ ಎಂದರು.

ಶಾಸಕಎಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಾದರಿಯಲ್ಲಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರ ಚಿಂತನೆ ನಡೆಸಿದೆ ಎಂದು ತಿಳಿಸಿದರು.

ಲಿಡ್ಕರ್ ಸಂಸ್ಥೆಯ ಅಧ್ಯಕ್ಷ ಮುಂಡರಗಿ ನಾಗರಾಜು, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಬದನಗುಪ್ಪೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲೇಶ್, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸದಸ್ಯರಾದ ಎಚ್.ಜಿ. ರಮೇಶ್, ಕೆ.ಪಿ.ಜಾನಿ, ಬಸಪ್ಪ, ಕಾರ್ಮಿಕ ಇಲಾಖೆ ಆಯುಕ್ತ ಡಾ.ಎಚ್.ಎನ್. ಗೋಪಾಲಕೃಷ್ಣ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿ ಜಂಟಿ ಕಾರ್ಯದರ್ಶಿ ಡಾ.ಎಸ್.ಬಿ. ರವಿಕುಮಾರ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಿ.ಭಾರತಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತಾ ಇನ್ನಿತರರು ಉಪಸ್ಥಿತರಿದ್ದರು.

ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಉದ್ಯೋಗ ನೀಡಲು ಬದ್ಧ : ಸಂತೋಷ್‌ಲಾಡ್

ಚಾಮರಾಜನಗರ: ಕೋವಿಡ್ ಸಂದರ್ಭದಲ್ಲಿ ನಗರದ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟವರ ಕುಟುಂಬದ ಓರ್ವ ಸದಸ್ಯರಿಗೆ ಸರ್ಕಾರಿ ನೌಕರಿ ಉದ್ಯೋಗ ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್‌ಲಾಡ್ ಭರವಸೆ ನೀಡಿದರು.

ಆಕ್ಸಿಜನ್ ಸಂತ್ರಸ್ತರಿಗೆ ಉದ್ಯೋಗ ನೀಡುವಲ್ಲಿ ವಿಳಂಬವಾಗಿರುವುದಕ್ಕೆ ನಾನು ಕ್ಷಮೆ ಕೇಳುತ್ತೇನೆ. ಇಡೀ ದೇಶದಲ್ಲಿ ಕೊರೋನಾದಿಂದ 40 ಲಕ್ಷ ಜನ ಸತ್ತಿದ್ದರು. ಆದರೆ, ಬಿಜೆಪಿ ಸರ್ಕಾರ ಕೇವಲ 4ಲಕ್ಷ ಅಂತ ಸುಳ್ಳು ಹೇಳಿದ್ದರು ಕೋವಿಡ್ ವ್ಯಾಕ್ಸಿನೇಷನ್ ಸರ್ಟಿಫಿಕೇಟ್ ಮೇಲೆ ಮೋದಿ ಫೋಟೊ ಹಾಕಿದ್ದರು. ಈಗ ಅದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದರಿಂದ ಮೋದಿ ಅವರ ಫೋಟೋವನ್ನು ತೆಗೆದು ಹಾಕು ತ್ತಿದ್ದಾರೆ. ಇವರ ರೀತಿ ಎಲ್ಲೆಡೆ ಪ್ರಚಾರ ಮಾಡಿಕೊಳ್ಳುವ ಅಭ್ಯಾಸ ಕಾಂಗ್ರೆಸ್‌ನವರಿಗೆ ಇಲ್ಲ ಎಂದು ಕಿಡಿಕಾರಿದರು.

ಟ್ರಂಪ್ ಕಂಡ್ರೆ ಮೋದಿಗೆ ಭಯ: ಆಪರೇಷನ್ ಸಿಂಧೂರ್ ವಿಚಾರವಾಗಿ ಟ್ರಂಪ್ ನಾನು ಮಧ್ಯಸ್ಥಿಕೆ ವಹಿಸಿ ಭಾರತ ಹಾಗೂ ಪಾಕಿಸ್ತಾನ ನಡುವಿನ ಯುದ್ಧವನ್ನು ನಿಲ್ಲಿಸಿದೆ ಎಂದು ಹೇಳುತ್ತಿದ್ದಾರೆ. ಆದರೆ, ಈ ಬಗ್ಗೆ ಪ್ರಧಾನಿಯವರು ಯಾಕೆ ಮಾತನಾಡುತ್ತಿಲ್ಲ. ಅವರನ್ನು ಕಂಡರೆ ಮೋದಿ ಅವರಿಗೆ ಭಯನಾ ಎಂದು ಕೇಳಿದರು.

ಪ್ರತಿದಿನ ಮೋದಿ ಖರ್ಚೆಷ್ಟು?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರತಿದಿನದ ಕಾಫಿ ಟೀ ಖರ್ಚು 11ಲಕ್ಷ ರೂ. ಆಗುತ್ತಿದೆ. ಇದರಿಂದ ರಾಜ್ಯದ ಬೊಕ್ಕಸ ಖಾಲಿ ಆಗಿ ಸಾರಿಗೆ ನೌಕರರಿಗೆ ನೀಡಲು ಹಣ ಇಲ್ಲ ಎಂದು ಬಿಜೆಪಿ ನಾಯಕರು ಮಾಡುತ್ತಿರುವ ಆರೋಪವನ್ನು ಖಂಡಿಸಿದ ಅವರು, ನಿಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿದಿನ ಎಷ್ಟು ಖರ್ಚು ಮಾಡುತ್ತಿದ್ದಾರೆ ಅಂತ ಮೊದಲು ಬಹಿರಂಗಪಡಿಸಿ ಎಂದು ವಾಗ್ದಾಳಿ ನಡೆಸಿದರು.

ಮಹದೇವಪ್ರಸಾದ್ ಅಭಿವೃದ್ಧಿ ಹರಿಕಾರ

ಚಾಮರಾಜನಗರ: ಜನಸೇವೆಯೇ ತಮ್ಮ ಉಸಿರು ಎಂದುಕೊಂಡಿದ್ದ ದಿ. ಎಚ್.ಎಸ್. ಮಹದೇವಪ್ರಸಾದ್ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ಜಿಲ್ಲೆಯ ಪ್ರಗತಿಯ ಕನಸು ಕಟ್ಟಿಕೊಂಡು ಯೋಜನೆಗಳನ್ನು ರೂಪಿಸಿದ್ದ ಅಭಿವೃದ್ಧಿಯ ಹರಿಕಾರರು ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ತಿಳಿಸಿದರು.

ತಾಲೂಕಿನ ಹರವೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಎಚ್.ಎಸ್.ಮಹದೇವ ಪ್ರಸಾದ್ ಅವರ ಅಭಿಮಾನಿಗಳ ಬಳಗ, ಆರವಿಂದ್ ಕಣ್ಣಾಸ್ಪತ್ರೆಯ ಸಹಯೋಗದಲ್ಲಿ ಅವರ 67ನೇ ವರ್ಷದ ಜನ್ಮ ದಿನದ ಅಂಗವಾಗಿ ನಡೆದ ಕಣ್ಣಿನ ಉಚಿತ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸತತವಾಗಿ ಗೆಲುವು ಸಾಧಿಸಿಕೊಂಡು ಬರುತ್ತಿದ್ದ ಮಹದೇವಪ್ರಸಾದ್ ರಾಜಕಾರಣದ ಜೊತೆಗೆ ಕ್ಷೇತ್ರದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದರು. ಜಿಲ್ಲೆಯ ಸರ್ವಾಗೀಣ ಅಭಿವೃದ್ಧಿ ಮಾಡುವ ಜೊತೆಗೆ ಬಡವರು, ರೈತಾಪಿವರ್ಗದವರು ಹಾಗೂ ಎಲ್ಲಾ ವರ್ಗದ ಜನರಿಗೆ ನ್ಯಾಯ ಕಲ್ಪಿಸಿಕೊಡಲು ಬದ್ದರಾಗಿದ್ದರು. ಅವರ ಪುತ್ರನಾಗಿ ಜನ ಸೇವೆ ಮಾಡಲು ಕ್ಷೇತ್ರದ ಮತದಾರರು ಆಶೀರ್ವಾದ ಮಾಡಿದ್ದಾರೆ. ಅವರ ಹಾದಿಯಲ್ಲಿ ಸಾಗಿ, ಕ್ಷೇತ್ರದ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ ಎಂದರು.

ಜಿಪಂ ಮಾಜಿ ಸದಸ್ಯ ಹಾಗೂ ಅಭಿಮಾನಿ ಬಳಗದ ಅಧ್ಯಕ್ಷ ಕೆರೆಹಳ್ಳಿ ನವೀನ್ ಮಾತನಾಡಿದರು.

ಶಸ್ತ್ರಚಿಕಿತ್ಸೆ : ಕಣ್ಣಿನ ಉಚಿತ ತಪಾಸಣೆ ಶಿಬಿರದಲ್ಲಿ ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆಯ ವೈದ್ಯರ ತಂಡ ವಿವಿಧ ಕಣ್ಣಿನ ತೊಂದರೆಯುಳ್ಳ 218 ಮಂದಿಯನ್ನು ಪರೀಕ್ಷೆ ಮಾಡಿ, ಕಣ್ಣಿನ ಪೊರೆಯುಳ್ಳ 86 ಮಂದಿಗೆ ಶಸ್ತ್ರಚಿಕಿತ್ಸೆಗಾಗಿ ಕೊಯಮತ್ತೂರಿನ ಅರವಿಂದ್ ಕಣ್ಣಾಸ್ಪತ್ರೆಗೆ ಕರೆದೊಯ್ದರು.

ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಮುಖಂಡ ಮುಕ್ಕಡಹಳ್ಳಿ ರವಿಕುಮಾರ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ರೇಖಾ, ಕೆ.ಎಲ್.ರವಿಕುಮಾರ್, ಉದಯ ಕುಮಾರ್, ಗುರುಬಸಪ್ಪ, ಇತರರಿದ್ದರು.



ಕಣ್ಣಿನ ಉಚಿತ ತಪಾಸಣಾ ಶಿಬಿರಕ್ಕೆ ಶಾಸಕ ಗಣೇಶ್‌ಪ್ರಸಾದ್ ಚಾಲನೆ ನೀಡಿದರು.

ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಹಣ ದುರುಪಯೋಗ ಪ್ರಕರಣ

8 ಮಂದಿ ಆರೋಪಿಗಳಿಗೆ ಜಾಮೀನು ನಿರಾಕರಣೆ

ಚಾಮರಾಜನಗರ, ಆ.6–ನಗರದಲ್ಲಿರುವ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘದಲ್ಲಿ ನಡೆದಿದೆ ಎನ್ನಲಾದ 1.92 ಕೋಟಿ ರೂ. ಹಣ ದುರುಪಯೋಗ ಪ್ರಕರಣದಲ್ಲಿ ಆರೋಪಕ್ಕೊಳಗಾಗಿರುವ 8 ಮಂದಿಗೆ ಜಾಮೀನು ನೀಡಲು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದೆ.

ಸಂಘದ ಪದಾಧಿಕಾರಿಗಳಾಗಿದ್ದ ಎಸ್. ಮಹದೇವಯ್ಯ, ಜಿ.ವಿ.ವೆಂಕಟೇಶ್, ಬಿ. ನಾಗರಾಜು, ಮಲ್ಲೇದೇವರು, ಕೆ.ಕಾಂತರಾಜು, ಕೆ. ನಾಗರಾಜು, ಪ್ರಕಾಶ್ ಮತ್ತು ಎ.ಎಸ್. ಮಲ್ಲಣ್ಣ ಅವರಿಗೆ ನ್ಯಾಯಾಲಯವು ಜಾಮೀನು ನೀಡಲು ನಿರಾಕರಿಸಿದೆ. 15 ದಿನಗಳ ಹಿಂದೆ ಮೂವರು ವಕೀಲರು, 8 ಆರೋಪಿಗಳಿಗೆ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಇವರ ಪರವಾಗಿ ವಾದಿಸಿದ್ದರು. ಜೊತೆಗೆ ದೂರು ದಾರ ಮಹೇಶ್ ಪರ ಸರ್ಕಾರಿ ವಕೀಲರು ವಾದಿಸಿದ್ದರು. 2 ಕಡೆಯವರ ವಾದವನ್ನು ಆಲಿಸಿದ ನ್ಯಾಯಾಧೀಶರಾದ ಪ್ರಭಾವತಿ ಅವರು ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ತಾಲೂಕು ಆದಿ ಕರ್ನಾಟಕ ಅಭಿವೃದ್ಧಿ ಸಂಘದ 23 ಪದಾಧಿಕಾರಿಗಳು ಹಣ ದುರುಪಯೋಗ ಮಾಡಿಕೊಂಡಿದ್ದು, ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಇದೇ ಸಂಘದ ಆಡಳಿತಾಧಿಕಾರಿಯೂ ಆಗಿರುವ ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಸೇರಿದಂತೆ 23 ಪದಾಧಿಕಾರಿಗಳು ಸಂಘದ 1,92,56,026 ರೂ.ಗಳನ್ನು ದುರುಪಯೋಗ ಮಾಡಿ ಕೊಂಡಿದ್ದಾರೆ. ಸಂಘಕ್ಕೆ ಅಪರಾಧಿಕ ನಂಬಿಕೆ ದ್ರೋಹ ಮತ್ತು ವಂಚನೆ ಮಾಡಿರುತ್ತಾರೆ ಎಂದರು.

ಬಳಿಕ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ದಂತೆ ಜಿಲ್ಲಾ ನೋಂದಣಾಧಿಕಾರಿಗಳು ಸಂಘದ ಅವ್ಯವಹಾರದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸಂಘದಲ್ಲಿ ಹಣ ದುರುಪಯೋಗ ನಡೆದಿರುವುದು ಕಂಡುಬಂದಿತ್ತು.

ಈ ಹಿನ್ನೆಲೆಯಲ್ಲಿ ನನ್ನನ್ನು ಸಂಘದ ಆಡಳಿತಾಧಿಕಾರಿ ನೇಮಿಸಲಾಗಿತ್ತು ಎಂದು ಪೊಲೀಸರಿಗೆ ನೀಡಿದ್ದ ದೂರಿನಲ್ಲಿ ಅವರು ತಿಳಿಸಿದ್ದರು.

ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಚಾಮರಾಜನಗರ: ತಾಲೂಕಿನ ಬದನಗುಪ್ಪೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ಅವಿರೋಧ ಆಯ್ಕೆ ನಡೆಯಿತು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಪಿ.ದೇವರಾಜ್ ನಾಮಪತ್ರ ಸಲ್ಲಿಸಿದರು. ಇವರ ವಿರುದ್ಧ ಯಾರೂ ಕೂಡ ನಾಮಪತ್ರ ಸಲ್ಲಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಇಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಸ್.ನಾಗೇಶ್ ಘೋಷಿಸಿದರು. ಅವಿರೋಧ ಆಯ್ಕೆ ಪ್ರಕ್ರಿಯೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶಕರಾದ ಜಿ.ನಂಜುಂಡಸ್ವಾಮಿ, ಸುಶೀಲಾ, ಗುರುಪಾದ ಸ್ವಾಮಿ, ಬಿ.ಆರ್.ಶಿವಕುಮಾರ್, ಪ್ರಕಾಶ್, ಬಿ.ಗುರುಸಿದ್ದಯ್ಯ, ಚಿಕ್ಕದಾಸ ನಾಯಕ ಪಾಲ್ಗೊಂಡರು. ಮೇಲ್ವಿಚಾರಕ ಟಿ.ಮಂಜು, ಪ್ರಭಾರ ಸಿಇಒ ಮಹದೇವಯ್ಯ, ರಶ್ಮಿ ಭಾಗವಹಿಸಿದರು.

10 ಲಕ್ಷ ರೂ. ಅನುದಾನ ಘೋಷಣೆ: ಸಹಕಾರ ಸಂಘಕ್ಕೆ 10ಲಕ್ಷ ರೂ. ಅನುದಾನ ನೀಡುವುದಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಘೋಷಣೆ ಮಾಡಿದರು. ಸಂಘದ ಕಚೇರಿಗೆ ಭೇಟಿ ನೀಡಿ ನೂತನ ಅಧ್ಯಕ್ಷ ಶಿವಕುಮಾರ್ ಮತ್ತು ಉಪಾಧ್ಯಕ್ಷ ಕೆ.ಪಿ.ದೇವರಾಜ್ ಅವರನ್ನು ಸನ್ಮಾನಿಸಿದರು.

ಬಿ.ಪಿ.ನಾಗರಾಜಮೂರ್ತಿ, ಡೇರಿ ಅಧ್ಯಕ್ಷ ಶಿವಮಾದಪ್ಪ, ಗಾಪಂ ಮಾಜಿ ಅಧ್ಯಕ್ಷ ಎಂ. ಕುಮಾರ್, ಸೊಸೈಟಿ ಮಾಜಿ ಅಧ್ಯಕ್ಷ ಮಹದೇವಪ್ಪ ಕೃಷ್ಣನಾಯಕ, ಗೋಪಾಲನಾಯಕ, ಮಹೇಶ್, ಮುತ್ತಿಗೆ ಗ್ರಾಮಸ್ಥರು ಭಾಗವಹಿಸಿದ್ದರು.

ಉಪವಿಭಾಗಾಧಿಕಾರಿ ಅಧಿಕಾರ ಸ್ವೀಕಾರ

ಕೊಳ್ಳೇಗಾಲ: ಉಪವಿಭಾಗಾಧಿಕಾರಿಯಾಗಿ ವರ್ಗಾವಣೆಯಾಗಿ ಬಂದಿರುವ ದಿನೇಶ್‌ಕುಮಾರ್ ಅಧಿಕಾರ ಸ್ವೀಕರಿಸಿದರು

ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಉಪವಿಭಾಗಾಧಿಕಾರಿ ಮಹೇಶ್‌ರವರಿಂದ ಅಧಿಕಾರ ವಹಿಸಿಕೊಂಡರು. ಸರ್ಕಾರ ಮುಂಬಡ್ತಿ ಹೊಂದಿದ ಮಹೇಶ್‌ರವರಿಗೆ ಯಾವುದೇ ಸ್ಥಳ ನಿಯೋಜನೆ ಮಾಡಿಲ್ಲ.



ಡ್ರಗ್ ವಿರುದ್ಧ ಪೊಲೀಸರ ಮುಂದುವರೆದ ಕಾರ್ಯಾಚರಣೆ



ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರ ನೇತೃತ್ವದಲ್ಲಿ ಬುಧವಾರ ರಾತ್ರಿ ತಪಾಸಣೆ ನಡೆಸುತ್ತಿರುವುದು.

ಮೈಸೂರು, ಆ.6(ಪಿಎಂ)– ನಗರದಲ್ಲಿ ಮಾದಕವಸ್ತು ತಯಾರಿಕ ಘಟಕ ಪತ್ತೆ ಬಳಿಕ ನಗರ ಪೊಲೀಸರು, ತಪಾಸಣೆ ಹಾಗೂ ಗಸ್ತು ಕಾರ್ಯಾಚರಣೆ ತೀವ್ರಗೊಳಿಸಿದ್ದು, ಬುಧವಾರ ರಾತ್ರಿಯೂ ವಿವಿಧೆಡೆ ಕಾರ್ಯಾಚರಣೆ ನಡೆಸಿದರು.

ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರ ನೇತೃತ್ವದಲ್ಲಿ ಉಪ ಪೊಲೀಸ್ ಆಯುಕ್ತರಾದ ಆರ್.ಎನ್.ಬಿಂದು ಮಣಿ, ಸುಂದರ್‌ರಾಜ್ ಸೇರಿದಂತೆ ಕಮಾಂಡೋ ಪಡೆ ಮತ್ತು ಇತರೆ ಪೊಲೀಸ್ ಅಧಿಕಾರ ಸಿಬ್ಬಂದಿಗಳೊಂದಿಗೆ ಕಾಲ್ನಡಿಗೆ ಮೂಲಕ ಗಸ್ತು ಮಾಡಿ ಅನುಮಾನಾಸ್ಪದ ವಾಹನಗಳು, ವ್ಯಕ್ತಿಗಳು ಮತ್ತು ಅಂಗಡಿಗಳನ್ನು ತಪಾಸಣೆ ನಡೆಸಲಾಯಿತು. ನಗರದ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯ ಪಾರ್ಕ್ ಮತ್ತು ನಿರ್ಜನ ಪ್ರದೇಶಗಳಲ್ಲಿ ಅನುಮಾನಾಸ್ಪದ ವ್ಯಕ್ತಿಗಳನ್ನು ತಪಾಸಣೆಗೊಳಪಡಿಸಲಾಯಿತು. ಅಲ್ಲದೆ, ನಗರದ ಪಿಜಿ ಮತ್ತು ಹಾಸ್ಟೆಲ್‌ಗಳಲ್ಲಿಯೂ ತಪಾಸಣೆ ಮಾಡಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
30x40 N/F
60x40 N/F
Roopanagar BOGADI
9742421313, 9945779947

ಮನೆ ಬಾಡಿಗೆಗೆ ಇದೆ
ಗ್ರೌಂಡ್ ಫ್ಲೋರ್, ಡಬಲ್ ಬೆಡ್ ರೂಂ RCC ಮನೆ, ಸೋಲಾರ್ ಸರಸ್ವತಿಪುರಂ, ಮೈಸೂರು.
Mob : 8197596089

FOR LEASE or RENT
30x40 Ground Floor 2bhk House For Lease Or Rent Near People For Animals, Bogadi Mysuru.
Mob : 9483931131

ಜಾದೂಗಾರ್ ಎಸ್.ಎನ್.ಗುರುಸ್ವಾಮಿ ಮೈಸೂರು ರವರಿಂದ ಗೌರಿಗಣೇಶ ಹಬ್ಬಕ್ಕೆ ಮ್ಯಾಜಿಕ್ ಷೋ ಮತ್ತು ಮಾತನಾಡುವ ಗೊಂಬೆ ಕಾರ್ಯಕ್ರಮ ಮಾಡಲಾಗುತ್ತದೆ ಹಾಗೂ ಕನ್ನಡ ರಾಜ್ಯೋತ್ಸವಕ್ಕೂ ಮಾಡಲಾಗುತ್ತದೆ.
ಸಂಪರ್ಕಿಸಿ: 9886818529, 9448553806

HOUSE FOR SALE
30 x 40 W/N Door 2bhk 8Years old Single Floor in Dattagalli Mysore Price 1.55cr final.
Broker Execuse
Mob : 9663166809

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ
53ನೇ ಉಚಿತ ಕುಡಿತ ಬಿಡಿಸುವ ಶಿಬಿರ ಆಗಸ್ಟ್ 17 ರಿಂದ 26ರ ವರೆಗೆ
88033 44999
97425 59999

Mysuru Retina Care
STAFF REQUIRED
1) O.T. Technician
2) Optometrist
7338369364, 0821-2543244
#22A, Sri Guru Krupam, 1st Floor, New Kantharaj Urs Road, Niveditha Nagar, Mysore, above Sri Veg Hote.

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

COMMERCIAL PROPERTY FOR SALE
East Facing 1500 Sq. Ft. Beside Rajkamal Talkies, Shivarampet Main Road, Mysore Old Building
Call 9844557784
Brokers Excuse

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ, ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಚಿನ್ನದ ದರ: 9300/-, 24CT
ಸಂಪರ್ಕಿಸಿ 91081 46123

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ : 10000 +ಇನ್ಸೆಂಟೀವ್.
ಸ್ಥಳ : ಚಾಮುಂಡಿಪುರಂ ಮತ್ತು ಎನ್ ಆರ್ ಮೊಹಲ್ಲಾ
Field Executive ಬೇಕಾಗಿದ್ದಾರೆ (ಸಂಬಳ 15000)
ಸ್ಥಳ; ಮಂಡ್ಯ ಹಾಸನ ಮತ್ತು ಮೈಸೂರು
Mob: 8150005111

SITE FOR SALE
40x40 N/W Corner @ Bannur Road, 2Kms, From Ring Road MUDA Approved. Ready For Construction PRICE : 3900/ sqft. NEGO.
Mob: 9380732412
9035395105, 9620579423

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

Fund ಆರ್ಡರ್ ತೆಗೆದುಕೊಳ್ಳುತ್ತೇವೆ
ಹೋಲ್‌ಸೇಲ್ ದರಗಳಲ್ಲಿ Estimate ಸಹ ಕೊಡುತ್ತೇವೆ. ಉಚಿತ ಡೆಲಿವರಿ ಲಭ್ಯವಿದೆ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ನಜರ್‌ಬಾದ್
Mob: 9739816440

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SITE FOR SALE
* 30x40 near S.K. Factory.
* 30x100 near Srirampura Ring Road, Kotehundi.
* 30x40 Duplex house for lease (only Veg.) Alanahalli
Shilpa, 9632474824

ಎಂ.ಸಿ.ಪಿ.ಸಿ.ಎಸ್.ಟಿ. ಕೆ.ಆರ್.ಎಸ್ ರಸ್ತೆ, ಮೈಸೂರು
ಇಲ್ಲಿ ಕಛೇರಿ ಮತ್ತು ಗೋದಾಮು ಬಾಡಿಗೆಗೆ ದೊರೆಯುತ್ತದೆ
ಗೋದಾಮು 1–3308 ಚದರಡಿ, ಗೋದಾಮು 2–3792 ಚದರಡಿ
ಗೋದಾಮು 4–3831 ಚದರಡಿ, ಗೋದಾಮು 5–3831 ಚದರಡಿ
ಗೋದಾಮು 6–3831 ಚದರಡಿ,
ಗೋದಾಮು 31–12000 ಚದರಡಿ
ಮೊದಲನೇ ಮಹಡಿ ಕಛೇರಿ – 1800 ಚದರಡಿ
Mob: 9845807364

Commercial Site For Sale
32x60, East, North South corner, APMC Market Road, V.V Nagar
Mandya : 8050031150

HOUSE FOR LEASE
2 BHK first floor house for lease in Teachers Layout, near JSS Public School. Rs. 15 Lakhs.
Mob: 9945211474

ಸಲೂನ್ ಹಾಗೂ ಯುನಿಸೆಕ್ಸ್ ಸಲೂನ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ರೂಮ್ ಅಂಡ್ ಊಟ, ತಿಂಡಿ ನಮ್ಮದು. ಬೇಕಾದಲ್ಲಿ ಸಂಪರ್ಕಿಸಿ. ಜಾಗ: ಮೈಸೂರು.
Mob: 8431468565

LEASE OR RENT (HOUSE)
2 BHK, 1st Floor, Sharadadevi Nagar, Mysore.
9448053926, 9449833926

ಅಂಗಡಿ ಮಳಿಗೆ ಬಾಡಿಗೆಗೆ ಇದೆ
ದಟ್ಟಗಳ್ಳಿ 3ನೇ ಹಂತ ಅಳತೆ 12x18.
Mob: 8197219099

ಬಂಧನ ಮ್ಯಾರೇಜಸ್
ವಧು ವರರನ್ನು ಹುಡುಕಲು ಸಹಾಯಬೇಕೆ ? ನಮಗೆ ಕರೆಮಾಡಿ.
6361740552, 9449408551

ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
ಬ್ಯಾಂಕ್, ಶೋರೂಂ, ಕಛೇರಿ, ಹೋಟೆಲ್ ವ್ಯಾಪಾರಕ್ಕೆ ಯೋಗ್ಯವಾದ ನೆಲ ಮಳಿಗೆ 800 ಚ,ಅಡಿ. ಸ್ಥಳ : ಗಣೇಶನ ದೇವಸ್ಥಾನದ ಎದುರು, ಹುಣಸೂರು ಮುಖ್ಯ ರಸ್ತೆ, ಹಿನಕಲ್ ಮೈಸೂರು
9844576436, 8073248125

FOR SALE
30x40 Sites In Bogadi Near Harsha Bar & Vijayanagar 4th stage
Mob: 8884133677

3 ದಿನಗಳ ಶಿರಡಿ ಪ್ರವಾಸ 29/8/25
3 ದಿನಗಳ ಪುರಿ ಪ್ರವಾಸ 15/8/25
4 ದಿನಗಳ ಕಾಶಿ ಪ್ರವಾಸ 29/8/25
9 ದಿನಗಳ ಅಯೋಧ್ಯಾ, ನೇಪಾಳ ಪ್ರವಾಸ 11/9/25
13 ದಿನಗಳ ಚಾರ್ ಧಾಮ್ ಪ್ರವಾಸ 11/9/25
ಸುವರ್ಣ ಯಾತ್ರಾ
9008381022, 6360146483

V-GUARD — 10 ವರ್ಷಗಳ ವ್ಯಾರಂಟಿ
Solar Water Heater SALES & SERVICE — BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

WANTED
Telecallers
Kannada. Tamil, Telugu
Male: No. 5
Female: No. 8
Receptionist: No. 2
Work from home also available.
Mob: 7829803426

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೆನ್ ವಸತಿ ಬಡಾವಣೆ (ವರುಣ), ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ. ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

FOR SALE
40x60, Sites, In Vijayanagar 4th stage
Mob: 7899214181

ಸೈಟ್ ಮಾರಾಟಕ್ಕಿದೆ
30x40 ವಿಜಯನಗರ 4ನೇ ಹಂತ ಹೊಂದಿಕೊಂಡಿರುವ ರೇಷ್ಮೆ ಲೇಔಟ್ ಮುಡಾ ಅಪ್ರೂವ್ಡ್ E/F ಸೈಟ್ 40feet ರೋಡ್‌ಗೆ ಇದೆ, ಬೆಲೆ 6000 per sqft
8884616461
7411356023

PRAKRUTHI PROPERTIES
FOR SALE
30x40@ 22 lakhs Near RT Nagar BSNL Lyt Sites Also Avl.
Residential & Commercial Plots in & around Mysore
Apartments @ Ramakrishna Nagar
20x30 New 2BHK House, As Per your Plan With Interiors @ Just 40 Lakh in Bogadi
95386 90359, 90359 90359

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ತಕ್ಷಣ ಬೇಕಾಗಿದ್ದಾರೆ
ತಾಂಡ್ಯ ಮತ್ತು ಅಡಕನಹಳ್ಳಿ ಏರಿಯಾದಲ್ಲಿ ಡೇಟಾ ಎಂಟ್ರಿ ಕೆಲಸ ಮಾಡಲು ಕಂಪ್ಯೂಟರ್ ಅನುಭವಯುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ
ಸಂಬಳ : S/Sup 28000/- and S/G 27.500/- ESI, PF, ಸೌಲಭ್ಯವಿದೆ.
9620667819 / 9620777819

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ವಯೋಮಿತಿ 45 ವರ್ಷದೊಳಗೆ
ಸಂಬಳ : 18000 (26Days)
ESI, PF, ಮತು ಊಟ, ತಿಂಡಿ ವಸತಿ ಸೌಲಭ್ಯವಿದೆ.
9620777819 / 9620667819

REQUIRED
2 Acres of Agricultural Land, Within 15 Kms of Mysore city. Must be attached to Tar road of Min 12 mtrs Properties near H D Kote Main Road Preferred
CONTACT 9741922004

SITE FOR SALE
MUDA Approved 30x40 In Bhairava enclave just 200 mtr from Gaddige road. Attached to Vijayanagara 4th stage. Just 2km from proposed cricket stadium. Price 4300 per sqft.
7975269652
8884616461

ಬೇಕಾಗಿದೆ
ಮುಳ್ಳೂರ್, ಗೋಪಾಲಪುರ, ಮಾವಿನಹಳ್ಳಿಯಲ್ಲಿ 2 ಎಕರೆ ಜಮೀನು ಜನರಲ್ ಪ್ರಾಪರ್ಟಿ ಆಗಿರಬೇಕು ಎಕರೆಗೆ 1 ಕೋಟಿ. ಬಜೆಟ್
7411356023
8073300783

English Teacher Wanted
* Candidates with B.Ed/D.Ed
* Minimum 2 Years Experiences
Place : Gundlupet
CONTACT 9739464498

ಛತ್ರ ಖಾಲಿ ಇದೆ
ಶ್ರೀವಿಠಲ ರುಕ್ಮಿಣಿ ಕನ್‌ವೆನ್‌ಷನ್ ಹಾಲ್. ಹುಣಸೂರು ರಸ್ತೆ. ಡಿಸೆಂಬರ್ 7 ರಿಂದ 8, 2025
CONTACT 9880048310

WANTED
ಅಡಕನಹಳ್ಳಿ ಇಂಡಸ್ಟ್ರಿಯಲ್ ಏರಿಯಾ ಕೆಲಸಗಾರರು ಬೇಕಾಗಿದ್ದಾರೆ(ನಂಜನಗೂಡು)
ಸಂಬಳ : 15,000/–
ಹೌಸ್‌ಕೀಪಿಂಗ್ ಪುರುಷರು ಅಥವಾ ಹುಡುಗರು, ಮೈಸೂರಿಗೆ ಬೇಕಾಗಿದ್ದಾರೆ.
8088716663
9353046663

SBIT TRAVELS
FIXED DEPARTURE
SINGAPORE 5N 6D — AUGUST 30th
BALI 5N 6D — SEPTEMBER 14th
VIETNAM 6N 7D — AUGUST 30TH
(Saraswathipuram, Mysuru)
9343524127

R.V. CONSTRUCTIONS
Rate starts from Rs. 1690 per sq.ft.
No advance
Billing on stage by stage completion.
Office: 7975110915
D. Subbaiah Road, Mysore
Assist Major Bank Loans

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ – 10 ನಂ.
ಸಂಬಳ: 600/– (ಪ್ರತಿ ದಿನಕ್ಕೆ), ಊಟವಿದೆ.
ಸಿಟಿ, ಮೇಟಗಳ್ಳಿ, ಹೆಬ್ಬಾಳು, ವಿಜಯನಗರ ಸುತ್ತಮುತ್ತ.
ಹೌಸ್‌ಕೀಪಿಂಗ್ – 5 ನಂ.
ಸಂಪರ್ಕಿಸಿ: (10 am to 6 pm)
9036745292, 9900749104

ಬಾಡಿಗೆಗೆ ಮತ್ತು ಭೋಗ್ಯಕ್ಕೆ ಇದೆ
ಒಂದು ಮಳಿಗೆ ಬಾಡಿಗೆಗೆ ಇದೆ ಇನ್ನೊಂದು ಭೋಗ್ಯಕ್ಕೆ ಇದೆ ಇನ್ನೊಂದು ಆಫೀಸ್ ಅಥವಾ ಗೊಡೌನ್‌ಗೆ ಇದೆ ಇರ್ವಿನ್ ರಸ್ತೆ, ಮೈಸೂರು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ ಮಾಲೀಕರು
Mob :9740785524

ಸಪ್ಲೆಯರ್ಸ್ ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಸಪ್ಲೆಯರ್ಸ್ ಬೇಕಾಗಿದ್ದಾರೆ.
9986669892
6362610799

CHANGE OF NAME
I, Laxman Iyer, son of Late Peruvamba Shivrama Parasuramier, aged about 56 years, No. 279, 'Annapurna', 11th Cross, 2nd Main, Vijayanagar Railway Layout, Metagalli, Mysuru – 570 017, absolutely renounce and abandon the use of my former name of "Peruvamba Laxman Parasuramier / Laxman Parasurama Iyer / P P Laxman / Laxman P Iyer" out of my own free will and desire. I have sworn through Notarised Affidavit dated 06-08-2025 before Notary, Adv. Geetha R., Reg. No. 5579, Mysuru. Henceforth, my name shall be identified and known as "LAXMAN IYER".
Sd/- Laxman Iyer

ಬೇಕಾಗಿದ್ದಾರೆ
ದೋಸೆ ಭಟ್ರು – (Dosa Chef), ವಾಷಿಂಗ್ & ಕ್ಲೀನಿಂಗ್ –2nd Shift, ಕೌಂಟರ್ – ಫುಡ್ ಪಾರ್ಸೆಲ್ ಪ್ಯಾಕಿಂಗ್, ಮೈಸೂರ್ ನಲ್ಲಿ ಕಾಳಿದಾಸ ರೋಡ್, ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಉತ್ತಮ ಕೆಲಸಗಾರರಿಗೆ ಅತ್ಯುತ್ತಮ ಸಂಬಳ ,ವಸತಿ ಮತ್ತು ESI ಕೊಡಲಾಗುವುದು.
7899028086

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಉತ್ತಮ ವೇತನ+ಪಿಎಫ್+ಇಎಸ್‌ಐ ಸೌಲಭ್ಯವಿರುತ್ತದೆ
ಸ್ಥಳ : ಜೆ.ಪಿ ನಗರ ಮೈಸೂರು, ಹೆಬ್ಬಾಳು ಕೈಗಾರಿಕ ನಗರ ಮತ್ತು ಹಿನಕಲ್
9945215899, 7829393555

ಬೇಕಾಗಿದ್ದಾರೆ
18 ರಿಂದ 25 ವಯಸ್ಸಿನ ಯುವಕರು ಮೈಸೂರಿನ ಯಾದವಗಿರಿಯಲ್ಲಿ ಕಾರ್ ವಾಷಿಂಗ್ ಮಾಡಲು ಬೇಕಾಗಿದ್ದಾರೆ
ಸಮಯ : ಬೆಳಿಗ್ಗೆ 6–30 ರಿಂದ 9–30 ರವರೆಗೆ
Mob : 8088833763

WANTED
TELECALLERS (FEMALE)
MARKETING EXECUTIVE (Any Degree pass or fail, two wheeler must)
DTP OPERATORS
Kannada & English Typist
Graphic Designers
Photoshop & Coreldraw.
9606975013, 7349057709

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು ಬೇಕಾಗಿದ್ದಾರೆ.
ಸಂಬಳ : 15000/-
Mob: 9902754149

WANTED
FOR DELIVARY ತಿಲಕ್‌ನಗರ ಮೈಸೂರು
JOB ROLE DELIVERY EXECUTIVE (DELIVERY BOY) ಸಂಬಳ: ಮಾಸಿಕ ಪಾವತಿ ಮತ್ತು ಪರ್ ಶಿಪ್‌ಮೆಂಟ್ ಪಾವತಿ 18000–25000 ರೂ + ಪೆಟ್ರೋಲ್ ಭತ್ಯೆ ಮೊಬೈಲ್ ರಿಚಾರ್ಜ್ ಮತ್ತು ESI+PF ಸೌಲಭ್ಯಗಳು. ಅಗತ್ಯ: ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
HURRY UP & JOIN TODAY
8073831098, 8618396811

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿ PVT.LIMITED A.W GROUP Of ಕಂಪನಿಗೆ ಗ್ರಾಮೀಣ + ನಗರದ 219 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾಹರ್ತೆ : SSLC, PUC ITI DIP ANY DEGREE ETC, ವಯೋಮಿತಿ : 18 TO 31 YEARS, ತಿಂಗಳಿಗೆ: 20500–25500 (ಉಚಿತ ಊಟ + ವಸತಿಯಿದೆ) FRESHERSಗಳಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ ಶ್ರೀವಿದ್ಯಾ
7090212014, 7349699460

ಪ್ರವಾಸ
ಚಾರ್ ಧಾಮ ಪ್ರವಾಸ – 11-09-2025
ನೇಪಾಳ ಕಾಶಿ ಮುಕ್ತಿನಾಥ – 04-10-2025
ಆಂಧ್ರ ಪ್ರವಾಸ – 27-10-2025
ಅಷ್ಟ ಜ್ಯೋತಿರ್ಲಿಂಗ ಪ್ರವಾಸ – 13-11-2025.
ಸಂಪರ್ಕಿಸಿ : ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು- 70
9342287551, 9482239855

SITE FOR SALE
30x40 SOUTH FACE HASIRU LAYOUT MYSORE
Mob : 9980047333

ಹೆಸರು ಬದಲಾವಣೆ
ಹೇಮಾವತಿ ಹೆಚ್.ಎಂ ಬಿನ್ ಲೇಟ್ ಮಂಜುನಾಥ್, ನಂ 271, ಸ್ಟೋರ್ ಬೀದಿ, ಹುಣಸೂರು ಟೌನ್, ಮೈಸೂರು ಜಿಲ್ಲೆ ಇಲ್ಲಿ ವಾಸವಿದ್ದು 'ವರ್ಷ' ಎಂಬ ಹೆಸರಿನಿಂದ 'ಹೇಮಾವತಿ ಹೆಚ್.ಎಂ' ಎಂಬುದಾಗಿ ನನ್ನ ಹೆಸರನ್ನು ನೋಟರಿ ಹೆಚ್. ದಿನೇಶ್ ರವರ ಸಮ್ಮುಖದಲ್ಲಿ ದಿನಾಂಕ 04-08-2025 ರಂದು ಹುಣಸೂರಿನಲ್ಲಿ ಬದಲಾಯಿಸಿಕೊಂಡಿರುತ್ತೇನೆ ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರಗಳನ್ನು 'ಹೇಮಾವತಿ ಹೆಚ್.ಎಂ' ಹೆಸರಿನಲ್ಲೇ ಮುಂದುವರೆಸಿಕೊಂಡು ಹೋಗುತ್ತೇನೆಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಹೇಮಾವತಿ ಹೆಚ್.ಎಂ

ಹೆಚ್,ಡಿ ಕೋಟೆ ಟೌನ್‌ನಲ್ಲಿ 40X100 ಸೈಟ್
Mob: 9844967934

ಪ್ರಮಾಣ ಪತ್ರ
ಮೈಸೂರು ಸಿಟಿ, ಹಂಚ್ಯಾ, ಬಿ.ಎಸ್.ಎನ್.ಎಲ್. ಲೇಔಟ್, 10ನೇ ಬ್ಲಾಕ್, 1ನೇ ಫ್ಲೋರ್, ಮನೆ ನಂ. 31ರಲ್ಲಿ ವಾಸವಾಗಿರುವ ಚಂದ್ರಕಾಂತ್ ಆರ್.ಕೆ. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಹೆಸರು ಚಂದ್ರಕಾಂತ್ ಆರ್.ಕೆ. ಎಂದು ನನ್ನ ಆಧಾರ್ ಕಾರ್ಡ್ (ನಂ. 3706 5721 8627), ಪಾನ್ ಕಾರ್ಡ್ ಮತ್ತು ಡ್ರೈವಿಂಗ್ ಲೈಸೆನ್ಸ್‌ನಲ್ಲಿ ನನ್ನ ಹೆಸರನ್ನು ಸರಿಯಾಗಿ ನಮೂದು ಮಾಡಿರುತ್ತಾರೆ. ಆದರೆ ನನ್ನ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನನ್ನ ಹೆಸರು ಚಂದ್ರಕಾಂತ್ ಆರ್.ಕೆ. ಎಂದು ನಮೂದು ಮಾಡುವ ಬದಲಿಗೆ ಚಂದ್ರಕಾಂತ ಆರ್.ಕೆ. ಎಂದು ತಪ್ಪಾಗಿ ನಮೂದಾಗಿರುತ್ತದೆ. ನೋಟರಿ ಸಿ.ಆರ್. ಸೀತಾರಾಮ್ ರವರು ಎದುರು ದಿನಾಂಕ 6-8-2025ರಂದು ಪ್ರಮಾಣೀಕರಿಸುವುದೇನೆಂದರೆ ಚಂದ್ರಕಾಂತ್ ಆರ್.ಕೆ. ಮತ್ತು ಚಂದ್ರಕಾಂತ ಆರ್.ಕೆ. ಒಂದೇ ಆಗಿದ್ದು, ನನಗೆ ಸಂಬಂಧಿಸಿದ ಹೆಸರಾಗಿದ್ದು, ನನಗೆ ಮಾತ್ರ ಅನ್ವಯವಾಗುತ್ತದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ಚಂದ್ರಕಾಂತ್ ಆರ್.ಕೆ.

CHANGE OF NAME
I, BALAKRISHNA T, S/o Thiraviam M, Residing at #628/K, Bannimantapa, B-Layout, Shivarathreeshwaranagar, Mysore -570015, have changed My Name BALAKRISHNA to BALAKRISHNA THIRAVIAM vide affidavit sworn before Notary Y M Kiran Mysore, Dated 06-AUG-2025
Sd/-BALAKRISHNA THIRAVIAM

ಕಳೆದಿದೆ
ಎಸ್.ಎಸ್ ರಮಾಬಾಯಿ, ಇ.ಡಬ್ಲ್ಯು.ಎಸ್. ನಂ.196, ನ್ಯೂ ಕಾಂತರಾಜು ಅರಸು ರಸ್ತೆ ಕುವೆಂಪುನಗರ ಮೈಸೂರು. ಅಕಸ್ಮಾತಾಗಿ ಈ ಮನೆಯ ಕೆಳಕಂಡ ದಾಖಲೆ ಪತ್ರಗಳು ಕಳೆದುಹೋಗಿವೆ
1) ಟೈಟಲ್ ಡೀಡ್, 2) ಸ್ವಾಧೀನ ಪತ್ರ,
3) ಮಂಜೂರಾತಿ ಪತ್ರ.
ಈ ಪತ್ರಗಳು ಸಿಕ್ಕಿದಲ್ಲಿ ಮೇಲ್ಕಂಡ ವಿಳಾಸಕ್ಕೆ ದಯವಿಟ್ಟು ತಲುಪಿಸಬೇಕಾಗಿ ವಿನಂತಿ.
Mob : 8088157068

ಹೊಸಮನೆ ಮಾರಾಟಕ್ಕಿದೆ
20X30 ಗ್ರೌಂಡ್ 1st ಫ್ಲೋರ್, ಟಾಪ್‌ನಲ್ಲಿ 1ರೂಂ (ಅಟಾಚ್ ಭಾತ್ ರೂಂ) ಒಟ್ಟು 15 ಚ.ಅಡಿ ಬಿಲ್ಡಿಂಗ್ Clear Document 75 ಲಕ್ಷ (NEGO)
ಸಂಪರ್ಕಿಸಿ
9591913785, 9880859168

ಹೊಸಮನೆ ಮಾರಾಟಕ್ಕಿದೆ
30X40, 3 ಮಹಡಿವುಳ್ಳ ಮನೆ, ತಿಂಗಳಿಗೆ 35000 ಸಾವಿರ ಬಾಡಿಗೆ ಬರುವಂತ ಮನೆ, 2 ಮನೆ – 2BHK, 2 ಮನೆ – 1BHK, 1ರೂಮ್ – MASTER BED ROOM ಇರುವ ಪೂರ್ವ ಮತ್ತು ಉತ್ತರ ಬಾಗಿಲುವುಳ್ಳ ಮನೆ GANESH NAGAR N. R.MOHALLA ST. ANNE'S SCHOOL NEAR
Mob : 9663944172

ಕೇರಳ ಪ್ರವಾಸ
ಒಟ್ಟು 04 ದಿನಗಳು ಹೊರಡುವ ದಿನಾಂಕ : 16,ಅಕ್ಟೋಬರ್–2025, ಅಲ್ಲಪಿ, ಕೋವಲಂ ಬೀಚ್, ಗುರುವಾಯೂರು, ಕೊಚ್ಚಿನ್ ಡಿ ಜೆ ಬೋಟ್, ಜಟಾಯು ಅರ್ಥ್ ಸೆಂಟರ್, ಅನಂತಪದ್ಮನಾಭ ದೇವಸ್ಥಾನ ಆತೀರಪಿಲ್ಲಿ ಜಲಪಾತ ಎಲಿಫೆಂಟ್ ಕ್ಯಾಂಪ್, ಊಟ ತಿಂಡಿ ಸೇರಿರುತ್ತದೆ ಪ್ರತ್ಯೇಕ ರೂಮುಗಳು ಎಲ್ಲಾ ಸೇರಿ ಒಬ್ಬರಿಗೆ 9000/- ರೂಗಳು ಮಾತ್ರ.
Mob : 7022271023

ಸೈಟು ಮಾರಾಟಕ್ಕಿದೆ
30x50 N/F KBL Silicon City Phase 2 Near BEML KRS Road
Mob :9243536373

SITE FOR SALE
950 sqft West Facing Vinayaka Garden City Phase 2 Sri rangapatna KRS Road Immediate Settlement Only
Mob : 7975219325

ಹೊಸ ಮನೆ ಮಾರಾಟಕ್ಕಿದೆ
20X30 3BHK ಡ್ಯೂಪ್ಲೆಕ್ಸ್ ಹೌಸ್ ಯುನಿವರ್ಸಿಟಿ ಲೇಔಟ್ ಮೈಸೂರು
Mob : 9739825766

ನಿವೇಶನಗಳು ಮಾರಾಟಕ್ಕಿವೆ
30X40 MUDA. ಪೂರ್ವದಿಕ್ಕು U.B ಸಿಟಿ ವಿಜಯನಗರ 4th ಸ್ಟೇಜ್ ಹತ್ತಿರ ಬೋಗಾದಿ ಪಟ್ಟಣ ಪಂಚಾಯಿತಿ ಹಿಂಭಾಗ
26X40 KNS CALISTO ಕೇಂಗೇರಿ ಹತ್ತಿರ, ಮೈಸೂರು. ಮಾಲೀಕರು
Mob : 7349273845

ALUMINIUM INTERIOR
Wood Interior, T.V Cabin, Kitchen, Wardrobe, Fal Ciling Work Solar Sales & Services
Mob : 8217368859

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ವಿ.ಶ್ರೀನಿವಾಸ ಪ್ರಸಾದ್ ವ್ಯಕ್ತಿತ್ವ ಸಮಾಜಕ್ಕೆ ಆದರ್ಶಪ್ರಾಯ

ಸ್ವಾಭಿಮಾನಿ ಸಂಪದ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ

ನಂಜನಗೂಡು, ಆ.6– ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ತಾವಾಗಿಯೇ ರಾಜಕೀಯಕ್ಕೆ ಬಂದವರಲ್ಲ ವಿದ್ಯಾರ್ಥಿ ದಿಸೆಯಲ್ಲಿ ಅವರಲ್ಲಿದ್ದ ನಾಯಕತ್ವ ಗುಣಗಳನ್ನು ಗುರ್ತಿಸಿ, ರಾಜಕೀಯ ಪಕ್ಷಗಳು ಅವರನ್ನು ಚುನಾವಣೆಗೆ ನಿಲ್ಲಿಸಿದವು. ರಾಜಕೀಯ ಕ್ಷೇತ್ರದಲ್ಲಿ ಅವರ ವ್ಯಕ್ತಿತ್ವ ಸಮಾಜಕ್ಕೆ ಆದರ್ಶಪ್ರಾಯ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಬುಧವಾರ ವಿ.ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ಆಯೋಜಿಸಿದ್ದ ಸ್ವಾಭಿಮಾನಿ ಸಂಪದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಭಾರತದ ಸಂವಿಧಾನ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದ ಶ್ರೀನಿವಾಸ ಪ್ರಸಾದ್ ಚುನಾಯಿತ ಜನಪ್ರತಿನಿಧಿಯಾಗಿ ಆಯ್ಕೆಯಾದ ಬಳಿಕ ತಮಗೆ ದೊರೆತ ಅಧಿಕಾರ ಬಳಸಿಕೊಂಡು ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ತಾವು ಪ್ರತಿನಿಧಿಸುವ ಕ್ಷೇತ್ರ ವ್ಯಾಪ್ತಿ ಕೋಮು– ಸೌಹಾರ್ದತೆ ಕಾಪಾಡಿಕೊಳ್ಳುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇನ್ನು ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ದಿಟ್ಟತನದಿಂದ ವಿರೋಧ ವ್ಯಕ್ತಪಡಿಸುವ ಮೂಲಕ ಆತ್ಮಗೌರವ ಕಾಪಾಡಿಕೊಂಡಿದ್ದರು. ತಮ್ಮ ಭಾಷಣದಲ್ಲಿ ತಮ್ಮ ಮನಸ್ಸಿನ ತುಡಿತವನ್ನು ಹೇಳಿಕೊಳ್ಳುತ್ತಿದ್ದ ಹಾಗೂ ಸಮಾಜಕ್ಕೆ ಸಂದೇಶ ನೀಡುವಂತಹ ಹೇಳಿಕೆಗಳನ್ನು ನೀಡುತ್ತಿದ್ದ ಸೂಕ್ಷ್ಮ ಸಂವೇದನೆಯ ರಾಜಕಾರಣಿ ಎಂದು ಹೇಳಿದರು.

ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರಿಗಿದ್ದ ಬದ್ಧತೆ ಇತರರಿಗೆ ಹೋಲಿಕೆ ಮಾಡಲಾಗುವುದಿಲ್ಲ. ತಮ್ಮ ರಾಜಕೀಯ ಜೀವನದಲ್ಲಿ ಎಂದೂ ಜಾತಿವಾದಿಯಾಗಿ ಗುರ್ತಿಸಿಕೊಂಡಿರಲಿಲ್ಲ. ಅಂಬೇಡ್ಕರ್ ವಾದದ ಬಗ್ಗೆ ಅಪಾರ ನಂಬಿಕೆ ಇತ್ತು. ಅಂಬೇಡ್ಕರ್ ವಾದ ಎಲ್ಲರನ್ನೂ ಪ್ರೀತಿ ಮಾಡು ಎಂದು ಹೇಳುತ್ತದೆ. ನಾನು ಗೃಹಮಂತ್ರಿಯಾಗಿದ್ದ ವೇಳೆ ನಡೆದ ಬದನವಾಳು ಸಂಘರ್ಷವನ್ನು ವಿ.ಶ್ರೀನಿವಾಸ ಪ್ರಸಾದ್ ನಾಯಕತ್ವ ಮತ್ತು ಸುತ್ತೂರು ಶ್ರೀಗಳ ಮಾರ್ಗದರ್ಶನದಿಂದ ನಿಯಂತ್ರಿಸಲು ಸಾಧ್ಯವಾಯಿತು ಎಂದು ನೆನಪು ಮಾಡಿಕೊಂಡ ಅವರು, ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗಲೆಲ್ಲಾ ಪ್ರಧಾನಿಯವರಿಗೂ ಕೂಡ ಮುಖಕ್ಕೆ ಹೊಡೆದಂತೆ ಮಾತನಾಡುವ ಧೈರ್ಯ ಪ್ರಸಾದ್ ಅವರಲ್ಲಿತ್ತು. ಪ್ರಸಾದ್ ಸಮಾಜದ ಎಲ್ಲಾ ವರ್ಗದ ಜನರನ್ನು ಒಳಗೊಂಡು ಕೆಲಸ ನಿರ್ವಹಿಸಿದ್ದರು. ದೀರ್ಘ ಕಾಲದ ಸಹವರ್ತಿಯಾಗಿರುವ ನಾನು ಈ ಹಿಂದೆ ತುರ್ತು ಪರಿಸ್ಥಿತಿ ಸಮಯದಲ್ಲಿ ಜೈಲಿನಲ್ಲಿದ್ದಾಗ ಭೇಟಿ ಮಾಡಿ ಧೈರ್ಯ ತುಂಬಿದ್ದರು. ಹೀಗಾಗಿ ಅವರಿಗೆ ನಾನು ತಾಯಿ ಸ್ಥಾನ ನೀಡಿದ್ದೇನೆ. ವಿ.ಶ್ರೀನಿವಾಸ ಪ್ರಸಾದ್ ಅವರ ಹೆಸರನ್ನು ಚಿರಸ್ಥಾಯಿಯಾಗಿಸುವ ಸಲುವಾಗಿ ಮೈಸೂರಿನ ಹೆಸರಾಂತ ಶಿಕ್ಷಣ ಸಂಸ್ಥೆಗೆ ಅವರ ಹೆಸರನ್ನಿಡುವ ಮೂಲಕ ಸದಾ ಕಾಲಕ್ಕೂ ಅವರ ಹೆಸರು ಜನಮಾನಸದಲ್ಲಿ ಉಳಿಯುವಂತೆ ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ವಿ.ಶ್ರೀನಿವಾಸ ಪ್ರಸಾದ್ ಅವರು ಭೌತಿಕವಾಗಿ ಮರೆಯಾಗಿದ್ದರೂ ಅವರ ಹೋರಾಟದ ಹಾದಿ ಹಾಗೂ ಚಿಂತನೆಗಳು ಸದಾ ಕಾಲ ನಮಗೆ ಮಾರ್ಗದರ್ಶನವಾಗಿದೆ ಎಂದರು.

ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಶ್ರೀನಿವಾಸ ಪ್ರಸಾದ್ ಅವರು ಪಕ್ಷಾಂತರ ಮಾಡಿದ್ದರೂ ತತ್ವಾಂತರಿಯಾಗಿರಲಿಲ್ಲ. ಅಂಬೇಡ್ಕರ್ ಅವರ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದ ರಾಜಕಾರಣಿ. ಅವರ ರಾಜಕೀಯ ಏಳು ಬೀಳು ಮಧ್ಯೆ ಬದ್ಧತೆಯ ಬದುಕನ್ನು ಅಳವಡಿಸಿಕೊಂಡಿದ್ದ ಸಂವೇದನಾಶೀಲ ರಾಜಕಾರಣಿಯಾಗಿದ್ದರು. ನಂಜನಗೂಡಿನ ರೈಲ್ವೆ ಮೇಲ್ಸೇತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರಿಟ್ಟಿರುವುದು ಸಂತಸದ ವಿಚಾರ ಎಂದರು.

ಇದೇ ವೇಳೆ ಮೂವರು ಪೌರ ಕಾರ್ಮಿಕರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಸಮಾರಂಭದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಸದಾನಂದ, ಶೈಲಾಬಾಲರಾಜು, ತಾಲೂಕು ಮಂಡಲ ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ನಗರ ಮಂಡಲ ಅಧ್ಯಕ್ಷ ಸಿದ್ದರಾಜು, ತಾಪಂ ಮಾಜಿ ಸದಸ್ಯ ಬಿ.ಎಸ್.ಮಹದೇವಪ್ಪ, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಹುಲ್ಲಹಳ್ಳಿ ಬಿಜೆಪಿ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಕಣೇನೂರು ಪರಶಿವಮೂರ್ತಿ, ಮುಖಂಡರಾದ ಯು.ಎನ್.ಪದ್ಮನಾಭರಾವ್, ಹೊರಳವಾಡಿ ಮಹೇಶ್, ಬಾಲಚಂದ್ರ, ವಳಗೆರೆ ಪುಟ್ಟಸ್ವಾಮಿ, ಹೆಮ್ಮರಗಾಲ ಸೋಮಣ್ಣ, ಹುರಚಂದ್ರು, ಕೃಷ್ಣಪ್ಪ, ಮಲ್ಲಿಕಾರ್ಜುನ, ಪ್ರಜ್ವಲ್ ಶಶಿ, ಅನಂತ್, ಮಲ್ಲುಂಡಿ ಪುಟ್ಟಸ್ವಾಮಿ, ನಗರಸಭಾ ಸದಸ್ಯ ಮಹದೇವ ಪ್ರಸಾದ್ ಸೇರಿದಂತೆ ಹಲವರಿದ್ದರು.



ಕಾರ್ಯಕ್ರಮವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಮಾಜಿ ಸಚಿವ ಶ್ರೀರಾಮುಲು, ಮಾಜಿ ಶಾಸಕ ಬಿ.ಹರ್ಷವರ್ಧನ್ ಇತರರಿದ್ದರು.

> ಜನರ ಬೆಂಬಲ ಹಾಗೂ ಅಭಿಮಾನದಿಂದ ವಿ.ಶ್ರೀನಿವಾಸ ಪ್ರಸಾದ್ ಓರ್ವ ಸಮರ್ಥ ನಾಯಕನಾಗಿ ರೂಪುಗೊಂಡರು. ಅದೇ ಮಾದರಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಅವರಿಗೆ ಬೆಂಬಲ ಹಾಗೂ ಅಭಿಮಾನ ತೋರುವ ಮೂಲಕ ರಾಜಕೀಯವಾಗಿ ಬೆಳೆಸಬೇಕು ಮತ್ತು ಶ್ರೀನಿವಾಸ ಪ್ರಸಾದ್ ಅವರ ಆಶಯಗಳು ಜಾರಿಗೊಳ್ಳಲು ನೆರವಾಗಬೇಕು. – **ಭಾಗ್ಯಲಕ್ಷ್ಮಿ ಶ್ರೀನಿವಾಸ ಪ್ರಸಾದ್, ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ಅಧ್ಯಕ್ಷೆ.**

ಸಿಎಂ ಪದವಿಯಿಂದ ಪ್ರಸಾದ್ ವಂಚಿತ: ಶ್ರೀರಾಮುಲು

ನಂಜನಗೂಡು: ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಸಾಮರ್ಥ್ಯವಿದ್ದರೂ, ಕೇವಲ ದಲಿತ ಎಂಬ ಕಾರಣಕ್ಕೆ ಅವರನ್ನು ಅವಕಾಶದಿಂದ ವಂಚಿಸಲಾಯಿತು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ವಿ.ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ಆಯೋಜಿಸಿದ್ದ ಸ್ವಾಭಿಮಾನಿ ಸಂಪದ ಕಾರ್ಯಕ್ರ ಮದಲ್ಲಿ ಮಾತನಾಡಿದ ಅವರು, ಶ್ರೀನಿವಾಸ ಪ್ರಸಾದ್ ತಮ್ಮ ಜೀವಿತಾವಧಿ ಯುದ್ದಕ್ಕೂ ತುಳಿತಕ್ಕೊಳಗಾದ ಜನರ ಧ್ವನಿಯಾಗಿ, ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿ ದ್ದರು. ಯಾವುದೇ ಪಕ್ಷಕ್ಕೆ ಹೋದರೂ ಅವರು ಪಕ್ಷದ ಆಸ್ತಿಯಾಗಿದ್ದರು. ಅವರು ಮೊದಲ ವರ್ಗದ ಸ್ಥಾನಮಾನ ಹೊಂದಿದ್ದ ಅಪರೂಪದ ರಾಜಕಾರಣಿ. ಸಮಾಜದ ಎಲ್ಲಾ ವರ್ಗದ ಜನರ ಹಿತಾಸಕ್ತಿಗೆ ಶ್ರಮಿಸಿದ ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಸಲುವಾಗಿ ಅವರ ಕುಟುಂಬಕ್ಕೆ ಹೆಚ್ಚಿನ ರಾಜಕೀಯ ಶಕ್ತಿ ಲಭ್ಯವಾಗುವಂತೆ ಪ್ರಸಾದ್ ಅವರ ಅಭಿಮಾನಿಗಳು ನೋಡಿಕೊಳ್ಳಬೇಕಿದೆ ಎಂದರು.

ಯುವಕನ ಅಕ್ರಮ ಬಂಧನ; ಹಣ ಪಡೆದು ಸುಳ್ಳು ಪ್ರಕರಣ ದಾಖಲು

ಹುಣಸೂರು ಗ್ರಾಮಾಂತರ ಠಾಣೆ ಹಿಂದಿನ ಇನ್ಸ್‌ಪೆಕ್ಟರ್ ರವಿ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ಸೂಚನೆ

ಹುಣಸೂರು, ಆ.6–ಯುವಕನನ್ನು ಅಕ್ರಮ ಬಂಧನದಲ್ಲಿಟ್ಟು ಆತನಿಂದ 40 ಸಾವಿರ ರೂ. ಹಣ ಪಡೆದು ಸುಳ್ಳು ಪ್ರಕರಣ ದಾಖಲಿಸಿದ ಆರೋಪದಡಿ ಹುಣಸೂರು ಗ್ರಾಮಾಂತರ ಠಾಣೆಯ ಹಿಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಸಿ.ವಿ.ರವಿ ವಿರುದ್ಧ ಎಫ್‌ಐಆರ್ ದಾಖಲಿಸಿ ವರದಿ ಸಲ್ಲಿಸುವಂತೆ ಹುಣಸೂರು ಟೌನ್ ಪೊಲೀಸರಿಗೆ ಹುಣಸೂರು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಅನಿತಾ ಅವರು ಆದೇಶ ನೀಡಿದ್ದಾರೆ.

ಹುಣಸೂರು ತಾಲೂಕು ಕಡೇಮನುಗನಹಳ್ಳಿ ಗ್ರಾಮದ ಅಶೋಕ್ ಎಂಬ ಯುವಕನನ್ನು 2023ರ ಆ.9ರಿಂದ 12 ರವರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಸಿ.ವಿ.ರವಿ ಪೊಲೀಸ್ ಠಾಣೆಯಲ್ಲಿ ಅಕ್ರಮ ಬಂಧನದಲ್ಲಿ ಇರಿಸಿದ್ದರು. ಆತನನ್ನು ಬೆದರಿಸಿ 40 ಸಾವಿರ ರೂ. ಪಡೆದ ನಂತರ ಯುವಕನ ವಿರುದ್ಧ ಸುಳ್ಳು ಎಫ್‌ಐಆರ್ ದಾಖಲಿಸಿ ಠಾಣೆಯ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ನ್ಯಾಯಾಲಯದಲ್ಲಿ ಖಾಸಗಿ ಪ್ರಕರಣ ದಾಖಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರು ಸರ್ಕಲ್ ಇನ್ಸ್‌ಪೆಕ್ಟರ್ ಸಿ.ವಿ.ರವಿ ಮತ್ತಿತರರ ವಿರುದ್ಧ ಐಪಿಸಿ ಸೆಕ್ಷನ್ 343 ಮತ್ತು 383ರಡಿ ಎಫ್‌ಐಆರ್ ದಾಖಲಿಸಿ, ವರದಿಯನ್ನು ಸೆ.15ರೊಳಗೆ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಿ, ಪ್ರಕರಣ ಮುಂದೂಡಿದ್ದಾರೆ.

ಕುಡಿತದ ದಾಸ್ಯಕ್ಕೆ ಒಳಗಾಗಿದ್ದ ವ್ಯಕ್ತಿ ಸಾವು

ನಂಜನಗೂಡು, ಆ.6– ಕುಡಿತದ ಚಟಕ್ಕೆ ಒಳಗಾಗಿದ್ದ ವ್ಯಕ್ತಿ ರಕ್ತ ವಾಂತಿ ಮಾಡಿಕೊಂಡು ಸಾವನ್ನಪ್ಪಿರುವ ಘಟನೆ ನಗರದ ಗೌರಿಘಟ್ಟದ ಬೀದಿಯ ಭಾವಸಾರ್ ಕಲ್ಯಾಣ ಮಂಟಪದ ಬಳಿ ಜರುಗಿದೆ.

ನಗರದ ಚಾಮಲಾಪುರ ಬಡಾವಣೆಯ ಕರೀಗೌಡ (48) ಸಾವನ್ನಪ್ಪಿದವರು. ಕುಡಿತದ ದಾಸ್ಯಕ್ಕೆ ಒಳಗಾಗಿದ್ದ ಈತ ಊಟ, ತಿಂಡಿ ಸೇವಿಸದೆ ಖಾಲಿ ಹೊಟ್ಟೆಯಲ್ಲಿ ಮದ್ಯ ಸೇವಿಸಿ ಮಾನಸಿಕವಾಗಿ ಅಸ್ವಸ್ಥಗೊಂಡಿದ್ದ. ಸೋಮವಾರ ಮನೆಯಿಂದ ಹೊರ ಬಂದಿದ್ದ ಕರೀಗೌಡ ನಗರದ ಗೌರಿಘಟ್ಟದ ಬೀದಿಯಲ್ಲಿ ರಕ್ತವಂತಿ ಮಾಡಿಕೊಂಡು ಸಾವಿಗೀಡಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಕ್ರಮ ಮದ್ಯ ಮಾರಾಟ ನಿಯಂತ್ರಣಕ್ಕೆ ಒತ್ತಾಯ: ನಗರದ ಗೌರಿಘಟ್ಟ ಬೀದಿಯಲ್ಲಿ ನಿವಾಸಿಯೊಬ್ಬರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಮದ್ಯ ತೆಗೆದುಕೊಳ್ಳಲು ಬರುವ ವ್ಯಕ್ತಿಗಳು ಕುಡಿದು ನಿವಾಸಿಗಳ ಮನೆ ಮುಂದೆ ಮೂತ್ರ ವಿಸರ್ಜನೆ ಮಾಡಿ, ವಾಂತಿ ಮಾಡಿಕೊಂಡು ಧಾಂದಲೆ ನಡೆಸುತ್ತಿದ್ದಾರೆ. ಅಕ್ರಮ ಮದ್ಯ ಮಾರಾಟದಿಂದಾಗಿ ಮದ್ಯ ತೆಗೆದುಕೊಳ್ಳಲು ಬರುವ ವ್ಯಕ್ತಿಗಳು ಬಿದ್ದು ಸಾವಿಗೀಡಾಗುತ್ತಿದ್ದಾರೆ. ಈ ಬೀದಿಯಲ್ಲಿ ಒಂದೇ ವರ್ಷದಲ್ಲಿ ಮೂರನೇ ಸಾವು ಜರುಗಿದೆ. ಅಕ್ರಮ ಮದ್ಯ ಮಾರಾಟದ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್, ಅಬಕಾರಿ ಇಲಾಖೆ ಅಧಿಕಾರಿಗಳಿಗೆ ನಿವಾಸಿಗಳು ಲಿಖಿತ ದೂರು ನೀಡಿ ಒತ್ತಾಯಿಸಿದರೂ ಅಧಿಕಾರಿಗಳು ಹಣದ ಆಸೆಗೆ ಬಿದ್ದು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ಆರೋಪಿಸಿದರು.

ಕೂಡಲೇ ಅಕ್ರಮ ಮದ್ಯ ಮಾರಾಟ ನಿಯಂತ್ರಣ ಮಾಡದಿದ್ದಲ್ಲಿ ನಿವಾಸಿಗಳು ಉಗ್ರ ಪ್ರತಿಭಟನೆ ರೂಪಿಸುವುದಾಗಿ ಎಚ್ಚರಿಸಿದರು.

ಉದ್ಬೂರು ಕಾಲೋನಿಯಲ್ಲಿ ಡೇರಿ ಉದ್ಘಾಟನೆ

ಹೈನುಗಾರಿಕೆಯಿಂದ ರೈತರ ಬದುಕು ಹಸನು: ಮೈಮುಲ್ ನಿರ್ದೇಶಕ ಈರೇಗೌಡ

ಹೆಚ್.ಡಿ.ಕೋಟೆ, ಆ.6– ಹೈನುಗಾರಿಕೆಯಿಂದ ರೈತರ ಬದುಕು ಹಸನಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮೈಮುಲ್ ನಿರ್ದೇಶಕ ಈರೇಗೌಡ ತಿಳಿಸಿದರು.

ತಾಲೂಕಿನ ಉದ್ಬೂರು ಕಾಲೋನಿಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ನಿರ್ಮಾಣವಾಗಿದ್ದು, ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದರು.

ರೈತರ ಬದುಕಿನ ಜೀವನಾಡಿಯಾಗಿರುವ ಸಹಕಾರ ಕ್ಷೇತ್ರ ಕಾಮಧೇನು ರೀತಿ ಕಾರ್ಯ ನಿರ್ವಹಿಸುತ್ತಿದ್ದು, ಸಹಕಾರಿ ಕ್ಷೇತ್ರದಿಂದ ಸಿಗುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ಹಿಂದೆ ತಾಲೂಕಿನಲ್ಲಿ 20 ಡೈರಿಗಳಿದ್ದವು. ಪ್ರಸ್ತುತ 180 ಹಾಲು ಉತ್ಪಾದಕರ ಸಹಕಾರ ಸಂಘ, 30 ಬಿಎಂಸಿ ಕೇಂದ್ರಗಳಿದ್ದು, 120 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಒಕ್ಕೂಟದ ಪ್ರಗತಿಗೆ ಸಹಕರಿಸಬೇಕು ಎಂದರು.

ಒಕ್ಕೂಟದಿಂದ ಹಾಲು ಉತ್ಪಾದಕರು ಹಾಗೂ ಹಸುಗಳಿಗೆ ವಿಮೆ, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ, ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ವಿದ್ಯಾರ್ಥಿ ನಿಲಯ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

ಈ ವೇಳೆ ಸಂಘದ ಅಧ್ಯಕ್ಷ ಕೆ.ಎನ್.ನಾಗೇಶ್, ಉಪಾಧ್ಯಕ್ಷ ಗಿರಿನಾಯಕ, ವಿಸ್ತರಣಾಧಿಕಾರಿಗಳಾದ ಆರೀಫ್ ಇಕ್ಬಾಲ್, ಜಯಂತ್ ಕುಮಾರ್, ನಿರ್ದೇಶಕರಾದ ಮಂಜುನಾಯಕ, ಚೌಡನಾಯಕ, ಷಣ್ಮುಗಂ, ಮಾಲೇನಾಯಕ, ಕೃಷ್ಣೇಗೌಡ, ಚಂದ್ರಶೇಖರ, ಹರೀಶ್, ಜ್ಯೋತಿ, ಚಂದ್ರಮ್ಮ, ಕಾರ್ಯದರ್ಶಿ ಭವ್ಯ, ಮುಖಂಡರಾದ ಜಯಲಕ್ಷ್ಮಿ, ಬೆಟ್ಟೇಗೌಡ, ನರಸಿಂಹಮೂರ್ತಿ, ಗಣೇಶ, ಮಾಲೇಗೌಡ, ಅಂಬರೀಶ, ದಿನೇಶ, ವೆಂಕಟೇಶ ಹಾಜರಿದ್ದರು.



ನೂತನ ಡೈರಿಯನ್ನು ಮೈಮುಲ್ ನಿರ್ದೇಶಕ ಈರೇಗೌಡ ಉದ್ಘಾಟಿಸಿದರು.

ರಾಷ್ಟ್ರ ಮಟ್ಟಕ್ಕೆ ಆಯ್ಕೆ




ಸರಗೂರು ಪಟ್ಟಣದ ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ 14 ವರ್ಷದೊಳಗಿನ ಬಾಲಕರ ಹ್ಯಾಂಡ್ ಬಾಲ್ ತಂಡ ಮಹಾರಾಷ್ಟ್ರದಲ್ಲಿ ನಡೆದ CBSE ದಕ್ಷಿಣ ವಲಯ –II ಹ್ಯಾಂಡ್ ಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ.

ಪ್ರಕೃತಿ ಚಿಕಿತ್ಸಾ, ಯೋಗ ಕೇಂದ್ರ ಉದ್ಘಾಟನೆ



ಸಾಲಿಗ್ರಾಮದ ಗಾಂಧಿ ವೃತ್ತದಲ್ಲಿ ನೂತನ ಆದಿಶಕ್ತಿ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ಕೇಂದ್ರವನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಪ್ರಕಾಶ್, ದೇವಿಕಾ, ಸದಸ್ಯರಾದ ಲೋಕೇಶ್, ಹರೀಶ್, ಗಂಗಾಧರ್, ಶಕೀಲ್ ಸೇರಿದಂತೆ ಇತರರಿದ್ದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣಗೆ ಸನ್ಮಾನ



ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಅವರನ್ನು ತಿ.ನರಸೀಪುರ ಪುರಸಭೆ ಸದಸ್ಯ ಎಸ್.ಕೆ.ಕಿರಣ್ ಸನ್ಮಾನಿಸಿದರು. ಈ ವೇಳೆ ನಿಕಟಪೂರ್ವ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರಾಧ್ಯಕ್ಷ ಶಿವಕುಮಾರ್, ಡಾ.ರೇವಣ್ಣ, ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಜಿಲ್ಲಾ ಕಾರ್ಯದರ್ಶಿ ಬನ್ನೂರು ರಾಮಚಂದ್ರ, ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ ಪಟೇಲ್, ಎಸ್‌ಎಂಆರ್ ಪ್ರಕಾಶ್, ಅಕ್ಕಿ ನಂಜುಂಡಸ್ವಾಮಿ, ಎನ್.ಲೋಕೇಶ್, ಸಿದ್ದರಾಜು, ನಿಲಸೋಗೆ ಬಸವರಾಜು, ಕರೋಹಟ್ಟಿ ರಾಜಶೇಖರ, ಸೋಮಶೇಖರ್, ಪ್ರಭು, ರಮೇಶ್, ನಾಗರಾಜು ಸೇರಿದಂತೆ ಮತ್ತಿತರರಿದ್ದರು.

ಗ್ರಾಮಗಳ ರಸ್ತೆ ಹಂತ ಹಂತವಾಗಿ ಅಭಿವೃದ್ಧಿ: ಜಿಡಿಹೆಚ್

ಹುಣಸೂರು, ಆ.6– ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮಗಳ ರಸ್ತೆಯನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ ನೀಡಿದರು.

ತಾಲೂಕಿನ ಹೆಮ್ಮಿಗೆ ಗ್ರಾಮದಲ್ಲಿ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ 4 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಶಕ್ತಿ ಮೀರಿ ಅಭಿವೃದ್ಧಿ ಕೆಲಸಗಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಿಸುತ್ತಿದ್ದೇನೆ. ಆ ಮೂಲಕ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಹೆಮ್ಮಿಗೆ ಹಾಡಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಅಂಗನವಾಡಿ ನಿರ್ಮಿಸಲಾಗುವುದು. ಗ್ರಾಮದ ಎಲ್ಲಾ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗುವುದು ಎಂದರು. ಇದೇ ವೇಳೆ ಗ್ರಾಮಸ್ಥರು ಗ್ರಾಮದ ಹಲವು ಅಭಿವೃದ್ಧಿಗೆ ನೆರವು ನೀಡುವಂತೆ ಮನವಿ ಸಲ್ಲಿಸಿದರು. ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ, ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ಗ್ರಾಪಂ ಅಧ್ಯಕ್ಷ ಪಾಪಣ್ಣ, ಜೆಡಿಎಸ್ ಮುಖಂಡ ಶ್ರೀಧರ್, ಸುಭಾಶ್, ಬಸವರಾಜ್, ಎಇಇಗಳಾದ ಪುಟ್ಟನಾಗರಾಜ್, ಯತೀಶ್, ಇಂಜಿನಿಯರ್‌ಗಳಾದ ಪ್ರಭಾಕರ್, ಬಸವೇಗೌಡ ಹಾಜರಿದ್ದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಎಐಸಿಸಿ, ಕೆಪಿಸಿಸಿ ಅಸಲಿ ಅಲ್ಲ ನಕಲಿ ಕಾಂಗ್ರೆಸ್

ಬಿಜೆಪಿ ಕಾರ್ಯಕರ್ತರ ಸಂಘಟನಾತ್ಮಕ ವಿಶೇಷ ಸಭೆಯಲ್ಲಿ ಮಾಜಿ ಎಂಎಲ್ಸಿ ಸಿ.ರಮೇಶ್

ತಿ.ನರಸೀಪುರ ಆ.6– ಕೇಂದ್ರ ಮತ್ತು ರಾಜ್ಯದಲ್ಲಿರುವುದು ಅಸಲಿ ಅಲ್ಲ ನಕಲಿ ಕಾಂಗ್ರೆಸ್ ಪಕ್ಷ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಸಭಾ ಭವನದಲ್ಲಿ ಬಿಜೆಪಿ ಕಾರ್ಯಕರ್ತರ ಸಂಘಟನಾತ್ಮಕ ವಿಶೇಷ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಜಾರಿ ಭರದಲ್ಲಿ ಕಿವಿ ಊದುವ ಭಂಟರನ್ನು ಸುತ್ತಲೂ ಕಟ್ಟಿಕೊಂಡಿರುವ ಸಿಎಂ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡಲು ವಿಫಲರಾಗಿದ್ದಾರೆ. ಗ್ರಾಪಂ ಸದಸ್ಯ ಆಗದಿದ್ದವರೂ ಹಣ, ಅಧಿಕಾರ ಬಲದಿಂದ ಸಂಸದನಾಗಿದ್ದರೂ ಬಿಜೆಪಿ ಪರಾಜಿತ ಅಭ್ಯರ್ಥಿ ಎಸ್.ಬಾಲರಾಜ್ ಅವರೇ ಈಗಲೂ ಜನಮಾನಸದಲ್ಲಿ ಲೋಕಸಭಾ ಸದಸ್ಯರಾಗಿದ್ದಾರೆ. ಸಚಿವ ಮತ್ತು ಸಂಸದರ ಕಾರ್ಯ ವೈಖರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಜನತೆ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಬಲಪಡಿಸಿ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನಾಯಕತ್ವಕ್ಕೆ ಶಕ್ತಿ ತುಂಬಲು ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆ ಮಾಡಬೇಕು ಎಂದರು.

ಮುಂಬರುವ ಗ್ರಾಪಂ, ಪುರಸಭೆ, ಜಿಪಂ ಹಾಗೂ ತಾಪಂ ಚುಣಾವಣೆಗಳಲ್ಲಿ ಪಕ್ಷ ಗೆಲ್ಲುವ ಒಂದೊಂದು ಸ್ಥಾನವೂ ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೇರಲು ಮೆಟ್ಟಿಲುಗಳಾಗಬೇಕು ಎಂದರು.

ರಾಜ್ಯ ಸರ್ಕಾರದ ಅಧಿಕಾರ ಹಂಚಿಕೆ ಕಿತ್ತಾಟದಿಂದ ಯಾವ ಸಂದರ್ಭದಲ್ಲಾದರೂ ಎದುರಾಗುವ ಚುನಾವಣೆಗೆ ಬಿಜೆಪಿ ಕಾರ್ಯಕರ್ತರು ಸಜ್ಜಾಗಿರಬೇಕು. ಗ್ರಾಮಾಂತರ ಜಿಲ್ಲಾ ಸಮಿತಿಯಲ್ಲಿ ತಿ.ನರಸೀಪುರ ಕ್ಷೇತ್ರದವರೇ ಹೆಚ್ಚಿನ ಸ್ಥಾನಮಾನ ಪಡೆದುಕೊಂಡಿದ್ದರೂ ಸಭೆಯಲ್ಲಿ ನೆರೆದಿರುವ ಸಭಿಕರ ಸಂಖ್ಯೆಗೆ ಸರಿ ಕಾಣುತ್ತಿಲ್ಲ ಎಂದು ಮುಖಂಡರು ಹಾಗೂ ಕಾರ್ಯಕರ್ತರ ಕಿವಿ ಹಿಂಡಿದ ಜಿಲ್ಲಾಧ್ಯಕ್ಷರು ಪಕ್ಷದ ಸಂಘಟನೆಯಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸದವರನ್ನು ಬದಲಾವಣೆ ಮಾಡುವಂತೆ ಕ್ಷೇತ್ರಾಧ್ಯಕ್ಷರಿಗೆ ತಾಕೀತು ಮಾಡಿದರು.

ಇದೇ ವೇಳೆ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಹಿರಿಯ ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣ ಅವರನ್ನು ಸನ್ಮಾನಿಸಲಾಯಿತು. ಹಲವರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ಸಭೆಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು, ಕ್ಷೇತ್ರಾಧ್ಯಕ್ಷ ಶಿವಕುಮಾರ್(ಸತ್ಯರಾಜ್), ಮಾಜಿ ಅಧ್ಯಕ್ಷೆ ಮಂಗಳ ಸೋಮಶೇಖರ್, ನಿವೃತ್ತ ಜಂಟಿ ನಿರ್ದೇಶಕ ಹೆಳವರಹುಂಡಿ ಸಿದ್ದಪ್ಪ, ವಕ್ತಾರ ಎನ್.ವಿ.ಫಣೀಶ್, ಪುರಸಭಾ ಸದಸ್ಯರಾದ ರೂಪಶ್ರೀ ಪರಮೇಶ್, ಎಸ್.ಕೆ.ಕಿರಣ್, ಗ್ರಾಪಂ ಉಪಾಧ್ಯಕ್ಷ ಭಾಗ್ಯಮ್ಮ, ಜಿಲ್ಲಾ ಉಪಾಧ್ಯಕ್ಷ ಮಡವಾಡಿ ಮಹೇಶ್, ಎಸ್‌ಬಿಟಿ ಸುರೇಶ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಮೂಗೂರು ಸಿದ್ದರಾಜು, ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ ಪಟೇಲ್, ಜಿಲ್ಲಾ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ಡಾ.ಟಿ.ಎಸ್.ಮಲ್ಲಿಕಾರ್ಜುನಸ್ವಾಮಿ, ಸಾಮ್ರಾಟ್ ಸುಂದ್ರರೇಶನ್, ಕರೋಹಟ್ಟಿ ಬಸವರಾಜು, ನಂಜುಂಡಸ್ವಾಮಿ, ಬಸವರಾಜು, ಸಿ.ಎಂ.ಪ್ರಕಾಶ್, ಪೂಜಿತ್ ಮೆಡಿಕಲ್ ಕುಮಾರ್, ಸೋಮಶೇಖರಪ್ಪ, ಆಡಿಟರ್ ಮಂಜುನಾಥ್, ಎನ್. ಲೋಕೇಶ್ ಇತರರಿದ್ದರು.



ಬಿಜೆಪಿ ಕಾರ್ಯಕರ್ತರ ಸಂಘಟನಾತ್ಮಕ ವಿಶೇಷ ಸಭೆಯನ್ನು ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಉದ್ಘಾಟಿಸಿದರು.

ಸಂಸದರನ್ನು ಗೆಲ್ಲಿಸಿದ್ದಕ್ಕೆ ಪಶ್ಚಾತಾಪ

ಸಾಮಾನ್ಯ ಜನರ ಕೈಗೆ ಸಿಗದೆ, ದೂರವಾಣಿ ಸಂಪರ್ಕಕ್ಕೂ ಲಭ್ಯವಾಗದ ಸಂಸದ ಸುನೀಲ್ ಬೋಸ್ ಅವರನ್ನು ಗೆಲ್ಲಿಸಿದ್ದಕ್ಕೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಜನರು ಪಶ್ಚಾತಾಪ ಪಡುತ್ತಿದ್ದಾರೆ. ಮನೆ ಮುಂದೆ ಗಂಟೆಗಟ್ಟಲೆ ಕಾದು ಸುಸ್ತಾದ ಬಳಿಕ ಜನರ ಕೈಗೆ ಸಿಕ್ಕರೆ ಅವರಿವರನ್ನ ಭೇಟಿಯಾಗಿ ಎಂಬ ಸಬೂಬು ಹೇಳಿ ಕಣ್ಮರೆಯಾಗಿ ಬಿಡುತ್ತಾರೆ ಎಂಬಂತಹ ಅಸಮಾಧಾನವನ್ನು ಜನತೆ ನಮ್ಮ ಬಳಿ ನಿವೇದಿಸಿಕೊಳ್ಳುತ್ತಿದ್ದಾರೆ. – **ಎಸ್.ಬಾಲರಾಜ್, ಮಾಜಿ ಶಾಸಕ**

ಹಗರಣಗಳ ಮೂಲಕ ರಾಜ್ಯ ಸರ್ಕಾರ ದುರಾಡಳಿತ

ತಿ.ನರಸೀಪುರ, ಆ.6– ರಾಜ್ಯ ಕಾಂಗ್ರೆಸ್ ಸರ್ಕಾರ ಹಲವು ಹಗರಣಗಳ ಮೂಲಕ ರಾಜ್ಯದ ಜನತೆಯ ಬದುಕನ್ನು ಅಧೋಗತಿಗೆ ದೂಡಿದೆ ಎಂದು ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಆರೋಪಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಸರ್ಕಾರದ ಹಗರಣಗಳ ಬಗ್ಗೆ ಚಾಟಿ ಬೀಸಿ ಮಾತನಾಡಿದ ಅವರು, ವಾಲ್ಮೀಕಿ ಹಗರಣ, ಎಸ್‌ಸಿಪಿ, ಮುಡಾ ಸೇರಿದಂತೆ ತಿ.ನರಸೀಪುರ ಪುರಸಭೆಯಲ್ಲಿ 40 ಕೋಟಿ ರೂ. ಹಗರಣ ಮಾಡುವ ಮೂಲಕ ದುರಾಡಳಿತ ನಡೆಸುತ್ತಿದ್ದು, ಸರ್ಕಾರದ ಈ ದುರಾಡಳಿತದಿಂದ ರಾಜ್ಯದ ಜನತೆಯ ಬದುಕು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಭಂಡ ಸರ್ಕಾರವಾಗಿದ್ದು, ಇತ್ತೀಚೆಗೆ ಯೂರಿಯಾ ಹಗರಣ ಸಹ ಸೇರ್ಪಡೆಯಾಗಿದೆ. ಮೊನ್ನೆ ನಂಜನಗೂಡಿನಲ್ಲಿ ಅಕ್ರಮವಾಗಿ ಕೇರಳಕ್ಕೆ ಸಾಗಿಸುತ್ತಿದ್ದ ಯೂರಿಯಾ ಮೂಟೆಗಳನ್ನು ರೈತರು ಪತ್ತೆ ಹಚ್ಚಿ ಪೊಲೀಸರಿಗೆ ಒಪ್ಪಿಸಿದ್ದಾರೆ. ವಾಲ್ಮೀಕಿ ಹಗರಣದಡಿ ಬರೋಬ್ಬರಿ 187 ಕೋಟಿ ರೂ. ಅವ್ಯವಹಾರದಲ್ಲಿ ಸರ್ಕಾರ ಸಿಲುಕಿದ್ದು, ಹಗರಣ ಸಂಬಂಧಿಸಿದಂತೆ ಸಚಿವರೊಬ್ಬರು ಜೈಲಿಗೂ ಹೋಗಿ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಯಾವುದೇ ಅಭಿವೃದ್ಧಿ ಕಾರ್ಯದೆಡೆಗೆ ಗಮನ ಹರಿಸದೇ ಬರೀ ಹಗರಣಗಳನ್ನು ಮಾಡುವ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಒಂದೆಡೆ 38 ತಿಂಗಳು ಬಾಕಿ ನೀಡುವಂತೆ ಸಾರಿಗೆ ಇಲಾಖೆ ನೌಕರರು ಪ್ರತಿಭಟನೆ ನಡೆಸುತ್ತಿದ್ದರೆ, ಇತ್ತ ತಿ.ನರಸೀಪುರ ಪುರಸಭೆಯಲ್ಲಿ 40 ಕೋಟಿ ರೂ.ಗಳ ಅವ್ಯವಹಾರ ನಡೆದಿದೆ ಎಂದು ಅಲ್ಲಿನ ಮುಖ್ಯಾಧಿಕಾರಿಯೇ ಹೇಳಿದ್ದಾರೆ. ಹಾಗಾಗಿ ಪುರಸಭೆ ಹಗರಣದಲ್ಲಿ ಹಣ ಲೂಟಿ ಹೊಡೆದಿರುವ ಮಾಜಿ ಅಧ್ಯಕ್ಷರನ್ನು ಕೇವಲ ಪಕ್ಷದಿಂದ ಉಚ್ಚಾಟನೆ ಮಾಡಿ, ಬಂಧಿಸಿದರೆ ಸಾಲದು. ಸಾರ್ವಜನಿಕರಿಂದ ಹಣ ಪಡೆದು ಸರ್ಕಾರಕ್ಕೆ ಪಾವತಿಸದೇ ಇತ್ತ ಫಲಾನುಭವಿಗಳಿಗೂ ಕೊಡದೇ ವಂಚನೆ ಮಾಡಿರುವ ಆತನಿಂದ 40 ಕೋಟಿ ರೂ. ವಸೂಲಿ ಮಾಡಬೇಕು ಎಂದರು.

ಅರಮನೆ, ಚಾಮುಂಡಿ ಬೆಟ್ಟವನ್ನು ಮುಲ್ಲಾಗಳು ಕಟ್ಟಿದ್ದರೆ: ಕೆಆರ್‌ಎಸ್‌ಗೆ ಮೊದಲು ಅಡಿಗಲ್ಲು ಹಾಕಿದ್ದೇ ಟಿಪ್ಪುಸುಲ್ತಾನ್ ಎಂದು ಹೇಳಿಕೆ ನೀಡಿದ್ದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹೇಳಿಕೆ ಖಂಡಿಸಿದ ಸುಬ್ಬಣ್ಣ ಇತ್ತೀಚೆಗೆ ಮೈಸೂರು ಅರಸರ ಮೇಲೆ ನಿರಂತರವಾಗಿ ಟೀಕೆ ಮಾಡಲಾಗುತ್ತಿದೆ. ಕನ್ನಂಬಾಡಿ ಕಟ್ಟಿದ್ದು ಯಾರೆಂದು ಇಡೀ ದೇಶದ ಜನರಿಗೆ ಗೊತ್ತಿದೆ. ಮೈಸೂರು ಅರಸರು ತಮ್ಮ ಕುಟುಂಬದ ಒಡವೆ ಗಿರವಿ ಇಟ್ಟು ಕನ್ನಂಬಾಡಿ ಕಟ್ಟಿದ್ದಾರೆ. ಅದರ ಅರಿವಿಲ್ಲದ ಸಚಿವ ಮಹದೇವಪ್ಪ ನವರು ಟಿಪ್ಪುವೇ ಕನ್ನಂಬಾಡಿಗೆ ಅಡಿಗಲ್ಲು ಹಾಕಿದ್ದಾರೆಂದು ಹೇಳುತ್ತಿದ್ದಾರೆ. ಹಾಗಿದ್ದರೆ ಅರಮನೆ, ಚಾಮುಂಡಿ ಬೆಟ್ಟವನ್ನು ಯಾರಾದರೂ ಮುಲ್ಲಾಗಳು ಕಟ್ಟಿದ್ದಾರೆಂದು ಹೇಳಿ ಬಿಡಿ ಮಹದೇವಪ್ಪನವರೇ, ಮೈಸೂರು ಅರಸರನ್ನು ಟೀಕೆ ಮಾಡುವ ನಿಮ್ಮ ಮನಸ್ಥಿತಿಗೆ ಏನು ಹೇಳಬೇಕೋ? ಮುಂದೊಂದು ದಿನ ಮೈಸೂರು ಅರಸ ಮನೆತನದ ಶಾಪ ನಿಮಗೆ ತಟ್ಟದೆ ಇರದು. ಮುಂದಾದರೂ ಸುಳ್ಳು ಹೇಳುವುದನ್ನು ಬಿಟ್ಟು ಕ್ಷೇತ್ರದ ಅಭಿವೃದ್ಧಿ ಕಡೆ ಗಮನ ನೀಡಿ ಎಂದರು.

ಕಲ್ಯಾಣಿ, ಮಂಟಪದ ಸುತ್ತ ಮೀನು-ಮಾಂಸದ ಅಂಗಡಿಗಳು!

ತೆರವಿಗೆ ಮುಂದಾದ ಬಿಜೆಪಿ ಮುಖಂಡರೊಡನೆ ವ್ಯಾಪಾರಿಗಳ ವಾಗ್ವಾದ

ಮೈಸೂರು, ಆ.6(ಜಿಎ)–ಮೈಸೂರಿನ ಫೌಂಟನ್ ವೃತ್ತದಿಂದ ರಾಜೇಂದ್ರನಗರ(ಕೆಸರೆ) ಮಾರ್ಗದಲ್ಲಿರುವ ಪುರಾತನ ಕಲ್ಯಾಣಿ ಮತ್ತು ಮಂಟಪದ ಬಳಿ ನಿರ್ಮಾಣಗೊಂಡಿರುವ ಅನಧಿಕೃತ ಮೀನು ಮತ್ತು ಮಾಂಸದ ಅಂಗಡಿಗಳನ್ನು ತೆರವುಗೊಳಿಸಿ, ಪುನರುಜ್ಜೀವನಗೊಳಿಸಲು ಮುಂದಾದ ಬಿಜೆಪಿ ಮುಖಂಡರೊಟ್ಟಿಗೆ ಸ್ಥಳೀಯರು ವಾಗ್ವಾದ ನಡೆಸಿದ್ದರಿಂದ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪುರಾತನ ಕಲ್ಯಾಣಿ ಮತ್ತು ಮಂಟಪವನ್ನು ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಬಿಜೆಪಿಯ ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್ ನೇತೃತ್ವದಲ್ಲಿ 25ಕ್ಕೂ ಹೆಚ್ಚು ಕಾರ್ಯಕರ್ತರು ಕಲ್ಯಾಣಿ ಮತ್ತು ಮಂಟಪದ ಬಳಿ ನಿರ್ಮಾಣ ಗೊಂಡಿರುವ ಅನಧಿಕೃತ ಮೀನು ಮತ್ತು ಮಾಂಸದ ಅಂಗಡಿಗಳನ್ನು ತೆರವುಗೊಳಿಸುವಂತೆ ಆಗ್ರಹಿಸಿ ದ್ದಾರೆ. ಈ ವೇಳೆ ಅಂಗಡಿ ಮಾಲೀಕರು, ಸ್ಥಳೀಯರು ಏಕಾಏಕಿ ಬಿಜೆಪಿ ಕಾರ್ಯಕರ್ತರ ವಿರುದ್ಧ ವಾಗ್ವಾದ ನಡೆಸಿ, ಹಲ್ಲೆಗೆ ಯತ್ನಿಸಿದ್ದಾರೆ. ಈ ವೇಳೆ ಸ್ಥಳೀಯರೊಬ್ಬರು ಇಲ್ಲಿ ಹಲವಾರು ವರ್ಷಗಳಿಂದ ದೇವಾಲಯ, ಕಲ್ಯಾಣಿ ಇದೆ ಎಂಬುದು ಎಲ್ಲರಿಗೂ ಗೊತ್ತು. ಆದರೆ, ಇಂದು ಬಿಜೆಪಿಯವರು ಬಂದು ಏಕಾಏಕಿ ಧರ್ಮಗಳ ನಡುವೆ ಕಲಹ ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ದೂರು ನೀಡಿ ಕಾನೂನಿನ ಪ್ರಕಾರ ಹೋರಾಟ ಮಾಡಬೇಕು. ಅದನ್ನು ಬಿಟ್ಟು ಈ ರೀತಿ ಮಾಡುವುದು ಸರಿಯಲ್ಲ ಎಂದರು.



ಪುರಾತನ ಕಲ್ಯಾಣಿ ಮತ್ತು ಮಂಟಪದ ಬಳಿ ನಿರ್ಮಾಣಗೊಂಡಿರುವ ಅನಧಿಕೃತ ಮೀನು ಮತ್ತು ಮಾಂಸದ ಅಂಗಡಿಗಳನ್ನು ತೆರವುಗೊಳಿಸಿ, ಪುನರುಜ್ಜೀವನಗೊಳಿಸಲು ಮುಂದಾದ ಬಿಜೆಪಿ ಮುಖಂಡರೊಟ್ಟಿಗೆ ಸ್ಥಳೀಯರು ವಾಗ್ವಾದ ನಡೆಸಿದರು.

ಈ ಸಂದರ್ಭದಲ್ಲಿ ಸ್ಥಳಕ್ಕೆ ನರಸಿಂಹರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಭೇಟಿ ನೀಡಿ, ಬಿಜೆಪಿ ಕಾರ್ಯಕರ್ತರೊಂದಿಗೆ ವಾಗ್ವಾದಕ್ಕೆ ಮುಂದಾಗಿದ್ದ ಸ್ಥಳೀಯರನ್ನು ಸಮಾಧಾನ ಪಡಿಸಿ, ಬಿಜೆಪಿ ಮುಖಂಡರು ಹಾಗೂ ಸ್ಥಳೀಯರನ್ನು ಸ್ಥಳದಿಂದ ತೆರಳುವಂತೆ ಸೂಚಿಸಿದರು.

ನಂತರ ಮಾಧ್ಯಮಗಳೊಂದಿಗೆ ಹೆಚ್.ಜಿ.ಗಿರಿಧರ್ ಮಾತನಾಡಿ, ಇಲ್ಲಿನ ಕಲ್ಯಾಣಿ, ಮಂಟಪ ಪುನರುಜ್ಜೀವನಗೊಳಿಸಬೇಕೆಂದು ಈಗಾಗಲೇ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿದ್ದು, ಈ ರಸ್ತೆಯಲ್ಲಿರುವ ಪಶು ಆಸ್ಪತ್ರೆ ಮುಂಭಾಗ ಪುರಾತನ ಮಂಟಪವಿದ್ದು, ಅದರ ಜೊತೆಗೆ ಅಲ್ಲಿ ಸಿಂಗರ ಶೆಟ್ಟಿ ಎಂಬ ಕೊಳವಿತ್ತು. ಇಲ್ಲಿನ ಕೊಳದಿಂದ ಶಿವಾಜಿ ರಸ್ತೆಯಲ್ಲಿರುವ ಶ್ರೀಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಪೂಜೆಗಾಗಿ ನೀರು ತೆಗೆದುಕೊಂಡು ಹೋಗುತ್ತಿದ್ದರು. ಈಗ ಕೊಳ ಮುಚ್ಚಿ ಮಂಟಪದ ಸುತ್ತ–ಮುತ್ತ ಮೀನು ಮತ್ತು ಮಾಂಸದ ಅಂಗಡಿಗಳನ್ನು ಅನಧಿಕೃತವಾಗಿ ಇಟ್ಟು ಅಪವಿತ್ರಗೊಳಿಸಲಾಗುತ್ತಿದೆ. ಈ ಭಾಗದಲ್ಲಿ ರಜಪೂತರು, ಮರಾಠ ಸಮಾಜದ ಜನರು ಹೆಚ್ಚು ವಾಸವಿದ್ದಾರೆ. ದೇವರಿಗೆ ಸಂಬಂಧಪಟ್ಟಂತ ಮಂಟಪಕ್ಕೆ ಮತ್ತು ಹಿಂದೂಗಳ ಭಾವನೆಗೆ ಧಕ್ಕೆ ಆಗುತ್ತಿದ್ದು, ಈ ಕೂಡಲೇ ಸುತ್ತಲೂ ಇರುವ ಅನಧಿಕೃತ ಮಂಟಪವನ್ನು ತೆರವುಗೊಳಿಸಿ, ಮಂಟಪವನ್ನು ಸ್ವಚ್ಛಗೊಳಿಸುವಂತೆ ಪಾಲಿಕೆ ಆಯುಕ್ತರಿಗೆ ಮನವಿ ಮಾಡಲಾಗಿದೆ ಎಂದರು.

ಪಾಲಿಕೆ ಆಯುಕ್ತರಿಗೆ ಸಲ್ಲಿಸಿದ ಮನವಿಯಿಂದ ಯಾವುದೇ ಪ್ರಯೋಜನವಾಗಿಲ್ಲ. ದೇವಸ್ಥಾನ ಕಲ್ಯಾಣಿ ಸ್ವಚ್ಛತಾ ಕಾರ್ಯ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ನಗರಪಾಲಿಕೆ, ಮುಡಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸದರಿ ಸ್ಥಳದಲ್ಲಿ ಅನಧಿಕೃತವಾಗಿ ಶೆಡ್‌ಗಳ ಮಾದರಿಯಲ್ಲಿ ಅಂಗಡಿಗಳು ನಿರ್ಮಾಣ ಆಗಿದೆ. ಹೊಸ ಶೆಡ್ ಮಾದರಿ ಅಂಗಡಿಗಳು ಸಹ ನಿರ್ಮಾಣ ಆಗುತ್ತಿದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಮುರುಳಿ, ಕಾರ್ತಿಕ್ ಮರಿಯಪ್ಪ ಪುನೀತ್, ಲಕ್ಷ್ಮಣ್, ಮಣಿರತ್ನಂ, ಕೃಷ್ಣಮೂರ್ತಿ ರಾವತ್ ಜಗದೀಶ್, ಶಾಂತರಾಜ್, ತಂಬಿ, ಮಹದೇವು, ವೇಲು, ನಾಗರಾಜ್, ಜಗದೀಶ್, ನವೀನ್ ಶೆಟ್ಟಿ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಟುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಟುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆರೋಗ್ಯ ತಪಾಸಣಾ ಶಿಬಿರದ ಕರಪತ್ರ ವಿತರಣೆ



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಆ.12 ಮತ್ತು 13ರಂದು ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಲಾಗಿದ್ದು, ಈ ಕುರಿತ ಕರಪತ್ರವನ್ನು ಕುಂಬಾರಗೇರಿಯ ಸದಸ್ಯರಲ್ಲಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎನ್.ಯೋಗಾನಂದ್, ಹೆಚ್.ಹರೀಶ್‌ಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿಯ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಆ.9ಕ್ಕೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ; ಸಿದ್ಧತೆ ಪರಿಶೀಲಿಸಿದ ಎಂಎಲ್ಸಿ ಡಾ. ಯತೀಂದ್ರ



ವಿವಿಧ ಅಭಿವೃದ್ಧಿ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮದ ಸಿದ್ಧತೆ ವೇದಿಕೆ ಪರಿಶೀಲಿಸಿದ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ.

ನಂಜನಗೂಡು, ಆ.6(ಎಂಕೆ)– ವರುಣಾ ವಿಧಾನಸಭಾ ಕ್ಷೇತ್ರದ ಹದಿನಾರು ಗ್ರಾಮದಲ್ಲಿ ಆ.9 ರಂದು ಹದಿನಾರು–ಆಲತ್ತೂರು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ಕಾರ್ಯಕ್ರಮದ ಸಿದ್ಧತೆಗಳನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸಿದ್ಧತೆ ಪರಿಶೀಲಿಸಿದರು.

ನಿರ್ಮಾಣವಾಗುತ್ತಿರುವ ವೇದಿಕೆ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ ಅವರು, ವೇದಿಕೆ, ಆಸನಗಳ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆಯ ಪರಿಶೀಲನೆ ನಡೆಸಿದರಲ್ಲದೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಸಿದ್ಧತೆಗಳಾಗಬೇಕು ಎಂದು ತಾಲೂಕು ಆಡಳಿತಕ್ಕೆ ಸೂಚನೆ ನೀಡಿದರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನಿಲ್ ಸೇರಿದಂತೆ ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ.

ಪರಿಶೀಲನೆ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ರಾಜ್ಯ ವಾಲ್ಮೀಕಿ ಸಮುದಾಯದ ಮುಖಂಡ ಎಸ್.ಸಿ.ಬಸವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ. ಎಪಿಎಂಸಿ ಮಾಜಿ ಅಧ್ಯಕ್ಷ ಹದಿನಾರು ಸಿದ್ದರಾಜು ನಾಯ್ಕ, ಜಿಪಂ ಸದಸ್ಯ ನಂಜಪ್ಪ, ಗಾಪಂ ಮಾಜಿ ಅಧ್ಯಕ್ಷ ಅಭಿ, ಮುಖಂಡರಾದ ರವಿಕುಮಾರ್. ನಾಗರಾಜ್ ನಾಯಕ, ಶಿವಕುಮಾರ್ ಮತ್ತಿತರರಿದ್ದರು.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್‌ರಿಂದ

ಆ.9ಕ್ಕೆ ಮೈಸೂರಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ

ಮೈಸೂರು, ಆ.6(ಎಂಕೆ)– ನೂತನ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಭೂಮಿಪೂಜೆ ಆ.9ರಂದು ನಡೆಯಲಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಕಾಂಗ್ರೆಸ್ ಕಚೇರಿಯ ಆವರಣದಲ್ಲಿ ನೂತನ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಕಾರ್ಯಕ್ರಮದ ಸಿದ್ಧತೆ ಕುರಿತು ಜಿಲ್ಲಾ ಕಾಂಗ್ರೆಸ್ ಹಾಗೂ ನಗರದ ಕಾಂಗ್ರೆಸ್ ಸಮಿತಿ ವತಿಯಿಂದ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಅಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಲಿದ್ದು, ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್ ಇನ್ನಿತರರು ಆಗಮಿಸಲಿದ್ದಾರೆ. ಇದಲ್ಲದೇ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲೆಯ ಕಾಂಗ್ರೆಸ್ ಕಾರ್ಯದರ್ಶಿಗಳು, ಕಾರ್ಯಕರ್ತರು, ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸ್ವಾತಂತ್ರ್ಯದ ನಂತರದಲ್ಲಿ ನಗರ ಭಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡಲು ಹಲವು ಪ್ರಯತ್ನಗಳು ನಡೆದಿದ್ದವು. ಆದರೆ, ಇಲ್ಲಿಯವರೆಗೆ ಭವನ ನಿರ್ಮಾಣ ಮಾಡಲು ಸಾಧ್ಯವಾಗಿರಲಿಲ್ಲ. ಇದೀಗ ಕಾಲ ಕೂಡಿ ಬಂದಿದೆ ಎಂದರು.

ಸಭೆಯಲ್ಲಿ ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮೂರ್ತಿ, ಕೆಪಿಸಿಸಿ ವಕ್ತಾರ ವೆಂಕಟೇಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಮಹಿಳಾ ಕಾಂಗ್ರೆಸ್ ಘಟಕ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಗ್ರಾಮಾಂತರ ಮಹಿಳಾ ಜಿಲ್ಲಾ ಕಾಂಗ್ರೆಸ್ ಸಮಿತಿ ಲತಾ, ಕೆಪಿಸಿಸಿ ಕಾರ್ಯದರ್ಶಿ ರಾಮಪ್ಪ ಇನ್ನಿತರರು ಉಪಸ್ಥಿತರಿದ್ದರು.



ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕೆಪಿಸಿಸಿ ವಕ್ತಾರ ಎ.ಹೆಚ್.ವೆಂಕಟೇಶ್ ಮಾತನಾಡುತ್ತಿರುವುದು.

ಆ.8ರಂದು ಬೆಂಗಳೂರಿನಲ್ಲಿ ಪ್ರತಿಭಟನೆ...

ಮತದಾರರ ಪಟ್ಟಿ ಪರಿಷ್ಕರಣೆ ವಿಚಾರದಲ್ಲಿ ಆಗುತ್ತಿರುವ ಲೋಪ ಸರಿಪಡಿಸಲು ಆಗ್ರಹಿಸಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಆ.5ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯನ್ನು ಆ.8ಕ್ಕೆ ಮುಂದೂಡಲಾಗಿದೆ. ಪ್ರತಿಭಟನೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ.

- ಡಾ.ಬಿ.ಜೆ.ವಿಜಯ್‌ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ

ಆ.9ರಂದು ಮಾಸಿಕ ಸಭೆ

ಮೈಸೂರು, ಆ. 6– ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಮಾಸಿಕ ಸಭೆ ಆ. 9 ರಂದು ಬೆಳಗ್ಗೆ 11.30 ಗಂಟೆಗೆ ಸಂಘದ ಕಚೇರಿಯಲ್ಲಿ ನಡೆಯಲಿದೆ. ಪ್ರಧಾನ ಕಾರ್ಯದರ್ಶಿ ಸ್ವಾಮಿನಾಥನ್ ಹಾಗೂ ಪಾರ್ಥಸಾರಥಿ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಆ.9, ಮಾತೃಮಂಡಳಿ ಶಾಲೆಯ 90ರ ಸಂಭ್ರಮ

ಮೈಸೂರು,ಆ.6(ಎಂಟಿವೈ)– ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಮಾತೃ ಮಂಡಳಿ ಶಾಲೆಯ ಆವರಣದಲ್ಲಿ ಆ.9ರಂದು ಸಂಜೆ 6ಕ್ಕೆ ಸಂಸ್ಥೆಯ 90ರ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾತೃ ಮಂಡಳಿ ಸಂಸ್ಥೆಯ ಗೌರವ ಕಾರ್ಯದರ್ಶಿ ವಾಣಿ ಪ್ರಸಾದ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಮಾಜಿ ಸಚಿವೆ ಡಾ.ಉಮಾಶ್ರೀ ಉದ್ಘಾಟಿಸಲಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿ ಡಾ.ಧರಣಿದೇವಿ ಮಾಲಗತ್ತಿ ಸ್ಮರಣ ಸಂಚಿಕೆ ಬಿಡುಗಡೆ ಮಾಡುವ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಭಾವಚಿತ್ರ ಅನಾವರಣ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಅಧ್ಯಕ್ಷರಾದ ವಿಜಯಲಕ್ಷ್ಮೀ ಅರಸ್ ವಹಿಸಲಿದ್ದು, ಗೌರವ ಉಪಾಧ್ಯಕ್ಷರಾದ ರಾಮೇಶ್ವರಿ ವರ್ಮ ಉಪಸ್ಥಿತರಿರಲಿದ್ದಾರೆ ಎಂದರು.

1935ರಲ್ಲಿ ಸಮಾನ ಮನಸ್ಕರಿಂದ ಆರಂಭವಾದ ಮಾತೃ ಮಂಡಳಿ ಸಂಸ್ಥೆ ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ಹೆಜ್ಜೆ ಇಟ್ಟು, ಇಲ್ಲಿಯವರೆಗೆ ಸಾಗಿ ಬಂದಿದೆ. 90ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಸ್ಥಾಪನೆಗೆ ಕಾರಣರಾದ ಮಹಾ ಮಾತೆಯರ ಭಾವಚಿತ್ರಗಳನ್ನು ಅನಾವರಣಗೊಳಿಸುವ ಮೂಲಕ ಅವ ರನ್ನು ಸ್ಮರಿಸಿ, ಗೌರವಿಸಿ, ಅಭಿನಂದಿಸುವ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತೃ ಮಂಡಳಿ ಸಂಸ್ಥೆ ಅಧ್ಯಕ್ಷೆ ವಿಜಯಲಕ್ಷ್ಮೀ ಅರಸ್, ಕೋಶಾಧಿಕಾರಿ ವಿಜಯಲಕ್ಷ್ಮಿ ಮುರಳೀಧರ್, ಸಹ ಕಾರ್ಯದರ್ಶಿ ಹೇಮ ಬಾಲಚಂದ್ರನ್ ಇದ್ದರು.

ಡಾ.ಜಿ.ಪರಮೇಶ್ವರ್ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ







ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಕಾಂತರಾಜು ನೇತೃತ್ವದಲ್ಲಿ ಚೆಲುವಾಂಬ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು–ಹಂಪಲು ಹಂಚಿದರು.

ಮೈಸೂರು, ಆ. 6– ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರ ಹುಟ್ಟುಹಬ್ಬವನ್ನು ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಎಸ್. ಕಾಂತರಾಜು ನೇತೃತ್ವದಲ್ಲಿ ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಇಂದು ಬೆಳಗ್ಗೆ ಚೆಲುವಾಂಬ ಆಸ್ಪತ್ರೆಗೆ ತೆರಳಿ, ಅಲ್ಲಿ ಹೆರಿಗೆಗಾಗಿ ದಾಖಲಾಗಿದ್ದ ಮಹಿಳೆಯರಿಗೆ ಹಣ್ಣು–ಹಂಪಲು ವಿತರಿಸಿದ್ದಲ್ಲದೇ, ಆಸ್ಪತ್ರೆಯಲ್ಲಿನ ಸಮಸ್ಯೆಗಳ ಬಗ್ಗೆ ಆಲಿಸಿ ಪಟ್ಟಿ ಮಾಡಿಕೊಂಡರು. ಆಸ್ಪತ್ರೆಯ ಸಮಸ್ಯೆಗಳ ನಿವಾರಣೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರಿಗೆ ಸುದೀರ್ಘವಾದ ವರದಿ ನೀಡಲಿರುವುದಾಗಿ ಕಾಂತರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ವಕೀಲ ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ರೈತ ಘಟಕದ ಅಧ್ಯಕ್ಷ ಮಹದೇವು, ಇಂಟರ್‌ಲೆಕ್ಚರ್ ವಿಭಾಗದ ಜಿಲ್ಲಾಧ್ಯಕ್ಷ ನಾಗರಾಜು, ಕಾನೂನು ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪವಿತ್ರ, ಚೆಲುವಾಂಬ ಆಸ್ಪತ್ರೆಯ ಮೇಲ್ವಿಚಾರಣಾ ಸಮಿತಿ ಸದಸ್ಯೆ ತನುಜಾ ಮಹೇಶ್, ಮೈಸೂರು ವಿವಿ ಪಿಹೆಚ್.ಡಿ ವಿದ್ಯಾರ್ಥಿ ನವೀನ್, ಚೆಲುವಾಂಬ ಆಸ್ಪತ್ರೆಯ ಅಧೀಕ್ಷಕರಾದ ಸುಧಾ, ಆರ್‌ಎಂಓ ಶಶಿಕುಮಾರ್ ಇನ್ನಿತರರಿದ್ದರು.

ಈ ಕಾರ್ಯಕ್ರಮದ ನಂತರ ಮಾತನಾಡಿದ ಎಸ್. ಕಾಂತರಾಜು, 7 ವರ್ಷ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಉತ್ತಮ ರೀತಿಯಲ್ಲಿ ಪಕ್ಷವನ್ನು ಸಂಘಟನೆ ಮಾಡುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಡಾ. ಜಿ.ಪರಮೇಶ್ವರ್ ಕಾರಣಕರ್ತರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 5 ವರ್ಷ ಅಧಿಕಾರಾವಧಿ ಪೂರೈಸುತ್ತಾರೆ ಎಂಬುದರಲ್ಲಿ ನಮಗೆ ಯಾವುದೇ ರೀತಿಯ ಸಂಶಯವಿಲ್ಲ. ಒಂದು ವೇಳೆ ಮುಖ್ಯಮಂತ್ರಿಗಳ ಬದಲಾವಣೆ ಮಾಡುವುದಾದರೆ ಶೇ. 95ರಷ್ಟು ದಲಿತರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿರುವ ಕಾರಣ ದಲಿತರನ್ನೇ ಮುಖ್ಯಮಂತ್ರಿಗಳನ್ನಾಗಿ ಮಾಡಬೇಕು. ಡಾ. ಜಿ.ಪರಮೇಶ್ವರ್ ಮತ್ತು ಡಾ. ಹೆಚ್.ಸಿ.ಮಹದೇವಪ್ಪ ಸಿಎಂ ಸ್ಥಾನವನ್ನು ನಿಭಾಯಿಸಲು ಸಮರ್ಥರು ಹಾಗೂ ಅರ್ಹರಾಗಿರುವುದರಿಂದ ಮುಖ್ಯಮಂತ್ರಿಗಳ ಬದಲಾವಣೆಯಾದಲ್ಲಿ ಪಕ್ಷದ ಹೈಕಮಾಂಡ್ ಈ ಇಬ್ಬರು ಮುಖಂಡರಲ್ಲಿ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದರು.

ಕಾರ್ಮಿಕ ಇಲಾಖೆ ಸೌಲಭ್ಯಗಳ ವಿತರಣೆಯಲ್ಲಿ ದಂಧೆ!

ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಲೋಕೇಶ್ ಆರೋಪ

ಮೈಸೂರು,ಆ.6(ಪಿಎಂ)– ಕಾರ್ಮಿಕ ಇಲಾಖೆ ಸೌಲಭ್ಯಗಳಾದ ಆರೋಗ್ಯ ತಪಾಸಣೆ, ಉಪಕರಣಗಳ ಕಿಟ್ ವಿತರಣೆ ದಂಧೆಯಾಗಿ ಪರಿಣಮಿಸಿದ್ದು, 300ರಿಂದ 400 ರೂ. ವೆಚ್ಚವಾಗುವ ತಪಾಸಣೆಗೆ ಇಲಾಖೆಯಿಂದ 3ರಿಂದ 4 ಸಾವಿರ ರೂ.ವರೆಗೆ ಟೆಂಡರ್ ಮೂಲಕ ಖಾಸಗಿ ಲ್ಯಾಬ್‌ಗಳಿಗೆ ಭರಿಸಲಾಗುತ್ತಿದೆ. ಇನ್ನು ವಿತರಿಸುವ ಉಪಕರಣಗಳ ಗುಣಮಟ್ಟ ಅತ್ಯಂತ ಕಳಪೆಯಿಂದ ಕೂಡಿದೆ ಎಂದು ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಲೋಕೇಶ್ ಆರೋಪಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಇದೀಗ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಭೇಟಿ ಮಾಡಿ ಅನೇಕ ವಿಚಾರಗಳನ್ನು ಗಮನಕ್ಕೆ ತಂದರೆ ಉಡಾಫೆ ಉತ್ತರ ಕೊಟ್ಟಿದ್ದಾರೆ. ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನಸಹಾಯ ನೀಡಿಲ್ಲ. ಟೆಂಡರ್ ಮೂಲಕ ನಮ್ಮ ಕಾರ್ಮಿಕರಿಗೆ ಕೊಡುವ ಉಪಕರಣಗಳು ಉಪಯೋಗಕ್ಕೆ ಬಾರದಾಗಿವೆ. ಇವರು ಕೊಡುವ ಕರ್ಣಿಯಲ್ಲಿ ಇಟ್ಟಿಗೆ ಹೊಡೆದರೆ ಅದು ಮಡಿಚಿಕೊಳ್ಳುವಷ್ಟು ಕಳಪೆಯಾಗಿದೆ. ಈ ರೀತಿಯ ಕಳಪೆ ಗುಣಮಟ್ಟದ ಸಾಮಗ್ರಿ ನೀಡುವವರಿಗೆ ಟೆಂಡರ್ ಕೊಡುವುದನ್ನು ಸ್ಥಗಿತಗೊಳಿಸಿ ಎಂದು ಕೋರಿದರೆ ಅದಕ್ಕೂ ಸಚಿವರು ಉಡಾಫೆ ಉತ್ತರ ಕೊಡುತ್ತಾರೆ ಎಂದು ಕಿಡಿಕಾರಿದರು.

ಟೆಂಡರ್ ಕರೆದು ಅದರಿಂದ ಲಾಭ ಮಾಡಿಕೊಳ್ಳುವುದು ಸಚಿವರ ಉದ್ದೇಶ. ಆರೋಗ್ಯ ತಪಾಸಣೆ ನೆಪದಲ್ಲಿ ಒಬ್ಬ ಕಾರ್ಮಿಕರಿಗೆ 2ರಿಂದ 3 ಸಾವಿರ ರೂ. ವೆಚ್ಚ ಮಾಡುತ್ತಿದ್ದಾರೆ. ಅದರಿಂದ ಯಾವುದೇ ಉಪಯೋಗವಿಲ್ಲ. ಅದೇ ತಪಾಸಣೆಯನ್ನು ನಾವೇ ಹೊರಗಡೆ ಲ್ಯಾಬ್‌ನಲ್ಲಿ ಮಾಡಿಸಿದರೆ 200ರಿಂದ 300 ರೂ.ನಲ್ಲಿ ಮುಗಿಯುತ್ತದೆ. ಇದನ್ನು ಸಹ ದಂಧೆ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಸೇಫ್ಟಿ ಕಿಟ್ ಎಂದು ಕೊಡುತ್ತಿದ್ದಾರೆ. ಇದನ್ನು ಯಾವ ಕಾರ್ಮಿಕ ಧರಿಸಿ ಕೆಲಸ ಮಾಡುತ್ತಿದ್ದಾನೆ ಎಂದು ಸಚಿವರು ನನಗೆ ತಿಳಿಸಬೇಕು. ಟೆಂಡರ್ ಕರೆದು ಮಂಡಳಿಯಲ್ಲಿರುವ ಹಣವನ್ನು ಖರ್ಚು ಮಾಡುವುದೇ ಇವರ ಉದ್ದೇಶವೇ? ಇವರು ಎಲ್ಲಾ ಜಿಲ್ಲೆಗಳನ್ನು ಸುತ್ತಿದ್ದೇನೆ, ಎಲ್ಲರಿಗೂ ಸವಲತ್ತು ಕೊಡುಸುತ್ತಿದ್ದೇನೆ ಎಂದು ಹೇಳುತ್ತಾರೆ. ಅವರ ತವರು ಜಿಲ್ಲೆ ಹುಬ್ಬಳ್ಳಿಯಲ್ಲಿ ನಮ್ಮ ಕಾರ್ಮಿಕ ಸಂಘಟನೆಯವರು 4 ದಿನಗಳಿಂದ ಅಹೋರಾತ್ರಿ ಧರಣಿ ಮಾಡುತ್ತಿದ್ದಾರೆ. ಇದು ಸುದ್ದಿಯೂ ಆಗಿದೆ. ಅವರ ತವರಿನಲ್ಲೇ ಸಮಸ್ಯೆ ಬಗೆಹರಿಸಲಾಗುತ್ತಿಲ್ಲ ನಮ್ಮ ಕಾರ್ಮಿಕ ಸಚಿವರಿಗೆ ಎಂದು ಟೀಕಿಸಿದರು.

ಕೇವಲ ಉಡಾಫೆ ಉತ್ತರದಲ್ಲೇ ಕಾಲ ಕಳೆಯುತ್ತಿದ್ದಾರೆ. ಕಟ್ಟಡ ಕಾರ್ಮಿಕರಿಗೆ ಯಾವುದೇ ರೀತಿಯ ಸವಲತ್ತು ದೊರಕಿಸಿ ಕೊಡುತ್ತಿಲ್ಲ. ಏನಾದರೂ ಕೇಳಿದರೆ ತಿರುಗಿ ಬೀಳುತ್ತಾರೆ. ಅದೇ ರೀತಿ ಸಿಇಓ ಮೇಡಂ ಅವರ ಬಳಿಯೂ ಮಾತನಾಡಿದೆವು. ಅವರೂ ಉಡಾಫೆ ಉತ್ತರ ಕೊಟ್ಟರು ಎಂದರು.

ಅಧಿಕಾರಿಗಳು ಆಫೀಸ್‌ನಲ್ಲಿ ಬಂದು ಮಾತನಾಡಿ ಅಂತಾರೆ. ಹುಬ್ಬಳ್ಳಿಯಲ್ಲಿ ನಮ್ಮ ಕಾರ್ಮಿಕ ಸಂಘಟನೆಗಳು ಧರಣಿ ಮಾಡುತ್ತಿರುವುದು ಇವರಿಗೆ ಗೊತ್ತಿಲ್ಲವೇ? ಈ ಅನಾವಶ್ಯಕ ಸೇಫ್ಟಿ ಕಿಟ್, ಆರೋಗ್ಯ ತಪಾಸಣೆ ಸ್ಥಗಿತಗೊಳಿಸಿ, ಅದೇ ಹಣವನ್ನು ನಮ್ಮ ಕಾರ್ಮಿಕರಿಗೆ ಡಿಬಿಟಿ ಮೂಲಕ ಕೊಡಲಿ. ಅಥವಾ ಇದೇ ರೀತಿ ಮುಂದುವರೆದರೆ ರಾಜ್ಯಾದ್ಯಂತ ಪ್ರತಿಭಟನೆ ಮಾಡುತ್ತೇವೆ ಎಂದು ಎಚ್ಚರಿಸಿದರು. ಪಿಂಚಣಿ, ಮದುವೆ ಸಹಾಯಧನ ಕೊಟ್ಟು ಒಂದೂವರೆ ವರ್ಷಗಳೇ ಆಯಿತು. ಅನಗತ್ಯವಾಗಿ ಟೆಂಡರ್ ರೂಪದಲ್ಲಿ ಹಣವನ್ನು ವ್ಯಯ ಮಾಡುತ್ತಿದ್ದಾರೆ ಎಂದು ದೂರಿದರು.



ಲೋಕೇಶ್ ಮತ್ತು ನಾಗರಾಜು ಮಾಧ್ಯಮದವರೊಂದಿಗೆ ಮಾತನಾಡುತ್ತಿರುವುದು.

ಬಳಿಕ ಉಪಾಧ್ಯಕ್ಷ ನಾಗರಾಜು ಮಾತನಾಡಿ, ಸ್ಕಾಲರ್ ಶಿಪ್ ಕೊಟಿದ್ದೇವೆ. ಕೊಡದಿರುವ ಬಗ್ಗೆ ದಾಖಲೆ ಕೊಡಿ ಎನ್ನುತ್ತಾರೆ. ಕಿಟ್ ಕಳಪೆ ಎಂದಾಗ, ಮಾಹಿತಿ ಕೊಡಿ ಎಂದಿದ್ದಾರೆ. ಟೆಂಡರ್ ಕೊಡುವಾಗಲೇ ಗುಣಮಟ್ಟ ಖಾತ್ರಿ ಪಡಿಸಿಕೊಳ್ಳಲು ಸಾಧ್ಯವಿಲ್ಲವೇ? ಕಾರ್ಮಿಕನ ಕೈಗೆ ಹೋದ ಮೇಲೆ ಮತ್ತೆ ಅವರಿಗೆ ವಾಪಸ್ ಕೊಟ್ಟರು ಸರ್ಕಾರಕ್ಕೆ ನಷ್ಟವಲ್ಲವೇ? ಉಪಕರಣ ಕಿಟ್‌ಗಳ ಗುಣಮಟ್ಟ ಖಾತ್ರಿಪಡಿಸಿದ ನಂತರ ಕಾರ್ಮಿಕರಿಗೆ ಕೊಡಬೇಕು ಎಂಬುದು ನಮ್ಮ ಆಗ್ರಹ. ಸ್ಕಾಲರ್‌ಶಿಪ್ ಅನ್ನು ಎಷ್ಟೋ ಸಾವಿರ ಜನಕ್ಕೆ ಮೈಸೂರು ಜಿಲ್ಲೆಯಲ್ಲಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ದಾಖಲೆ ಕೊಡುತ್ತೇವೆ ಎಂದು ಹೇಳಿದ್ದಾರೆ. ನಾಳೆ ನಾಳಿದ್ದು ಅಧಿಕಾರಿಗಳ ಭೇಟಿ ಮಾಡಿ ಮಾಹಿತಿ ಕೇಳುತ್ತೇವೆ ಎಂದರು.

ಮತಗಳ್ಳತನದ ಬಗ್ಗೆ ದೇಶವೇ ಗಮನಹರಿಸುವಂತೆ ಪ್ರತಿಭಟನೆ

ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರತಿಕ್ರಿಯೆ

ಮೈಸೂರು, ಆ.6(ಎಸ್‌ಪಿಎನ್)– ಮತಗಳ್ಳತನ ವಿಚಾರವಾಗಿ ದೇಶವೇ ತಿರುಗಿ ನೋಡುವ ಆಗೆ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ಮಾಡುತ್ತೇವೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.


ಸಂತೋಷ್ ಲಾಡ್

ಮೈಸೂರು ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಯಾವ್ಯಾವ ಕ್ಷೇತ್ರದಲ್ಲಿ ಮತ ಕಳ್ಳತನ ಆಗಿದೆ ಎಂಬ ಮಾಹಿತಿ ನನ್ನ ಬಳಿ ಇಲ್ಲ. ನನಗೆ ಕೆಲವು ಕ್ಷೇತ್ರಗಳ ಬಗ್ಗೆ ಮಾತ್ರ ಗೊತ್ತಿದೆ. ಈ ರೀತಿ ಮಾಡಿಕೊಂಡು ಇನ್ನೊಂದು ಚುನಾವಣೆ ಗೆಲ್ಲಬಹುದಷ್ಟೇ ಎಂದರು. ಮುಂಬೈನಲ್ಲಿ ಲೋಕಸಭಾ ಚುನಾವಣೆ ನಂತರ 41 ಲಕ್ಷ ಮತಗಳು ಜಾಸ್ತಿ ಆಗಿವೆ. ಬಿಹಾರದಲ್ಲಿ ಮಾತ್ರ ಲೋಕಸಭಾ ಚುನಾವಣೆ ನಂತರ 61 ಲಕ್ಷ ಮತಗಳು ಕಡಿಮೆ ಆಗಿವೆ. ಶೇ.4 ಮತದಾರರ ಸಂಖ್ಯೆ ಹೆಚ್ಚು ಕಡಿಮೆ ಆದರೆ ಅದರ ಬಗ್ಗೆ ಚುನಾವಣಾ ಆಯೋಗ ಕಾರಣ ಕೊಡಬೇಕು ಎಂದರು.

ಮತದಾನ ಜನರ ಮೂಲಭೂತ ಹಕ್ಕು. ಚುನಾವಣೆ ಗೆಲ್ಲೋದು ಪ್ರಚಾರ ಮಾಡೋದು ಅಷ್ಟೇನಾ ಕೇಂದ್ರ ಸರಕಾರದ ಕೆಲಸ. ಅದರ ಆಡಿಟ್ ಏನು ಮಾಡೋ ಆಗಿಲ್ವಾ? ಇದರ ಬಗ್ಗೆ ಚರ್ಚೆ ಮಾಡೋದು ಬೇಡವಾ? ಎಂದು ಪ್ರಶ್ನಿಸಿದರು.

ಮತ ಕಳ್ಳತನ ವಿಚಾರವಾಗಿ ರಾಹುಲ್ ಗಾಂಧಿ ಪ್ರತಿಭಟನೆ ಮಾಡುವ ವಿಚಾರಕ್ಕೆ ಪ್ರತಿಕ್ರಿಯಿಸಿ ಈ ಸಂಬಂಧ ಕೆಪಿಸಿಸಿ ಅಧ್ಯಕ್ಷರು, ಸಿಎಂ ಸಭೆ ನಡೆಸಿದ್ದಾರೆ ಎಂದರು. ಚುನಾವಣೆ ವೇಳೆ ಮುಸ್ಲಿಂರು, ಪಾಕಿಸ್ತಾನ ಎಂದು ಹೇಳಿ ಪ್ರಚಾರ ಮಾಡುತ್ತಾರೆ. ಅದರಿಂದ ಬಿಜೆಪಿಗೆ ಶೇ.35 ರಷ್ಟು ಮತ ಬಿದ್ದಿದೆ. ನೂರಕ್ಕೆ ನೂರರಷ್ಟು ಬಿಜೆಪಿಗೆ ಈ ದೇಶದಲ್ಲಿ ಮತ ಬಿದ್ದಿದೆಯೇ? ಎಂದು ಪ್ರಶ್ನಿಸಿದರು.

ಬೆಳಿಗ್ಗೆಯಿಂದ ಸಂಜೆವರೆಗೆ ಟಿವಿಯಲ್ಲಿ ಯಾರನ್ನಾದರೂ ತೋರಿಸಿದರೆ ಅವರು ಪಾಪ್ಯುಲರ್ ಆಗೇ ಆಗುತ್ತಾರೆ.

ಇಷ್ಟು ದಿನ ಯಾಕೆ ಪ್ರಧಾನಿಗಳು ಪತ್ರಿಕಾಗೋಷ್ಠಿ ಮಾಡಿಲ್ಲ. ಮೋದಿಗೆ ಧೈರ್ಯವಿದ್ದರೆ ಒಂದು ಪತ್ರಿಕಾಗೋಷ್ಠಿ ಮಾಡಲಿ ಎಂದು ಸವಾಲು ಹಾಕಿದರಲ್ಲದೆ, ದೇಶದ ಸಾಲ ಜಾಸ್ತಿಯಾಗಿದೆ, ಡೀಸೆಲ್ ಪೆಟ್ರೋಲ್ ಬೆಲೆ ಏರಿಕೆಯಾಗಿದೆ. ಅದರ ಬಗ್ಗೆ ಬಿಜೆಪಿ ಪ್ರತಿಭಟನೆ ಮಾಡಲಿ. ಅದನ್ನು ಬಿಟ್ಟು ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ರಾಜ್ಯ ಘಟಕ ಏಕೆ ಪ್ರತಿಭಟನೆ ಮಾಡುತ್ತಿದೆಯೋ ಗೊತ್ತಿಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಬಿಜೆಪಿಯವರ ಭಾಷಣ ಜನ ಕೇಳಬೇಕು. ಇವರಿಗೆ ಯಾರು ಪ್ರಶ್ನೆ ಕೇಳಬಾರದು. ಇದು ಬಿಜೆಪಿ ಮನಸ್ಥಿತಿ. ಯುಪಿಎ ಸರಕಾರ ಇದ್ದಾಗ ಅಕ್ರಮ 80 ಲಕ್ಷ ಬಾಂಗ್ಲಾದೇಶ ವಲಸಿಗರನ್ನು ವಾಪಸ್ ಕಳುಹಿಸಿದ್ದೇವೆ. ಬಿಜೆಪಿ ಸರಕಾರ ಎಷ್ಟು ಜನರನ್ನು ಕಳುಹಿಸಿದೆ. ಬರೀ ಸುಳ್ಳು ಹೇಳೋದು. ಪ್ರಚಾರ ಪಡೆಯೋದು ಮಾತ್ರ ಆಗಿದೆ ಎಂದರು.

ಬಹಿರಂಗ ಚರ್ಚೆಗೆ ಬರುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ ಸವಾಲ್ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಚಿವರು, ಮಾಜಿ ಸಂಸದ ಪ್ರತಾಪ್ ಸಿಂಹಗೆ ದೇವರು ಒಳ್ಳೆಯದು ಮಾಡಲಿ ಎಂದಷ್ಟೇ ಹೇಳೋದು ನಾನು ಎಂದರು.

ಬ್ರಿಟೀಷರ ಕಾಲದಿಂದ ಬಳಸುತ್ತಿದ್ದ ಟೋಪಿಗೆ ಕೊಕ್

ಪೊಲೀಸರಿಗೆ ಹೊಸ ಬಣ್ಣದ ಕ್ಯಾಪ್‌ಗೆ ಸರ್ಕಾರ ಅಸ್ತು



ಬೆಂಗಳೂರು, ಆ.6–ಕರ್ನಾಟಕ ಪೊಲೀಸ್ ಇಲಾಖೆಯ ಕಾನ್‌ಸ್ಟೇಬಲ್‌ಗಳು ಧರಿಸುತ್ತಿರುವ ಬ್ರಿಟಿಷ್ ಕಾಲದ ಟೋಪಿ ಬದಲಾವಣೆಯ ಕಾಲ ಸನ್ನಿಹಿತವಾಗಿದೆ. ಇದೀಗ ರಾಜ್ಯ ಸರ್ಕಾರ ಹೆಡ್ ಕಾನ್‌ಸ್ಟೆಬಲ್ ಮತ್ತು ಕಾನ್‌ಸ್ಟೆಬಲ್‌ಗಳ ಕ್ಯಾಪ್ ಬದಲಾವಣೆಗೆ ಅಧಿಕೃತವಾಗಿ ಅನುಮತಿ ನೀಡಿದ್ದು, ನೇವಿ ಬ್ಲೂ ಪೀಕ್ ಕ್ಯಾಪ್‌ಗಳನ್ನು ವಿತರಿಸಲು ಸಹಮತಿ ನೀಡಿ ಆದೇಶ ಹೊರಡಿಸಿದೆ.

ಕಾನ್ಸ್‌ಟೇಬಲ್ ಹಾಗೂ ಹೆಡ್ ಕಾನ್ಸ್‌ಟೇಬಲ್‌ಗಳ ಸ್ಲೋಚ್ ಹ್ಯಾಟ್ ಬದಲಾವಣೆ ಹಿನ್ನೆಲೆಯಲ್ಲಿ ನೇವಿ ಬ್ಲೂ ಪೀಕ್ ಕ್ಯಾಪ್‌ಗಳನ್ನು ವಿತರಿಸಲು ರಾಜ್ಯ ಸರ್ಕಾರ ಸಹಮತಿ ನೀಡಿ ಇಂದು (ಆ.6) ಆದೇಶ ಹೊರಡಿಸಿದೆ. ಕ್ಯಾಪ್ ಖರೀದಿಸುವ ಸಂಬಂಧ ಟೆಂಡರ್ ಪ್ರಕ್ರಿಯೆಗೆ ಚಾಲನೆ ಸಿಕ್ಕಿದ್ದು, ಕ್ಯಾಪ್ ಮಾದರಿ ಸಿದ್ಧಪಡಿಸುವ ಕುರಿತು ಸಭೆ ನಾಳೆ (ಆ.7) ಕೆಎಸ್‌ಆರ್‌ಪಿ ಎಡಿಜಿಪಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ.

ತೆಲಂಗಾಣ ಮಾದರಿಯ ಕ್ಯಾಪ್ ಆಯ್ಕೆ: ಈಗಾಗಲೇ ಯಾವ ಬಣ್ಣದ ಹಾಗೂ ಯಾವ ಮಾದರಿ ಕ್ಯಾಪ್ ಇರಬೇಕೆಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆದಿಯಾಗಿ ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಚರ್ಚೆ ನಡೆಸಿದ್ದು, ಕೆಲ ಮಾದರಿ ಕ್ಯಾಪ್‌ಗಳನ್ನು ಸಹ ಖುದ್ದಾಗಿ ಪರಿಶೀಲಿಸಿದ್ದಾರೆ. ವಿವಿಧ ರಾಜ್ಯಗಳ ಕ್ಯಾಪ್‌ಗಳನ್ನು ಸಿಎಂ ಪರಿಶೀಲಿಸಿದ್ದು, ತೆಲಂಗಾಣ ಮಾದರಿಯ ನೇವಿ ಬ್ಲೂ ಬಣ್ಣದ ಕ್ಯಾಪ್ ಆಯ್ಕೆ ಮಾಡಿದ್ದಾರೆ. ಹೀಗಾಗಿ ಸದ್ಯದಲ್ಲಿಯೇ ಹೊಸ ಬಣ್ಣದ ಮಾದರಿಯ ಕ್ಯಾಪ್ ರಾಜ್ಯ ಪೊಲೀಸ್ ಕಾನ್ಸ್‌ಟೆಬಲ್‌ಗಳ ತಲೆಗೆ ಬರಲಿದೆ. ಈ ಮೂಲಕ ಬ್ರಿಟೀಷರ ಕಾಲದಿಂದ ಬಳಸುತ್ತಿದ್ದ ಟೋಪಿಗಳು (ಸ್ಲೋಚ್ ಹ್ಯಾಟ್) ನೇಪಥ್ಯಕ್ಕೆ ಸರಿಯಲಿವೆ.

ಸ್ಲೋಚ್ ಹ್ಯಾಟ್ ಬದಲಾವಣೆಗೆ ಕಾರಣವೇನು: ಹಳೆ ಮಾದರಿಯ ಸ್ಲೋಚ್ ಹ್ಯಾಟ್ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳ ಬಗ್ಗೆ ಇತ್ತೀಚೆಗೆ ಕೇಂದ್ರ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿತ್ತು. ಅಲ್ಲದೆ ಪ್ರತಿಭಟನೆ, ರ್‍ಯಾಲಿ, ಅಪರಾಧಿಗಳನ್ನು ಬೆನ್ನತ್ತುವ ಸಂದರ್ಭಗಳಲ್ಲಿ ಸ್ಲೋಚ್ ಹ್ಯಾಟ್ ಧರಿಸಿ ಕರ್ತವ್ಯ ನಿರ್ವಹಿಸುವುದು ಕಿರಿಕಿರಿಯುಂಟು ಮಾಡುತ್ತಿದೆ. ಹ್ಯಾಟ್ ಕೆಳಗೆ ಬಿದ್ದರೆ ಇಲಾಖೆ ಸಮವಸ್ತ್ರಕ್ಕೆ ಅಗೌರವ ತೋರಿದಂತಾಗುತ್ತದೆ. ಆದ್ದರಿಂದ ಹಳೆ ಮಾದರಿಯ ಹ್ಯಾಟ್ ಬದಲು ತಲೆಯ ಮೇಲೆ ಗಟ್ಟಿಯಾಗಿ ನಿಲ್ಲುವಂತಹ ಎಲಾಸ್ಟಿಕ್ ಮಾದರಿಯ ಕ್ಯಾಪ್‌ಗಳನ್ನು ನೀಡಿದರೆ ಉತ್ತಮ ಎನ್ನುವುದು ಪೊಲೀಸ್ ಸಿಬ್ಬಂದಿಯ ಬಹುದಿನಗಳ ಬೇಡಿಕೆಯಾಗಿತ್ತು.


ಸ್ಲೋಚ್ ಕ್ಯಾಪ್ ಇತಿಹಾಸ: ಕರ್ನಾಟಕದಲ್ಲಿ ಪೊಲೀಸ್ ಕ್ಯಾಪ್‌ಗಳಿಗೆ ಶತಮಾನದ ಇತಿಹಾಸವಿದೆ. ಮೈಸೂರು ಮಹಾರಾಜರ ಅವಧಿಯಲ್ಲಿ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಕಿ ಅಂಗಿ, ಅರ್ಧ ಪ್ಯಾಂಟ್, ಬಣ್ಣದ ಪೇಟ ಮತ್ತು ಕಂದು ಬಣ್ಣದ ಬೂಟುಗಳನ್ನು ಧರಿಸಲಾಗುತ್ತಿತ್ತು. ರಾಜಪ್ರಭುತ್ವ ಅಂತ್ಯವಾದ ಬಳಿಕವೂ ಪೊಲೀಸರ ಸಾಂಪ್ರದಾಯಿಕ ಶೈಲಿಯ ಉಡುಗೆಯನ್ನು ಉಳಿಸಿಕೊಳ್ಳಲಾಯಿತು. ನಂತರದ ದಿನಗಳಲ್ಲಿ ಅರ್ಧ ಪ್ಯಾಂಟ್ ಬದಲು ಪೂರ್ಣ ಪ್ರಮಾಣದ ಪ್ಯಾಂಟ್ ಹಾಗೂ ನೀಲಿ ಮತ್ತು ಕೆಂಪು ಬಣ್ಣಗಳುಳ್ಳ ಟರ್ಬನ್ ಮಾದರಿಯ ಕ್ಯಾಪ್ ಪರಿಚಯಿಸಲಾಯಿತು. ಆದರೆ ರಾಜ್ಯ ಪೊಲೀಸ್ ಕಾನ್ಸ್‌ಟೇಬಲ್‌ಗಳು ಪ್ರಸ್ತುತ ಬಳಸುತ್ತಿರುವ ಸ್ಲೋಚ್ ಕ್ಯಾಪ್‌ಗಳನ್ನು ಆರ್.ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ (1980–83) ಆರಂಭಿಸಲಾಯಿತು. ಅಲ್ಲಿಯವರೆಗೂ ಇದ್ದ ನೀಲಿ ಬಣ್ಣದ ಕೆಂಪು ಪಟ್ಟಿಗಳಿದ್ದ ಟರ್ಬನ್‌ಗಳ ಬದಲಿಗೆ ಸ್ಲೋಚ್ ಕ್ಯಾಪ್‌ಗಳನ್ನು ದೈನಂದಿನ ಕರ್ತವ್ಯದ ಸಂದರ್ಭಗಳಿಗಾಗಿ ಪರಿಚಯಿಸಲಾಯಿತು. ಸದ್ಯ ಪರೇಡ್ ಮತ್ತಿತರ ಸಂದರ್ಭಗಳಲ್ಲಿ ಮಾತ್ರವೇ ಟರ್ಬನ್‌ಗಳನ್ನು ಬಳಸಲಾಗುತ್ತಿದೆ.

ಕುಕ್ಕರಹಳ್ಳಿ ಕೆರೆ ಪುನರ್ಜೀವನ ಪ್ರಸ್ತಾಪ

ಇಂಟ್ಯಾಕ್‌ಗೆ ನೀಡಲಾಗಿದ್ದ 63.80 ಲಕ್ಷದ ಡಿಪಿಆರ್ ಗುತ್ತಿಗೆ ರದ್ದು

■ ಡಿಪಿಆರ್ ತಯಾರಿಸಲು ಮತ್ತೆ ಹೊಸದಾಗಿ ಟೆಂಡರ್ ಕರೆಯಲು ನಿರ್ಧಾರ ■ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಈ ತೀರ್ಮಾನ

ಮೈಸೂರು,ಆ.6(ಎಂಟಿವೈ)–ಮೈಸೂರಿನ ಹೃದಯ ಭಾಗದಲ್ಲಿ ರುವ ಕುಕ್ಕರಹಳ್ಳಿ ಕೆರೆಯ ಪುನರುಜ್ಜೀವನ ಮಾಡುವುದಕ್ಕಾಗಿ 63.80 ಲಕ್ಷ ರೂ. ವೆಚ್ಚದಲ್ಲಿ ವಿಸ್ತøತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಈ ಹಿಂದೆ ದೆಹಲಿ ಮೂಲದ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಇಂಟ್ಯಾಕ್) ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾಗಿದ್ದ ಒಪ್ಪಂದವನ್ನು ಮೈಸೂರು ಜಿಲ್ಲಾಡಳಿತ ರದ್ದು ಮಾಡಿದ್ದು, ಈಗ ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಕರೆಯಲು ನಿರ್ಧರಿಸಿದೆ.



ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ವೈಜ್ಞಾನಿಕವಾಗಿ ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ 2024ರಲ್ಲಿ ಅಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದೆಹಲಿ ಮೂಲದ ಇಂಟ್ಯಾಕ್ ಸಂಸ್ಥೆಗೆ ಡಿಪಿಆರ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ಅಲ್ಲದೆ, ಅದಕ್ಕೆ 63.80 ಲಕ್ಷ ರೂ. ಪಾವತಿಸಲು ಮುಂದಾಗಿತ್ತು. ಆದರೆ, ಇದುವರೆಗೂ ಆ ಪ್ರಕ್ರಿಯೆ ಆರಂಭವಾಗಿರಲಿಲ್ಲ. ಈ ನಡುವೆ ಮೈಸೂರು ಜಿಲ್ಲಾಧಿಕಾರಿಯೂ ಬದಲಾದರು. ಈ ಹಿಂದಿನ ಮುಡಾ ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ವಾಗಿ ಬದಲಾಗಿದೆ. ಅಲ್ಲದೆ, ಇಂಟ್ಯಾಕ್ ಸಂಸ್ಥೆಗೆ ಡಿಪಿಆರ್ ರಚಿಸಲು ಯಾವುದೇ ಟೆಂಡರ್ ಕರೆಯದೇ 63.80 ಲಕ್ಷ ರೂ. ಮೊತ್ತದ ಹಣ ನೀಡಲು ಮುಂದಾಗಿರುವ ಕ್ರಮಕ್ಕೆ ಸಾರ್ವಜನಿಕ ವಲಯದಿಂದ ಆಕ್ಷೇಪ ವ್ಯಕ್ತವಾಗಿತ್ತು. ಕೆಲವರು ಲೋಕಾಯುಕ್ತಕ್ಕೂ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಇದೀಗ ಡಿಪಿಆರ್ ಸಿದ್ಧಪಡಿಸಲು ಇಂಟ್ಯಾಕ್ ಸಂಸ್ಥೆಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದ ರದ್ದಾಗಿದ್ದು, ಡಿಪಿಆರ್ ತಯಾರಿಸಲು ಟೆಂಡರ್ ಕರೆಯಲಾಗುತ್ತದೆ.

ಆ ಟೆಂಡರ್‌ನಲ್ಲಿ ಇಂಟ್ಯಾಕ್ ಸಂಸ್ಥೆ ಭಾಗವಹಿಸಬಹುದಾಗಿದೆ. ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಯೊಂದಿಗೆ ತಯಾರಿಸುವ ಡಿಪಿಆರ್‌ನಲ್ಲಿ 22 ಕಿ.ಮೀ. ವ್ಯಾಪ್ತಿಯ ದಿವಾನ್ ಪೂರ್ಣಯ್ಯ ಕಾಲುವೆ ಹಾಗೂ ಲಿಂಗಾಂಬುದಿ ಕೆರೆ ಅಭಿವೃದ್ಧಿಗೂ ಕೈಗೊಳ್ಳಬೇಕಾದ ಕ್ರಮ ಕುರಿತ ನಕ್ಷೆ ಸಿದ್ಧಪಡಿಸಿ ನೀಡಲು ಸಲಹೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಒಪ್ಪಂದದಂತೆ ಇಂಟ್ಯಾಕ್ ಸಂಸ್ಥೆ ಡ್ರೋನ್ ಮೂಲಕ ಸಮೀಕ್ಷೆ ನಡೆಸಿ ಪ್ರಾಥಮಿಕ ವರದಿಯನ್ನು ಸಲ್ಲಿಸಿತ್ತು. ಆದರೆ, ಟೆಂಡರ್ ಕರೆಯದೇ ದೊಡ್ಡ ಮೊತ್ತದ ಯೋಜನೆಯನ್ನು ಖಾಸಗಿ ಸಂಸ್ಥೆಯೊಂದರೊಂದಿಗೆ ಕೇವಲ ಒಪ್ಪಂದದ ಮೂಲಕ ನೇರವಾಗಿ ನೀಡಿರುವ ಔಚಿತ್ಯವನ್ನು ಪರಿಸರವಾದಿಗಳು ಪ್ರಶ್ನಿಸಿದರು.

ಅಲ್ಲದೆ, ಸಾರ್ವಜನಿಕರ ಹಣ ಪೋಲಾಗುವ ಮತ್ತು ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರಕ್ಯೂರ್‌ಮೆಂಟ್ಸ್ (ಕೆಟಿಪಿಪಿ) ಕಾಯ್ದೆ ಉಲ್ಲಂಘನೆಯಾಗಿರುವ ಬಗ್ಗೆ ಆಕ್ಷೇಪ ಕೇಳಿ ಬಂದಿತ್ತು. ಈ ಒಪ್ಪಂದದಿಂದ ಎಂಡಿಎಗೆ ಆರ್ಥಿಕ ನಷ್ಟ ಉಂಟಾಗುವ ಆತಂಕವೂ ಸಾರ್ವಜನಿಕ ವಲಯದಿಂದ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಒಪ್ಪಂದ ರದ್ದಾಗಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಈ ಹಿಂದೆ ಮಾಡಿಕೊಳ್ಳಲಾಗಿದ್ದ ಒಪ್ಪಂದದಂತೆ ಡಿಪಿಆರ್‌ನಲ್ಲಿ ಎರಡೂ ಕೆರೆಗಳ ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ಮೌಲ್ಯಮಾಪನ, ಒಳಹರಿವಿನ ಮಾರ್ಗಗಳು, ರಾಜಕಾಲುವೆ ಒತ್ತುವರಿ, ರಾಜಕಾಲುವೆಯಲ್ಲಿ ಹೂಳು ತೆರವು, ಕೆರೆ ಭಾಗದ ಇಳಿಜಾರು ಪ್ರದೇಶ ಮತ್ತು ಕೆರೆ ಪರಿಸರದಲ್ಲಿರುವ ಸ್ಥಳೀಯ ಸಸ್ಯ ಮತ್ತು ಪ್ರಾಣಿಗಳ ಮಾಹಿತಿ ವಿವರ ಒಳಗೊಂಡು ವರದಿ ನೀಡಬೇಕಾಗಿತ್ತು.

ಒತ್ತುವರಿಗೆ ತೆರವು ಅನಿವಾರ್ಯ: ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ ಅವರು ದಿವಾನ್ ಪೂರ್ಣಯ್ಯ ಕಾಲುವೆಯ ಉದ್ದಕ್ಕೂ ಒತ್ತುವರಿ ತೆರವು ಮಾಡಬೇಕಾದ ಅನಿವಾರ್ಯತೆ ಇದೆ. ಒತ್ತುವರಿಯಿಂದಾಗಿ ಮಳೆಗಾಲದಲ್ಲಿ ನೀರು ಕೆರೆಗೆ ಸರಾಗವಾಗಿ ಹರಿದು ಹೋಗದೇ ತಗ್ಗು ಪ್ರದೇಶಗಳಿಗೆ ನುಗ್ಗುತ್ತಿದೆ. ಇದರಿಂದ ಕೆಲವೆಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರಿ ಮಳೆ ಬಂದರೆ ಕುಕ್ಕರಹಳ್ಳಿ ಕೆರೆಯ ಪಕ್ಕದಲ್ಲಿರುವ ಸರಸ್ವತಿಪುರಂ ಪ್ರದೇಶದಲ್ಲಿ ಕಾಲುವೆ ಉದ್ದಕ್ಕೂ ಪ್ರವಾಹದ ಅಪಾಯ ಎದುರಾಗುತ್ತದೆ. ಈ ಭಾಗದಲ್ಲಿ ಒತ್ತುವರಿ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕುಕ್ಕರಹಳ್ಳಿ ಕೆರೆ ಪುನರುಜ್ಜೀವನ ಹಾಗೂ ರಾಜಕಾಲುವೆ ಒತ್ತುವರಿ ತೆರವು ಮಾಡುವುದಕ್ಕೆ ಸಂಬಂಧಿಸಿದಂತೆ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಒತ್ತುವರಿ ತೆರವು ಮಾಡಿದರೆ, ಸಮಸ್ಯೆ ಬಗೆಹರಿಸಬಹುದಾಗಿದೆ. ಜಿಲ್ಲಾಡಳಿತ ತ್ವರಿತಗತಿಯಲ್ಲಿ ಟೆಂಡರ್ ಕರೆದು ಡಿಪಿಆರ್ ಸಿದ್ಧಪಡಿಸಬೇಕು. ಆ ಮೂಲಕ ಕೆರೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಇಂಟ್ಯಾಕ್ ಸಂಸ್ಥೆ ಈಗಾಗಲೇ ಮಧ್ಯಂತರ ವರದಿ ನೀಡಿದೆ. ಡ್ರೋನ್ ಸಮೀಕ್ಷೆ ಮೂಲಕ ರಾಜಕಾಲುವೆ ಒತ್ತುವರಿ ಮಾಹಿತಿ ಸಂಗ್ರಹಿಸಿದೆ. ಈ ಹಿನ್ನೆಲೆಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿ, ಉಂಟಾಗಬಹುದಾದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಒಪ್ಪಂದ ರದ್ದು ಮಾಡಿ, ಹೊಸದಾಗಿ ಟೆಂಡರ್



“ಕುಕ್ಕರಹಳ್ಳಿ ಕೆರೆ ಪುನರುಜ್ಜೀವನ ಹಾಗೂ ರಾಜಕಾಲುವೆ ಒತ್ತುವರಿ ತೆರವು ಕುರಿತಂತೆ ಡಿಪಿಆರ್ ತಯಾರಿಸಲು ಈ ಹಿಂದೆ ಇಂಟ್ಯಾಕ್ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾಗಿದ್ದ ಒಪ್ಪಂದ ರದ್ದು ಮಾಡಲಾಗಿದೆ. ಈ ಕುರಿತು ಶೀಘ್ರವೇ ಟೆಂಡರ್ ಕರೆಯಲಾಗುತ್ತದೆ. ನಿಯಮಾವಳಿಯಂತೆ ಟೆಂಡರ್ ಕರೆಯದೇ ದೊಡ್ಡ ಮೊತ್ತದ ಕಾಮಗಾರಿಯನ್ನ ಖಾಸಗಿ ಸಂಸ್ಥೆಗೆ ನೀಡುವಂತಿಲ್ಲ. ಆ ಕಾರಣದಿಂದಲೇ ಇಂಟ್ಯಾಕ್ ಸಂಸ್ಥೆಯೊಂದಿಗೆ ಈ ಹಿಂದೆ ಮಾಡಿಕೊಳ್ಳಲಾಗಿದ್ದ ಒಪ್ಪಂದ ರದ್ದು ಮಾಡಲಾಗಿದೆ. ಹೊಸದಾಗಿ ಟೆಂಡರ್ ಕರೆಯಲಾಗುತ್ತಿದ್ದು, ಇದರಲ್ಲಿ ಇಂಟ್ಯಾಕ್ ಸಂಸ್ಥೆಯೂ ಪಾಲ್ಗೊಳ್ಳಬಹುದಾಗಿದೆ.

–ಜಿ.ಲಕ್ಷ್ಮಿಕಾಂತ ರೆಡ್ಡಿ, ಮೈಸೂರು ಜಿಲ್ಲಾಧಿಕಾರಿ